
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

04 ಜೂನ್ 2014 ಪುಟ 16 ರೂ. 15/-


ಯು.ಆರ್.ಎ
ಎಂ.ಜೆ.ಅಕ್ಬರ್
ರವೀಂದ್ರ ರೇಷ್ಮೆ
ಇತ್ಯಾದಿ




ಮೋದಿಯ ನೆರಳು

ಷಾ ಎಂಬ ಉರುಳು


ದಕ್ಷಿಣ ಕನ್ನಡ
ಅಭಯನ [illegible]ಾನ್ಗಡಿಗಳು






ದಾವಣಗೆರೆ
ತೇಲಿತು ಕಮಲ
ಮುಳುಗಿತು ಕೈ

ಕಳಚಿದ
ಹಳೆಯ ಕೊಂಡಿ
ಡಾ.ಅಮ್ಮೆಂಬಳ ಬಾಳಪ್ಪ



ರಣಚಂಡಿ ಇಶ್ರತ್





ಅನಂತಮೂರ್ತಿ, ಎಂ.ಜೆ.ಅಕ್ಬರ್, ರವೀಂದ್ರ ರೇಷ್ಮೆ ಇತ್ಯಾದಿ

'ಈ ವ್ಯಕ್ತಿಗೆ (ನರೇಂದ್ರ ಮೋದಿಗೆ) ನಿಷಾನ್-ಇ-ಪಾಕಿಸ್ತಾನ್ ಪ್ರಶಸ್ತಿಯನ್ನು ಕೊಡಬೇಕು. ಧಾರ್ಮಿಕ ನಂಬುಗೆಗಳೇನೇ ಇದ್ದರೂ ಎಲ್ಲಾ ನಾಗರಿಕರೂ ಸಮಾನರು ಎಂಬ ಭಾರತವೆಂಬ ರಾಷ್ಟ್ರದ ಚಿಂತನೆಯನ್ನೇ ಮೋದಿ ನಾಶ ಮಾಡುತ್ತಿದ್ದಾರೆ. ಗೋಧ್ರಾದಲ್ಲಿ ಈತ ಆರಂಭಿಸಿದ ಸಾಮೂಹಿಕ ನರಮೇಧಕ್ಕೆ ಮುಂಚೆ ದಕ್ಷಿಣ ಏಷ್ಯಾದ ಕಪ್ಪು ಚುಕ್ಕೆಯಾಗಿ ಪಾಕಿಸ್ತಾನವನ್ನು ಪರಿಗಣಿಸುತ್ತಿದ್ದರು. ಆದರೆ ಕೆಲವೇ ದಿನಗಳಲ್ಲಿ ಮೋದಿಯು ಪಾಕಿಸ್ತಾನವನ್ನು ಆ ಜಾಗದಿಂದ ತೆಗೆದು ಹಾಕಿ ಗುಜರಾತ್‌ಅನ್ನು ಅಲ್ಲಿಟ್ಟರು. ಅದಕ್ಕಾಗಿ ಧನ್ಯವಾದ ಅರ್ಪಿಸಿ ಪಾಕಿಸ್ತಾನದ ಅಧ್ಯಕ್ಷ ಪರ್ವೇಜ್ ಮುಷರಫ್ ಇನ್ನೂ ಪತ್ರ ಕಳಿಸಿರದೇ ಇದ್ದಲ್ಲಿ ಆತ ಒಂದು ಅವಕಾಶವನ್ನು ಕಳೆದುಕೊಂಡಿದ್ದಾರೆ ಅಷ್ಟೇ.'


'ಯಾರು ಏನೇ ಹೇಳಲಿ, ಸುಪ್ರೀಂಕೋರ್ಟ್ ಗುಜರಾತ್‌ನ ನರಮೇಧದ ಕುರಿತಾಗಿ ನರೇಂದ್ರ ಮೋದಿಯನ್ನು ದೋಷಿಯೆಂದು ಪರಿಗಣಿಸಿಲ್ಲ. ಹಾಗೆ ನೋಡಿದರೆ, ಹಿಂದೆಂದೂ ಇಲ್ಲದಷ್ಟು ಜವಾಬ್ದಾರಿ ಮತ್ತು ಬದ್ಧತೆಯಿಂದ ನ್ಯಾಯಾಂಗವು ಗುಜರಾತ್ ನರಮೇಧಕ್ಕೆ ಕಾರಣರಾಗಿರುವವರನ್ನು ಶಿಕ್ಷಿಸಿದೆ. ಬೇರೆ ಇನ್ನಾವ ಕೋಮುದಂಗೆಯಲ್ಲಿ ಹೀಗಾಗಿತ್ತು ಹೇಳಿ? ಮೇಲಾಗಿ ಇಂದು ಮೋದಿ ಅಭಿವೃದ್ಧಿ ಮತ್ತು ಬಡತನ ಕುರಿತಾಗಿ ಮಾತನಾಡುತ್ತಿದ್ದಾರೆಂಬುದನ್ನು ನಾವು ಗಮನಿಸಬೇಕು.'


ಮೊದಲನೆಯ ಮಾತನ್ನು ಹೇಳಿದ್ದು ಪತ್ರಕರ್ತ ಎಂ.ಜೆ.ಅಕ್ಬರ್. ಎರಡನೆಯ ಮಾತನ್ನು ಹೇಳಿದ್ದು ಮೋದಿ ಅಭಿಮಾನಿ ಎಂ.ಜೆ.ಅಕ್ಬರ್. ಗೊಂದಲ ಬೇಡ. ಇಬ್ಬರೂ ಒಬ್ಬರೇ. ಈಗ ಇದೇ ಎಂ.ಜೆ.ಅಕ್ಬರ್ ಅವರು ಬಿಜೆಪಿಯ ವಕ್ತಾರರೂ ಆಗಿದ್ದಾರೆ. ಅವರು ಈ ಹಿಂದೆ ಬರೆದ ಇನ್ನೂ ಒಂದು ಮಾತನ್ನೂ ಇಲ್ಲಿ ನೆನೆಯೋಣ.


ಇಂಗ್ಲಿಷ್ ಪತ್ರಿಕೋದ್ಯಮ ಬಲ್ಲ ಎಲ್ಲರಿಗೂ ಎಂ.ಜೆ.ಅಕ್ಬರ್ ಗೊತ್ತು. ಅರುಣ್ ಶೌರಿಯಂತೆಯೇ ಈತನೂ ಹೊಸದಾಗಿ ಪತ್ರಿಕೋದ್ಯಮಕ್ಕೆ ಬರುತ್ತಿದ್ದ ಯುವಕ/ಯುವತಿಯರಿಗೆ ಆದರ್ಶ ಪತ್ರಕರ್ತನಾಗಿದ್ದ. ನಂತರದ ಕಾಲದಲ್ಲಿ ಈ ಜಾಗಕ್ಕೆ ರಾಜ್‌ದೀಪ್ ಸರ್ದೇಸಾಯಿ, ಬರ್ಕಾ ದತ್, ತರುಣ್ ತೇಜ್‌ಪಾಲ್ ಇತ್ಯಾದಿಗಳು ಬಂದರು. ಅರ್ನಾಬ್ ಗೋಸ್ವಾಮಿಯನ್ನು ಯಾರೂ ಆದರ್ಶ ವ್ಯಕ್ತಿಯೆಂದು ಪರಿಗಣಿಸುವುದು ಸಾಧ್ಯ. ಆ ಎತ್ತರಕ್ಕೆ ಯಾರೂ ಏರುವುದು ಕಷ್ಟ. ಏಕೆಂದರೆ, ಒಂದು ಕಾಲದಲ್ಲಿ ಒಂದು ಪ್ರಪಂಚದಲ್ಲಿ ಒಬ್ಬನೇ ಅರ್ನಾಬ್ ಇರುವುದು ಸಾಧ್ಯ. ಆತನ ಸುತ್ತ ಚರ್ಚೆ ನಡೆಸಲು ಕುಂತಿರುವ ಎಂಟು ಪ್ಯಾನೆಲಿಸ್ಟ್‌ಗಳೆಲ್ಲಾ ಸೇರಿ ಮಾತನಾಡುವುದರ ಎರಡು ಪಟ್ಟು ಮಾತುಗಳನ್ನು ಒಬ್ಬನೇ ಆಡುತ್ತಾನಲ್ಲವೇ? ಪ್ರಶ್ನೆ, ಸಂದೇಹ, ಪ್ಯಾನೆಲ್‌ನಲ್ಲಿರುವವರು ನೀಡಬೇಕಾದ ಉತ್ತರದ ಚೌಕಟ್ಟು, 'ಈ ದೇಶದ ಜನತೆ'ಗಿರುವ ಆತಂಕ, ಪ್ಯಾನೆಲಿಸ್ಟ್‌ಗಳು ಯಾವ ಉತ್ತರವನ್ನು ನೀಡಬಾರದು ಎಂಬ ಪೂರ್ವ ಷರತ್ತು ಮತ್ತು ಉತ್ತರ ನೀಡಿದ ನಂತರ ಅದರ ಬಗ್ಗೆ ಖಂಡತುಂಡ ವಿಮರ್ಶೆ, ತೀರ್ಪು ಮತ್ತು ಜನತೆಯ ಅಭಿಪ್ರಾಯ ಇಷ್ಟೆಲ್ಲವನ್ನೂ ನೀಡಬೇಕಾದ ಹೊಣೆಗಾರಿಕೆ ಅರ್ನಾಬ್ ಗೋಸ್ವಾಮಿಯ ಮೇಲೆ ಇರುತ್ತದೆ. ಹಾಗಾಗಿ ಒಟ್ಟು ಚರ್ಚೆಯ 75% ಆತನೇ ಆಡಬೇಕಾಗುತ್ತದೆ. ಇನ್ನೊಬ್ಬ ಅರ್ನಾಬ್ ಇದ್ದರೆ ಅದಕ್ಕೆ ಸಮಯ ಹೊಂದಿಸುವುದು ಕಷ್ಟ.

ಈ ರೀತಿಯ ಪತ್ರಿಕೋದ್ಯಮ ಮತ್ತು ಚಾನೆಲೋದ್ಯಮ ನಡೆಯುತ್ತಿರುವ ಈ ಕಾಲಕ್ಕೆ 35-40 ವರ್ಷಗಳ ಹಿಂದೆಯೇ ಎಂ.ಜೆ.ಅಕ್ಬರ್ ಹೆಸರುವಾಸಿಯಾಗಿದ್ದರು. 'ಸಂಡೇ' ಪತ್ರಿಕೆಯಲ್ಲಿ ಮೊದಲು ಅವರು ವಹಿಸಿದ ಪಾತ್ರ ಪತ್ರಿಕೋದ್ಯಮದ ಕುರಿತ ನಿರೀಕ್ಷೆಗಳಿಗನುಗುಣವಾಗಿತ್ತು. ಆದಾದನಂತರ 'ದಿ ಟೆಲಿಗ್ರಾಫ್' ಪತ್ರಿಕೆಯ ಆರಂಭ, ಅದು ಹಲವು ಪ್ರಥಮಗಳನ್ನು ಸಾಧಿಸಿದ ಎಲ್ಲದರಲ್ಲೂ ಅಕ್ಬರ್‌ರ ಪಾತ್ರವಿತ್ತು. ಅನಂತರ ಅವರ ಪುಸ್ತಕ 'ಇಂಡಿಯಾ: ದಿ ಸೀಜ್ ವಿತಿನ್' ಭಾರತ ಮತ್ತು ಅದರ ನೆರೆಹೊರೆಯಲ್ಲಿನ ದೇಶಗಳ ಕುರಿತು ಒಂದು ತುಲನಾತ್ಮಕ ಒಳನೋಟವನ್ನು ಕೊಟ್ಟಿತ್ತು. ಅದು ಸ್ವಾತಂತ್ರ್ಯೋತ್ತರ ಭಾರತದ ಬೆಳವಣಿಗೆಯ ಸಕಾರಾತ್ಮಕ ಅಂಶಗಳಿಗೆ ಸ್ವಾತಂತ್ರ್ಯ ಪೂರ್ವದ ನಾಯಕರುಗಳ ಕೊಡುಗೆಯನ್ನು ಬಿಂಬಿಸುತ್ತಿತ್ತು. ಆ ನಂತರ ನೆಹರೂರ ಕುರಿತ ಒಂದು ಜೀವನ ಚಿತ್ರವನ್ನೂ ಅಕ್ಬರ್ ರಚಿಸಿದರು.

ಸಹಜವಾಗಿ ಮೇಲಿನ ಅಂಶಗಳು ಅಕ್ಬರ್‌ರನ್ನು ಭಾರತದ ವೈವಿಧ್ಯತೆ, ವಿಶೇಷತೆಗಳನ್ನು ಒಂದು ರಾಷ್ಟ್ರೀಯವಾದಿ ದೃಷ್ಟಿಕೋನದಿಂದ ನೋಡುವ ಓರ್ವ ಚಿಂತಕನೆಂಬಂತೆ ನಮ್ಮ ಮುಂದೆ ನಿಲ್ಲಿಸುತ್ತವೆ. ಇವೆಲ್ಲವುಗಳ ತಾರ್ಕಿಕ ಮುಂದುವರಿಕೆಯಾಗಿ ಆತ ಕಾಂಗ್ರೆಸ್ ಪಕ್ಷದ ಒಳಗಿನವನೂ ಆಗಿದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ 1984ರ ಸಿಖ್ ನರಮೇಧದ ನಾಲ್ಕೈದು ವರ್ಷಗಳಲ್ಲಿ ರಾಜೀವ್ ಗಾಂಧಿಗೆ ಹತ್ತಿರದವನಾಗಿದ್ದು ಹಲವರಿಗೆ ಬೇಸರ ತಂದಿತ್ತು. ನಂತರದ ಚುನಾವಣೆಯಲ್ಲಿ ಬಿಹಾರದ ಕಿಷನ್‌ಗಂಜ್‌ನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಲೋಕಸಭಾ ಸದಸ್ಯನಾಗಿ ಸಂಸತ್ ಪ್ರವೇಶಿಸಿದ್ದು ಇನ್ನೂ ಆಶ್ಚರ್ಯ ತಂದಿತ್ತು. ಈ ಅಚ್ಚರಿ ಏಕೆಂದರೆ ಕೋಮು ಗಲಭೆಗಳು ಎಂ.ಜೆ.ಅಕ್ಬರ್‌ರ ಬರಹಗಳಲ್ಲಿ ಮತ್ತೆ ಮತ್ತೆ ಬಂದ ಒಂದು ಪ್ರಮುಖ ಸಂಗತಿಯಾಗಿತ್ತು. ಆತನ ಪುಸ್ತಕ 'ರಯಟ್ ಆಫ್ಟರ್ ರಯಟ್ (Riot After Riot)' ಭಾರತವನ್ನು ಮತ್ತೆ ಮತ್ತೆ ಕಾಡುತ್ತಿದ್ದ ಕೋಮು ಉನ್ಮಾದದ ವಿರುದ್ಧದ ಆತಂಕ ಮತ್ತು ಆಕ್ರೋಶದ ಅಭಿವ್ಯಕ್ತಿಯಾಗಿತ್ತು. ಅದರಲ್ಲಿ ಕೋಮು ಗಲಭೆಗಳು ಯಾವ ರೀತಿ ಸಂಭವಿಸುತ್ತವೆ, ಅದರಲ್ಲಿ







ಸ್ಥಳೀಯರ ಪಾತ್ರವೇನಾಗಿರುತ್ತದೆ, ಹೊರಗಿನವರ ಪಾತ್ರವೇನಾಗಿರುತ್ತದೆ, ಅವಕಾಶವಾದಿ ರಾಜಕಾರಣದ ಪಾತ್ರವೇನಾಗಿರುತ್ತದೆ ಎಂಬೆಲ್ಲದರ ಕುರಿತು ಅಕ್ಬರ್ ಬರೆದಿದ್ದರು. 'ಅನ್ಯ' ಕೋಮಿನವರು ಯಾವ ರೀತಿ ಬೇಟೆಯಾಡಲ್ಪಡುತ್ತಾರೆ, ಅದಕ್ಕಾಗಿ ಇತಿಹಾಸ ಪುರಾಣಗಳನ್ನೆಲ್ಲಾ ಕೆದಕುವ ಪರಿ ಎಂಥದ್ದು ಇತ್ಯಾದಿಗಳು ಅದರೊಳಗೆ ಸವಿವರವಾಗಿ ಚಿತ್ರಿತವಾಗಿದ್ದವು. ಈ ಪುಸ್ತಕದಲ್ಲಿ ಅಕ್ಬರ್ ಕಾಂಗ್ರೆಸ್ ಮತ್ತು ಆರೆಸ್ಸೆಸ್‌ಗಳೆರಡನ್ನೂ ಟೀಕಿಸಿದ್ದರು. ಅಷ್ಟರಮಟ್ಟಿಗೆ ಅವರೊಳಗೆ ಒಬ್ಬ ಪತ್ರಕರ್ತ ಮತ್ತು ಸ್ವತಂತ್ರ ಚಿಂತಕ ಎಚ್ಚರವಾಗಿದ್ದ.

1991ರಲ್ಲಿ ಎಂಪಿ ಚುನಾವಣೆಯಲ್ಲಿ ಸೋತ ನಂತರ ಅಕ್ಬರ್ ಮತ್ತೆ ಪತ್ರಿಕೋದ್ಯಮಕ್ಕೆ ಮರಳಿದರು. ಹೊಸದಾಗಿ ಆರಂಭವಾಗಿದ್ದ ಏಷ್ಯನ್ ಏಜ್ ಪತ್ರಿಕೆಯ ಸಂಪಾದಕರೂ ಆದರು. ಡೆಕ್ಕನ್ ಕ್ರಾನಿಕಲ್, ಇಂಡಿಯಾ ಟುಡೇ, ಹೆಡ್‌ಲೈನ್ಸ್ ಟುಡೇ ಚಾನೆಲ್ ಇವುಗಳಲ್ಲೆಲ್ಲಾ ಪ್ರಮುಖ ಪಾತ್ರವನ್ನು ಕೆಲ ಕಾಲ ಅಕ್ಬರ್ ವಹಿಸಿದರು. ಹೆಚ್ಚನಂಶ ಒಬ್ಬ ಹಿರಿಯ ಪತ್ರಕರ್ತನಾಗಿ ತನ್ನ ಪಾತ್ರ ನಿರ್ವಹಿಸುತ್ತಾ ಇದ್ದರು. ಕೆಲವು ಪತ್ರಿಕೆಗಳಲ್ಲಿ ಅವರ ಅಂಕಣಗಳೂ ಬರುತ್ತಿದ್ದವು. 2002ರ ಗುಜರಾತ್ ನರಮೇಧದ ನಂತರ ಹಲವು ತೀಕ್ಷ್ಣ ಬರಹಗಳನ್ನ ಅಕ್ಬರ್ ಬರೆದರು. 2010ರಲ್ಲಿ 'ದಿ ಸಂಡೇ ಗಾರ್ಡಿಯನ್' ಎಂಬ ಪತ್ರಿಕೆಯನ್ನು ಆರಂಭಿಸಿ ಅದರ ಪ್ರಧಾನ ಸಂಪಾದಕರಾಗಿದ್ದಾರೆ.

ಆದರೆ ಅವರು ಈಗ ಸುದ್ದಿಯಲ್ಲಿರುವುದು ಬೇರೆ ಕಾರಣಕ್ಕೆ. ಅವರೀಗ ಬಿಜೆಪಿಯ ವಕ್ತಾರರು. ಅಥವಾ ಹೀಗೂ ಹೇಳಬಹುದೇನೋ? ಅವರು ಮೋದಿತ್ವದ ಸಮಯದಲ್ಲಿ ಮೋದಿಯ ವಕ್ತಾರರು. ರಾಜೀವ್ ಗಾಂಧಿಯ ಕೆಟ್ಟ ಕಾಲದಲ್ಲಿ ಅಕ್ಬರ್ ಅವರ ಅಧಿಕೃತ ವಕ್ತಾರರಾಗಿದ್ದರು. ಈ ಮಟ್ಟದ ಪಕ್ಷಾಂತರಕ್ಕೆ ಕಾರಣವೇನು ಎಂದು ಅವರೇ ಸ್ವತಃ ಬರೆದುಕೊಂಡಿದ್ದಾರೆ. ಅದನ್ನಿಟ್ಟುಕೊಂಡು ರಾಜ್‌ದೀಪ್ ಸರ್ದೇಸಾಯಿ ಸಿಎನ್‌ಎನ್-ಐಬಿಎನ್‌ನಲ್ಲಿ ಅಕ್ಬರ್‌ರ ಸಂದರ್ಶನವನ್ನೂ ನಡೆಸಿದರು. ಕೇಳಬೇಕಾದ ಪ್ರಶ್ನೆಗಳನ್ನೂ ಕೇಳಿದರು. ಅಂತಹ ಪ್ರಶ್ನೆಗಳನ್ನು ರಾಜ್‌ದೀಪ್ ಕೇಳಬಾರದಿತ್ತು ಎಂಬುದರ ಬಗ್ಗೆಯೇ ಅತ್ಯಂತ ಹೆಚ್ಚಿನ ಚರ್ಚೆ ಸಾಮಾಜಿಕ ಜಾಲತಾಣಗಳಲ್ಲಿ ನಡೆದಿದೆ.

ಅದೇನೇ ಇರಲಿ, ಅಕ್ಬರ್ ಒಂದು ಸಣ್ಣ ತುಂಡು ಅಷ್ಟೇ. ಇದೊಂದು ವಿದ್ಯಮಾನ. ಅಕ್ಬರ್‌ರ ತದ್ರೂಪಿಗಳು ಅಥವಾ ಅವರ ತುಂಡುಗಳಂತಿರುವವರು ಕರ್ನಾಟಕದಲ್ಲೂ ಇದ್ದಾರೆ. ಬಹುಕಾಲ ಲಂಕೇಶರ ಒಡನಾಡಿ ಮತ್ತು ಲಂಕೇಶ್ ಪತ್ರಿಕೆಯ ಮುಖ್ಯ ವರದಿಗಾರರಾಗಿದ್ದ ರವೀಂದ್ರ ರೇಷ್ಮೆಯವರು ಈಗ ಎಲ್ಲಿಗೆ ಬಂದು ತಲುಪಿದ್ದಾರೆ ಎಂಬುದು ಟಿವಿ ಚರ್ಚೆಗಳಲ್ಲಿ ಅವರ ಮಾತುಗಳನ್ನು ಕೇಳಿದವರಿಗೆಲ್ಲರಿಗೂ ಗೊತ್ತಿದೆ. ಶ್ರೀರಾಮುಲು ಅಧಿಕೃತವಾಗಿ ಬಿಎಸ್‌ಆರ್ ಪಕ್ಷವನ್ನು ಬಿಜೆಪಿಯಲ್ಲಿ ವಿಲೀನಗೊಳಿಸಲು ಕೆಲವು ತಾಂತ್ರಿಕ ತೊಡಕುಗಳಿದ್ದವು. ಅದನ್ನು ಬಿಟ್ಟರೆ ಬಿಎಸ್‌ಆರ್ ಪಕ್ಷದ ಅಧಿಕೃತ ವಕ್ತಾರರಾದ ರೇಷ್ಮೆ, ಅನಧಿಕೃತವಾಗಿ ಮೋದಿಯ ವಕ್ತಾರರಾಗುತ್ತಿರುವುದು ಸ್ಪಷ್ಟವಿದೆ. ಅದೇ ರೀತಿ ಲಂಕೇಶ್ ಪತ್ರಿಕೆಯ ಬಳಗದಲ್ಲಿದ್ದ ಮಹಾಬಲಮೂರ್ತಿ ಕೊಡ್ಲೆಕೆರೆ ಸಹಾ ನಮೋ ಬ್ರಿಗೇಡ್‌ನಲ್ಲೇ ಇದ್ದಾರೆ. ಅಧಿಕೃತವಾಗಿ ಸಂಘಪರಿವಾರದ ಯಾವ ತುಂಡು ಸಂಘಟನೆಯಲ್ಲಿ ಎಂದು ನೋಡಬೇಕು ಅಷ್ಟೇ.

ಇವರೆಲ್ಲಾ ಇದ್ದದ್ದೇ ಹೀಗೆ. ಅವರೊಳಗಿನ ಅವಕಾಶವಾದವು ಆ ಕಾಲದಲ್ಲಿ ಪ್ರಬಲವಾಗಿದ್ದ ಶಕ್ತಿಯ ಜೊತೆಗೆ ಇರುವಂತೆ ಮಾಡಿತ್ತು; ಈ ಕಾಲದಲ್ಲಿ, ಈ ಕಾಲದ ಪ್ರಬಲ ಶಕ್ತಿಯ ಜೊತೆಗೆ ಇರಬಯಸಿದ್ದಾರೆ ಅಷ್ಟೇ ಎಂಬ ಅಭಿಪ್ರಾಯ ಹಲವರಲ್ಲಿದೆ. ಇಲ್ಲದಿದ್ದರೆ ಎಂ.ಜೆ.ಅಕ್ಬರ್ ರಾಜೀವ್ ಗಾಂಧಿಯ ಜೊತೆಗೂ ಇರುತ್ತಿರಲಿಲ್ಲ; ಇರಬಾರದಿತ್ತು ಎಂಬುದು ಈ ಅಭಿಪ್ರಾಯದ ಹಿಂದಿನ ತರ್ಕ. ಅದೇನೇ ಇದ್ದರೂ, ನರೇಂದ್ರ ಮೋದಿ ಇನ್ನು ಮುಂದೆ ನಡೆಸಲಿರುವ 'ಅಭಿವೃದ್ಧಿ', 'ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವುದು', 'ಬಡವರ ಉದ್ಧಾರ', 'ಪ್ರಜಾತಂತ್ರದ ಶ್ರೇಷ್ಠತೆ' ಇತ್ಯಾದಿ ಮೋಡಿಗಳಿಗೆ ಬಲಿಯಾಗಲಿರುವವರಲ್ಲಿ ಯಾರ್ಯಾರಿದ್ದಾರೆ ಎಂಬುದನ್ನು ನಾವಿನ್ನೂ ಕಾದು ನೋಡಬೇಕಿದೆ.

ಪರಿಸ್ಥಿತಿ ಹೀಗಿರುವಾಗ ಅನಂತಮೂರ್ತಿಯ[...] ನಿಲುವು ನಮಗೆ ಮುಖ್ಯವಾಗುತ್ತದೆ. ಹಲವಾರು [...] ಎಡಬಿಡಂಗಿ ನಿಲುವುಗಳನ್ನು ಅನಂತಮೂರ್ತಿಯ[...] ತೆಗೆದುಕೊಂಡಿದ್ದಾರೆ; ಅದಕ್ಕಾಗಿಯೇ ಭೈರಪ್ಪರಂತಹ [...] 'ಅನಂತಮೂರ್ತಿ ಮೋದಿಗೆ ಹಾರ ಹಾಕುತ್ತಾರೆ' [...] ಟೀಕಿಸಲು ಸಾಧ್ಯವಾಗಿದೆ. ಇದು ಎಡಬಿಡಂಗಿತನ[...] ರಾಮಕೃಷ್ಣ ಹೆಗಡೆ, ವಾಜಪೇಯಿ ಇತ್ಯಾದಿಗಳಲ್ಲಿ [...] ಮೆಚ್ಚುತ್ತಿದ್ದ ಸಂಗತಿಗಳು ಇದ್ದವು; ಒಬ್ಬ ಬರಹಗಾ[...] ತನ್ನ ಅಭಿಪ್ರಾಯ ಮತ್ತು ನಡೆಗೆ ಕಾರಣಗಳಿದ್ದವು [...] ಸಮಜಾಯಿಷಿಗಳು ಅನಂತಮೂರ್ತಿಯವರ ಕಡೆಯಿ[...] ಬಂದಿವೆ. ಭ್ರಷ್ಟಾಚಾರ ಮಾಡದೇ ಪ್ರಾಮಾಣಿಕನಾಗಿ ಕಾ[...] ಆದರೆ ಫ್ಯಾಸಿಸ್ಟ್ ಆದ ಮೋದಿಗಿಂತ ಭ್ರಷ್ಟ ಯಡಿಯ[...] ಕಡಿಮೆ ಅಪಾಯಕಾರಿ ಎನ್ನುವ ನಿಲುವು ಅವರದ್ದು. ಇ[...] ನಿಲುವುಗಳು ಅವರನ್ನು ಮೆಚ್ಚುವ ಹಲವರಲ್ಲಿ ಕಸಿವಿಸಿ[...] ಉಂಟುಮಾಡಿವೆ.

ಅದೇನೇ ಇದ್ದರೂ ಕನ್ನಡದ ಮಹ[...] ಲೇಖಕರೊಬ್ಬರು, ತಮ್ಮ ವಯಸ್ಸು ಮತ್ತು ಆರೋ[...] ಸಮಸ್ಯೆಗಳೆಲ್ಲದರ ನಡುವೆ ಮೋದಿತ್ವದ ಅಪಾಯದ ಕ[...] ಸ್ಪಷ್ಟವಾಗಿ ಮಾತನಾಡುತ್ತಿರುವುದು ಈ ಕಾಲದ ಬಹು[...] ಸಂಗತಿಗಳಲ್ಲೊಂದು. ಎಂ.ಜೆ.ಅಕ್ಬರ್‌ರಂಥವರ ಹೋಲಿ[...] ಇದು ಮತ್ತೂ ಎದ್ದು ಕಾಣುವ ಅಂಶವಾಗಿದೆ.

ಆದರೆ 'ಮೋದಿಯ ಭಾರತದಲ್ಲಿ ಇರಲು ಇಷ್ಟಪಡುವುದಿಲ್ಲ' ಎಂಬ ಅನಂತಮೂರ್ತಿ[...] ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಹಲವು ಸ[...] ಮುಂದಿಡುತ್ತಿರುವ ತರ್ಕ ಸಮಸ್ಯಾತ್ಮಕವಾಗಿದೆ. '[...] ಭಾವಾವೇಶದಲ್ಲಿ ಹೇಳಿದ್ದು', 'ಇರಲಿ, ಅದನ್ನು [...] ಬಿಟ್ಟು ಬಿಡೋಣ', 'ಅವರಿಗೆ ವಯಸ್[...] ಅನಾರೋಗ್ಯದಿಂದ ಇದ್ದಾರೆ', 'ಆ ಮಾತನ್ನು ರೂಪಕಾ[...] ತೆಗೆದುಕೊಳ್ಳಬೇಕು' ಇತ್ಯಾದಿ. ಮೋದಿಯ ಭಾ[...] ಇರಲು ನಾವ್ಯಾರೂ ಇಷ್ಟಪಡುವುದಿಲ್ಲ, ಅನಿವಾಯ[...] ಇರಬೇಕು, ಏಕೆಂದರೆ, ಮೋದಿತ್ವ ಮುಕ್ತ ಭಾ[...] ಹೋರಾಡಬೇಕು, ಅಷ್ಟೇ. ಈ ಮಾತಿನಲ್ಲಿ ಸಮಸ್ಯೆ [...] ಅಥವಾ ಲೇಖಕರೊಬ್ಬರು ಆಡಿದ ಮಾತು[...] ಹೀಯಾಳಿಸುತ್ತಿರುವವರನ್ನು ಎದುರುಗೊಳ್ಳಲು ನಾವು[...] ಬೇರೆ ರೀತಿಯ ಹತಾರಗಳನ್ನು ಹುಡುಕಬೇಕಿದೆ. ವಾ[...] ಅನಂತಮೂರ್ತಿಯವರು ಭಾವಾವೇಶವಿಲ್ಲದೆ [...] ವಿವೇಕಪೂರ್ಣವಾದ ಮಾತುಗಳನ್ನು ಆಡಿದ್ದಾರೆ. [...] ವಯಸ್ಸು ಮತ್ತು ಅನಾರೋಗ್ಯ ಎಲ್ಲದರ ಹೊರತಾ[...] ಆರೋಗ್ಯಪೂರ್ಣವಾದ ಮಾತುಗಳನ್ನೇ ಆಡಿದ್ದಾರೆ. [...] ನಾವು ಅವರನ್ನು ಅಭಿನಂದಿಸಬೇಕಿದೆ.

ಸಂಶಯ ಮತ್ತು ಆತಂಕ ತುಂಬಿದ ಯುಗದ ಪ್ರಾರಂಭ...

ಈ ಸಂಚಿಕೆಯಲ್ಲಿ ಏನನ್ನು ಕುರಿತು ಯಬಹುದು? ಮೋದಿ ಎಂತಹ ಪ್ರಧಾನಿ ಯಾತ್ತಾನೆಂದು ಎಚ್ಚರಿಸಬೇಕೆ? ಅಥವಾ 'ಮೋದಿ 'ಯಲ್ಲಿ ಜಾತಿ, ಧರ್ಮ, ಪ್ರದೇಶ ಇತ್ಯಾದಿ ಗತಿಗಳು ಕೊಚ್ಚಿಹೋಗಿವೆಯಾ ಎಂದು ಡಬೇಕೆ? ಕಳೆದ ವಾರ ಫಲಿತಾಂಶಗಳು ಬೀಳಲಾರಂಭಿಸಿದಾಗ ನಾನು ಇದ್ದ 'ಇಂಗ್ಲಿಷ್ ಚಾನೆಲ್'ನಲ್ಲಿ ಶುರುವಾದ 'ಮೋದಿ ಭಜನೆ' ಫಂಡಾ ಹೊಡೆದದ್ದನ್ನು ವಿವರಿಸಬೇಕೆ? ಲ್ಲ ಯೋಚಿಸುತ್ತಿರುವಾಗ ಮೊನ್ನೆಯ ಚುನಾವಣೆ ಫಲಿತಾಂಶದ ಬಗ್ಗೆ ಖ್ಯಾತ 'ಎಕನಾಮಿಕ್ ಪೊಲಿಟಿಕಲ್ ವೀಕ್ಲಿ' ಪತ್ರಿಕೆಯಲ್ಲಿ ಗೊಂಡಿರುವ ಸಂಪಾದಕೀಯ ನನ್ನ ಕಣ್ಣಿಗೆ ಬಿತ್ತು. ನ್ನೇ ನಮ್ಮ ಓದುಗರಿಗೆ ಸಾಧ್ಯವಾದಷ್ಟು ಸರಳವಾಗಿ ವಾದಿಸಿ ಕೊಡಲು ಇಲ್ಲಿ ಪ್ರಯತ್ನಿಸಿದ್ದೇನೆ.


ನರೇಂದ್ರ ಮೋದಿ ಭಾರಿ ಮತದೊಂದಿಗೆ ಗಳಿಸಿದ್ದಾನೆ ಆದರೆ ಆತ ಅಧಿಕಾರದ ಗದ್ದುಗೆಯನ್ನೇರುತ್ತಿರುವುದು ಧನಾತ್ಮಕ ಬದಲಾವಣೆಯ ಸೂಚನೆಗಳನ್ನು ನೀಡುತ್ತಿಲ್ಲ.

2014ರ ಚುನಾವಣೆಗೆ ಇನ್ನೂ ಹಲವು ಗಳುಗಳಿವೆ ಎನ್ನುವಾಗಲೇ ಮೋದಿಯನ್ನು ಭಾವಿ ಧಾನಿ ಎಂದು ಬಿಂಬಿಸುವ ಧಾವಂತದಲ್ಲಿ ನಮ್ಮ ಮಾಧ್ಯಮಗಳು 16ನೇ ಲೋಕಸಭಾ ಚುನಾವಣೆಯು ಶ ಕಂಡಿರುವ ಅತಿ ಪ್ರಮುಖ ಚುನಾವಣೆ ಎಂದು ಣ್ಣಿಸಲಾರಂಭಿಸಿದ್ದವು. ಎಂದಿನಂತೆ ಎಲ್ಲವನ್ನೂ ಪ್ರೇಕ್ಷಿಸುವ ಮಾಧ್ಯಮಗಳು ಇದಕ್ಕಿಂತಲೂ ನವಾದ ಬದಲಾವಣೆಗಳನ್ನು ತಂದ ಾವಣೆಗಳನ್ನು ಮರೆತಿದ್ದವು. ಉದಾಹರಣೆಗೆ ಡು ದಶಕಗಳ ಕಾಂಗ್ರೆಸ್‌ನ ಅಧಿಪತ್ಯವನ್ನು ದಲು ಅಲುಗಾಡಿಸಿದ 1967ರ ಚುನಾವಣೆ, ರ್ತುಪರಿಸ್ಥಿತಿಯ ನಂತರ ಇಂದಿರಾ ಗಾಂಧಿಯನ್ನು ಲಿಸಿದ 1977ರ ಚುನಾವಣೆ ಮತ್ತು ಮೊದಲ ಗೆ ಭಾರತೀಯ ಜನತಾ ಪಕ್ಷದ ನೇತೃತ್ವದ ಡಿಎ ಮೈತ್ರಿಕೂಟವನ್ನು ಅಧಿಕಾರಕ್ಕೇರಿಸಿದ 98ರ ಚುನಾವಣೆ. 2014ರ ಚುನಾವಣೆ ಮುಖ್ಯವಾದದ್ದು ನಿಜ, ಆದರೆ ನರೇಂದ್ರ ಮೋದಿಯ ನೇತೃತ್ವದಲ್ಲಿ ಬಿಜೆಪಿ 30 ವರ್ಷಗಳ ನಂತರ ಸ್ವಂತಿನಲ್ಲಿ ಬಹುಮತ ಪಡೆದಿದೆ ಎಂಬ ಕಾರಣಕ್ಕಲ್ಲ.

ಈ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ವ್ಯಕ್ತಿ ಕ್ಕೆಂದು ಹಲವು ವರ್ಷಗಳ ಹಿಂದೆಯೇ ತಯಾರಿ ಂಭಿಸಿದ್ದ. ಈ ಚುನಾವಣೆಗೆಂದೇ 2012ರಲ್ಲಿ ಅಂತಾರಾಷ್ಟ್ರೀಯ ಸಾರ್ವಜನಿಕ ಪ್ರಚಾರ ಸಂಸ್ಥೆಯನ್ನು ಮಿಸಿಕೊಂಡ ಮೋದಿ ತನ್ನ ಸುತ್ತ ಒಂದು 'ಮೇಜ್' ಅನ್ನು ಸೃಷ್ಟಿಸುವ ಕೆಲಸ ಶುರುಮಾಡಿದ. ಪ್ರಚಾರ ತಂತ್ರ ಮೋದಿಯ 'ಅಭಿವೃದ್ಧಿ', ಜರಾತ್ ಮಾದರಿ', 'ಆಡಳಿತ', 'ದೃಢ ವ್ಯಕ್ತಿತ್ವ' ್ಯಾದಿಗಳ ಸುತ್ತ ಗಿರಕಿ ಹೊಡೆಯುತ್ತಾ ಆತನ ಾರಾತ್ಮಕ ಗುಣಗಳಾದ 'ಕೇಂದ್ರೀಕೃತ ಅಧಿಕಾರ', ರ್ವಾಧಿಕಾರಿ ಧೋರಣೆ' ಮತ್ತು ಆತ ೋಮುಗಲಭೆಗಳು ನಡೆದ ರಾಜ್ಯದ ಮುಖ್ಯಮಂತ್ರಿ ದ್ದ ಎಂಬ ಅಂಶಗಳನ್ನು ಮರೆಮಾಚುವಲ್ಲಿ ಲವಾಯಿತು. ಈ ಚುನಾವಣೆಯಲ್ಲಿ ಗೆದ್ದರೆ ರ್ಪೊರೇಟ್ ಕಂಪನಿಗಳಿಗೆ ನೆರವು ನೀಡುವುದಾಗಿ ರವಸೆ ನೀಡಿದ್ದರಿಂದ ಅವೆಲ್ಲವೂ ಮೋದಿಯನ್ನು ಬಲಿಸಿದವು. ಇದರ ಪರಿಣಾಮವಾಗಿ ಬಿಜೆಪಿಗೆ ಾ ಯಥೇಚ್ಛವಾಗಿ ಹರಿದುಬಂತು. ಒಂದು ದಾಜಿನ ಪ್ರಕಾರ ಮಾಧ್ಯಮಗಳಲ್ಲಿ ಹೀರಾತುಗಳನ್ನು ನೀಡಲೆಂದು 5,000 ಕೋಟಿ ಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ವೆಚ್ಚ ಾಡಲಾಯಿತು. ಇದು ಅಮೆರಿಕದ ಅಧ್ಯಕ್ಷ ಬರಾಕ್ ಬಾಮಾ 2012ರ ಅಧ್ಯಕ್ಷೀಯ ಚುನಾವಣೆಯಲ್ಲಿ ಚ್ಚ ಮಾಡಿದ 986 ಮಿಲಿಯನ್ ಡಾಲರ್‌ಗಳಿಗಿಂತ ಲ್ಪ ಕಡಿಮೆ ಅಷ್ಟೇ. ಆದರೆ ಅಮೆರಿಕದಲ್ಲಿ ತಲಾ ಾಯ ಭಾರತಕ್ಕಿಂತ 30 ಪಟ್ಟು ಹೆಚ್ಚು ಬುದನ್ನು ನೆನಪಿಸಲ್ಪಿಟ್ಟುಕೊಂಡರೆ ಇದು ಎಷ್ಟು ಡ್ಡ ಮೊತ್ತ ಎಂದು ಅರ್ಥವಾಗುತ್ತದೆ. ಈ ುನಾವಣೆಯಲ್ಲಿ ಮಾಧ್ಯಮಗಳು ಕೂಡ ಹಣಬಲ ಂದಿದ್ದ ಬಿಜೆಪಿ ಹೇಳಿದ್ದನ್ನೆಲ್ಲ ಪ್ರಶ್ನಿಸದೆ, ಮರ್ಶಿಸದೆ ಖರೀದಿಸಿದವಲ್ಲದೆ ಮೋದಿಯ ೋಷಿತ ಸಾಧನೆಗಳು ನಿಜವೋ ಸುಳ್ಳೋ ಎಂದು ೀಕ್ಷಿಸುವ ಗೋಜಿಗೆ ಹೋಗಲಿಲ್ಲ. ಜೊತೆಗೆ 02ರ ಗುಜರಾತ್ ನರಮೇಧದ ಬಗ್ಗೆ ಜಾಣ ವನ್ನು ಹಬ್ಬಿದವು. ಹೀಗೆ ಬಿಜೆಪಿ ಸಂಗ್ರಹಿಸಿದ ಸಂಪನ್ಮೂಲಗಳನ್ನು ಮೋದಿಯ ಗೆಲುವಿಗೆ ಬಳಸಿಕೊಳ್ಳಲಾಯಿತಲ್ಲದೆ ಆರೆಸ್ಸೆಸ್‌ನ ಸೈನ್ಯದ ಸಹಾಯವನ್ನೂ ಪಡೆಯಲಾಯಿತು. ಇವೆಲ್ಲ ಕಾರಣಗಳಿಗೆ ಈ ಚುನಾವಣೆ ಇತಿಹಾಸದಲ್ಲೇ ಕಂಡರಿಯದಂತಹ ಕಾರ್ಪೊರೇಟ್ ದರೋಡೆ ಎಂದು ಕರೆಯಬಹುದು. ಯಾಕೆಂದರೆ ಈ ಚುನಾವಣೆಯಲ್ಲಿ ಕಾರ್ಪೊರೇಟ್ ಬಂಡವಾಳ ತನ್ನ ಸಹಜ ಮಿತ್ರನಾದ ಬಲಪಂಥೀಯ ಪಕ್ಷದೊಂದಿಗೆ ಕೈಜೋಡಿಸಿತ್ತು.

ಅಂದಮಾತ್ರಕ್ಕೆ ಯುಪಿಎ ಸರ್ಕಾರದ - ಅದರಲ್ಲೂ ನಿರ್ದಿಷ್ಟವಾಗಿ ಕಾಂಗ್ರೆಸ್ ಪಕ್ಷದ - ಎಲ್ಲಾ ತಪ್ಪುಗಳನ್ನು ಮತ್ತು ಕರ್ತವ್ಯಲೋಪಗಳನ್ನು ನಿರಾಕರಿಸುವಂತಿಲ್ಲ. ಯಾಕೆಂದರೆ ಅವೇ ಬಿಜೆಪಿಯ ಗೆಲುವಿಗೆ ಸಹಕಾರಿಯಾಗಿರುವುದು. ಲಂಚಕೋರ ಸರ್ಕಾರದ ನೇತೃತ್ವ ಹೊಂದಿದ್ದ ಕಾಂಗ್ರೆಸ್ ಪಕ್ಷ ಈಗ ಒಂದು ಕುಟುಂಬದ ಆಸ್ತಿಯಾಗಿ ಪರಿವರ್ತನೆಗೊಂಡಿದೆ. ಆದ್ದರಿಂದ ಅದಕ್ಕೆ ಬಿಜೆಪಿಯ ಸೈನಿಕ ವ್ಯವಸ್ಥೆಯ ಎದುರು ಹೋರಾಡಲಾಗಲಿಲ್ಲ. ಒಂದಿಷ್ಟು ಹಕ್ಕುಗಳು, ಮಾನವ ಅಭಿವೃದ್ಧಿ ಸೂಚ್ಯಂಕಗಳು, ಇತ್ಯಾದಿ ಚಿಕ್ಕಪುಟ್ಟ ಕಾಂಗ್ರೆಸ್ ಸಾಧನೆಗಳನ್ನು ಹಣದುಬ್ಬರವನ್ನು ನಿಯಂತ್ರಿಸಲಾಗದಿದ್ದದ್ದು, ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗದಿದ್ದದ್ದು, ಇತ್ಯಾದಿಗಳು ಮೋದಿಯ ವಾಗ್ದಾನಗಳ ಮುಂದೆ ಮಣ್ಣುಮುಕ್ಕಿದವು.

ಮೋದಿಯ ವ್ಯವಸ್ಥಿತ 'ಅಭಿವೃದ್ಧಿ' ಎಂಬ ಪ್ರಚಾರ ತಂತ್ರ ಒಂದಿಷ್ಟೂ ತಿರುಳಿಲ್ಲದ ಚೋಳಿಯಾಗಿತ್ತು. ಅದರ ಉದ್ದೇಶ ಯುಪಿಎ ಸರ್ಕಾರದ ವಿರುದ್ಧ ಮತದಾರರಲ್ಲಿ ಎದ್ದಿದ್ದ ಆಕ್ರೋಶವನ್ನು ತನ್ನ ಪರವಾದ ಮತಗಳಾಗಿ ಪರಿವರ್ತಿಸುವುದಾಗಿತ್ತು. ಆದರೆ ಹಲವು ಬಾರಿ ಈ 'ಅಭಿವೃದ್ಧಿ' ಎಂಬ ಮುಖವಾಡ ಆಗೀಗ ಜಾರುತ್ತಿತ್ತು. ಚುನಾವಣಾ ಪ್ರಚಾರದಲ್ಲಿ ಮೋದಿ ಕೆಲವೊಮ್ಮೆ ಕಳುಹಿಸಿದ ಸಂದೇಶಗಳಲ್ಲಿ ಮತ್ತು ಹಿಂದೂ ಮತಗಳನ್ನು ಪಡೆಯಲು ಆಡಿದ ಮಾತುಗಳಲ್ಲಿ ಇಂದು ಬಹಿರಂಗಗೊಳ್ಳುತ್ತಿತ್ತು. ಬಾಂಗ್ಲಾದೇಶದಿಂದ ವಲಸೆ ಬಂದಿರುವ ಮುಸಲ್ಮಾನರನ್ನು ವಾಪಸ್ ಕಳುಹಿಸಲಾಗುವುದು ಎಂದದ್ದು, 'ಪಿಂಕ್' (ದನದ ಮಾಂಸ) ರಫ್ತಿನಿಂದ ಯಾರಿಗೆ ಲಾಭವಾಗುತ್ತಿದೆ ಎಂದು ಪ್ರಶ್ನಿಸಿದ್ದು ಮತ್ತು ಮೋದಿ ವಿರೋಧಿಗಳು ಪಾಕಿಸ್ತಾನಕ್ಕೆ ಹೋಗಬೇಕು ಎಂದು ಹಲವು ಬಿಜೆಪಿ ನಾಯಕರು ಹೇಳಿದ್ದನ್ನು ತೀವ್ರವಾಗಿ ಖಂಡಿಸದಿದ್ದದ್ದು... ಇವೆಲ್ಲವೂ ಮೋದಿ 'ಮಧ್ಯಮಾರ್ಗಿ' ಆಗಿಲ್ಲ ಎಂಬುದನ್ನು ತೋರಿಸಿದವು.



ಜೊತೆಗೆ ಚುನಾವಣೆಯ ಅಭಿಯಾನದಲ್ಲಿ ಒಮ್ಮೆಯೂ ಮೋದಿ ಅಲ್ಪಸಂಖ್ಯಾತರಲ್ಲಿ ತನ್ನ ಬಗ್ಗೆ ಇರುವ ಶಂಕೆಯನ್ನು ಹೋಗಲಾಡಿಸಲೂ ಪ್ರಯತ್ನಿಸದೇ ಇದ್ದದ್ದೂ ಗಮನಾರ್ಹ ಅಂಶವೇ. ಒಬ್ಬನೇ ಒಬ್ಬ ಮುಸಲ್ಮಾನ ಬಿಜೆಪಿ ಸಂಸದ ಇಲ್ಲದ ಮೋದಿಯ ಸರ್ಕಾರದಲ್ಲಿ ಭಾರತದ ಬಹುಸಂಸ್ಕೃತಿಯ ಭವಿಷ್ಯದ ಬಗ್ಗೆ ಆತಂಕ ಹುಟ್ಟುವುದಕ್ಕೆ ಇವೆಲ್ಲವೂ ಮುಖ್ಯಕಾರಣಗಳಾಗಿವೆ.

ಮಾನವ ಅಭಿವೃದ್ಧಿಯ ಸೂಚ್ಯಂಕದಲ್ಲಿ ಗುಜರಾತಿನ ಮುಖ್ಯಮಂತ್ರಿಯಾಗಿ ಮೋದಿ ಸಾಧಿಸಿದ್ದು ಸಾಧಾರಣ ಹೆಚ್ಚಳವನ್ನಷ್ಟೇ. 'ಅಭಿವೃದ್ಧಿ'ಯ ಭರವಸೆಯ ಮೇಲೆ ಆತ ಈಗ ಗೆದ್ದಿರುವುದರಿಂದ ಪ್ರಧಾನಿಯಾಗಿ ಅದಕ್ಕಿಂತ ಹೆಚ್ಚಿನದ್ದನ್ನು ಸಾಧಿಸದಿದ್ದರೆ 'ಹಿಂದೂತ್ವ' ತನ್ನ ಕೊಳಕು ತಲೆಯನ್ನು ಎತ್ತುವ ಅಪಾಯ ಇದ್ದೇ ಇದೆ. ಮೋದಿ ಓರ್ವ ಆರೆಸ್ಸೆಸ್ ಪ್ರಚಾರಕ ಹೌದು ಆದರೆ ಆತ ಆರೆಸ್ಸೆಸ್‌ನ ಎಲ್ಲಾ ಆದೇಶಗಳನ್ನು ಪಾಲಿಸಿಲ್ಲ, ಆದಾಗ್ಯೂ ಇತ್ತೀಚೆಗೆ ಮೋದಿ ಮತ್ತು ಆರೆಸ್ಸೆಸ್ ನಡುವಿನ ಸಂಬಂಧ ಗಟ್ಟಿಗೊಂಡಿದೆ ಮತ್ತು ಚುನಾವಣೆಯ ಫಲಿತಾಂಶಗಳು ಹೊರಬರುವ ಮುನ್ನವೇ ಆರೆಸ್ಸೆಸ್‌ನ ಹಿರಿಯ ನಾಯಕರು ರಾಮಮಂದಿರ ಮತ್ತು ಏಕರೂಪ ನಾಗರಿಕ ನೀತಿಸಂಹಿತೆ ಬಗ್ಗೆ ಮಾತನಾಡಲಾರಂಭಿಸಿದ್ದರು.

ಮೋದಿಯ ಚುನಾವಣಾ ಪ್ರಚಾರವು ವೇಗ ಪಡೆದುಕೊಂಡಂತೆ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಇತರೆ ರಾಜಕಾರಣಿಗಳಿಗೆ ಮತ್ತು ಹಲವು ಬುದ್ಧಿಜೀವಿಗಳಿಗೆ 'ಸ್ವೀಕಾರಾರ್ಹ' ವ್ಯಕ್ತಿಯಾಗುತ್ತಿರುವ ಲಕ್ಷಣಗಳು ಗೋಚರಿಸಲಾರಂಭಿಸಿದವು. ತಮ್ಮ ವ್ಯವಸ್ಥೆಯ ಬಗ್ಗೆ ಚೆನ್ನಾಗಿ ಅರಿತವರೂ ಕೂಡ ದೆಹಲಿಯು ಗಾಂಧಿನಗರದ ಮೋದಿಯನ್ನು 'ನಿಗ್ರಹಿಸುತ್ತದೆ' ಎಂದು ವಾದಿಸಲಾರಂಭಿಸಿದರು. ಅವರ ಪ್ರಕಾರ ವಿಶಾಲವಾದ ಭಾರತದ ಸುಪ್ರೀಂಕೋರ್ಟ್, ಚುನಾವಣಾ ಆಯೋಗ ಮತ್ತು ಮಹಾಲೇಖಪಾಲಕ ತರಹದ ಪ್ರಜಾತಂತ್ರದ ಸಂಸ್ಥೆಗಳು ಬಲಿಷ್ಠವಾಗಿದ್ದು ಅವುಗಳ ಸ್ವಾತಂತ್ರ್ಯವನ್ನು ಪ್ರಧಾನಿಯಾಗಿ ಮೋದಿ ಪಳಗಿಸಲು ಯತ್ನಿಸಿದರೂ ಅದು ಆತನಿಂದ ಸಾಧ್ಯವಾಗುವುದಿಲ್ಲ. ಮಣ್ಣಲ್ಲಿ ತಲೆ ಹೂಳುವ ಇಂತಹ ವಾದದ ವಿರುದ್ಧ ಏನನ್ನೂ ಹೇಳುವುದು ಕಷ್ಟ. ಆದರೆ ಭಾರತೀಯ ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಒಂದು ಅಪಾಯಕಾರಿ ಶಕ್ತಿಯ ವಿರುದ್ಧ ಹೋರಾಡಲು ಇಂಥವರು ಸಿದ್ಧರಿಲ್ಲದಿರುವುದು ಚಿಂತೆಗೀಡುಮಾಡುತ್ತದೆ.

ಒಂದಂತೂ ಸ್ಪಷ್ಟ. ನಮ್ಮ ಗಣತಂತ್ರ ಸ್ಥಾಪಿತವಾಗಿ 60 ವರ್ಷಗಳಾಗಿದ್ದರೂ ನಮ್ಮ ಪ್ರಜಾಪ್ರಭುತ್ವದ ಹಲವಾರು ಸಂಸ್ಥೆಗಳು ದುರ್ಬಲವಾಗಿಯೇ ಉಳಿದಿದ್ದು ಯಾರು ಬೇಕಾದರೂ ಅವನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದಾದ ಸ್ಥಿತಿಯಲ್ಲಿವೆ. ದೂರದೃಷ್ಟಿ ಮತ್ತು ಧ್ಯೇಯ, ಎರಡನ್ನೂ ಹೊಂದಿರುವ ಆರೆಸ್ಸೆಸ್ ತರಹದ ಸಂಘಟನೆ ಹೇಗೆ ಪಂಚಾಯತ್ ರಾಜ್, ಕೆಳಸ್ತರದ ನ್ಯಾಯಾಲಯಗಳು, ಜಿಲ್ಲಾ ಮಟ್ಟದಿಂದ ದೆಹಲಿಯ ತನಕದ ಆಡಳಿತಾಂಗವನ್ನು ಹೇಗೆ ಹಾಳುಗೆಡವಿದೆ ಎಂಬುದನ್ನು ನಾವು ನೋಡಿದ್ದೇವೆ. ಹಾಗೆಯೇ ನಮ್ಮ ಪ್ರಜಾಪ್ರಭುತ್ವದ ಸ್ವಾಯತ್ತ ಸಂಸ್ಥೆಗಳೂ ದೈತ್ಯ ಮತ್ತು ಸಂಘಟಿತ ಶಕ್ತಿಗಳ ಎದುರು ತಮ್ಮ ಸ್ವಾತಂತ್ರ್ಯವನ್ನು ತ್ವರಿತವಾಗಿ ತ್ಯಜಿಸಿವೆ ಎಂಬುದನ್ನೂ ನೋಡಿದ್ದೇವೆ. ಮೋದಿ ಗೆಲ್ಲುವ ಹಾದಿಯಲ್ಲಿದ್ದಾನೆ ಎಂಬ ಸೂಚನೆ ಸಿಕ್ಕ ಕೂಡಲೇ ನಮ್ಮ ಸ್ವತಂತ್ರ ಮಾಧ್ಯಮಗಳು ಹೇಗೆ ಶರಣಾದವು ಎಂಬುದನ್ನು ನೋಡಿದ್ದೇವೆ. ನಮ್ಮ ನ್ಯಾಯಾಂಗ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಇತ್ತೀಚಿನ ವರ್ಷಗಳಲ್ಲಿ ದುರ್ಬಲವಾಗಿದ್ದ ಕಾರ್ಯಾಂಗದ ಜೊತೆ ಸ್ವತಂತ್ರವಾಗಿ ನ್ಯಾಯಾಂಗ ತನ್ನ ಕರ್ತವ್ಯವನ್ನು ನಿಭಾಯಿಸಿತ್ತು. ಆದರೆ ಕಾರ್ಯಾಂಗ ಬಲಗೊಂಡರೆ (1971-1976ರ ತನಕ ಇಂದಿರಾ ಗಾಂಧಿಯ ಸರ್ಕಾರ ಬಲವಾಗಿದ್ದಾಗ) ಸುಪ್ರೀಂಕೋರ್ಟ್ ಕೂಡ ಪಳಗುತ್ತದೆ ಎಂಬುದನ್ನೂ ನೋಡಿದ್ದೇವೆ.

ಈಗ ಸಂಘಪರಿವಾರ ತನ್ನ ದಶಕಗಳ ಹಿಂದೂತ್ವದ ಯೋಜನೆಗಳನ್ನು ಈಡೇರಿಸಿಕೊಂಡು ನಮ್ಮ ಭಾರತದ ರಾಜಕಾರಣವನ್ನೇ ಬದಲಾಯಿಸುವ ಅಪಾಯದ ಬಗ್ಗೆ ಎಲ್ಲರೂ ಕಾಳಜಿ ವಹಿಸಬೇಕಿದೆ. ಆ ಕಾರಣಕ್ಕೇ ಲೋಕಸಭೆಯಲ್ಲಿ ಬಿಜೆಪಿಗೆ ಸಿಕ್ಕಿರುವ ಬಹುಮತವನ್ನು ಮತ್ತು ಅದಕ್ಕೆ ವಿರೋಧವೇ ಇಲ್ಲದಂತಾಗಿರುವುದನ್ನು ನಾವು ಧನಾತ್ಮಕ ಬೆಳವಣಿಗೆ ಎಂದು ಪರಿಗಣಿಸದೆ ಆತಂಕದಿಂದ ನೋಡಬೇಕಿದೆ. ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಮೈತ್ರಿ ಪಕ್ಷಗಳು ನಿಯಂತ್ರಿಸಿದ್ದರಿಂದ ಆಗ ಆರೆಸ್ಸೆಸ್‌ಗೆ ತನ್ನ ಹಿಂದೂತ್ವ ಅಜೆಂಡಾವನ್ನು ಜಾರಿಗೆ ತರಲು ಆಗಿರಲಿಲ್ಲ ಎಂಬುದನ್ನು ಮರೆಯಬಾರದು.

ತಮಿಳುನಾಡು, ಪಶ್ಚಿಮ ಬಂಗಾಳ, ಒಡಿಶಾ ಮತ್ತು ಆಂಧ್ರ ಪ್ರದೇಶ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ತಮ್ಮ ಶಕ್ತಿಯನ್ನು ತೋರಿಸಿದ್ದನ್ನು ಬಿಟ್ಟರೆ ಮಿಕ್ಕೆಲ್ಲ ಕಡೆಗಳಲ್ಲಿ ಈ ಚುನಾವಣೆಯ ಕೇಂದ್ರಬಿಂದು ನರೇಂದ್ರ ಮೋದಿಯೇ (ಆತನ ಪರ ಮತ್ತು ವಿರುದ್ಧ ಅಭಿಪ್ರಾಯಗಳಿದ್ದಾಗ್ಯೂ) ಆಗಿದ್ದ. ಆತ ಈ ಅವಕಾಶವನ್ನು ಕಾಂಗ್ರೆಸ್‌ನ ಉಪಾಧ್ಯಕ್ಷ ರಾಹುಲ್ ಗಾಂಧಿಯ ಅದಕ್ಷತೆಯನ್ನು ತೋರಿಸಲು ಉಪಯೋಗಿಸಿಕೊಂಡ. ನಮ್ಮ ಸಮಾಜದಲ್ಲಿ ಒಡಕು ಮತ್ತು ಧ್ರುವೀಕರಣಗಳನ್ನು ಮಾಡುವ ವ್ಯಕ್ತಿ ಭಾರತದ ಪ್ರಧಾನಿ ಹುದ್ದೆಗೆ ಸೂಕ್ತನೇ ಎಂಬುದರ ಬಗ್ಗೆ ಚರ್ಚೆಗಳು ನಡೆದವು. ಆದರೆ ರಾಜಕೀಯ ಪಕ್ಷಗಳು ಮತದಾರರ ಮುಂದಿಟ್ಟ ಪ್ರಣಾಳಿಕೆಗಳ ಬಗ್ಗೆಯೂ ಚರ್ಚೆಗಳು ನಡೆಯಬೇಕಿತ್ತು. ಎಲ್ಲಾ ಸಮುದಾಯ ಮತ್ತು ವರ್ಗಗಳ ಬಗೆಗಿನ ಕಾಳಜಿ ಮತ್ತು ಮರ್ಯಾದೆಯ ಬದಲಿಗೆ ನಾವು ಕಂಡಿದ್ದು ಆಕ್ರಮಣಕಾರಿ ಶೈಲಿಯಲ್ಲಿ ಬಿಜೆಪಿ ನಡೆಸಿದ ಚುನಾವಣಾ ಪ್ರಚಾರದ ಬಗೆಗಿನ ಚರ್ಚೆಗಳು.

2014ರ ಚುನಾವಣೆಯಲ್ಲಿ ಒಂದು ಸಂದೇಶ ಇದ್ದರೆ ಅದು ಭಾರತ ಬದಲಾಗುತ್ತಿದೆ ಎಂಬುದನ್ನು ತೋರಿಸಿತು. ನಮ್ಮ ಸಮಾಜದಲ್ಲಿ ದನಿ ಇರುವವರು ದನಿ ಇಲ್ಲದವರ ಬಗ್ಗೆ ಕಡಿಮೆ ಸಹಿಷ್ಣುಗಳಾಗುತ್ತಿದ್ದಾರೆ, ಕಡಿಮೆ ಸಹಾನುಭೂತಿ ಹೊಂದಿದ್ದಾರೆ ಮತ್ತು ಆಕ್ರಮಣಕಾರಿಗಳಾಗುತ್ತಿದ್ದಾರೆ ಎಂಬುದನ್ನೂ ಈ ಚುನಾವಣೆ ತೋರಿಸಿತು. ಇಂತಹ ವಾತಾವರಣದಲ್ಲೇ ಧರ್ಮ ಮತ್ತು ರಾಷ್ಟ್ರೀಯತೆಯ ಭಾವನೆಯನ್ನು ಬೆರೆಸಿ ಅದಕ್ಕೆ ಉಗ್ರ ಅಭಿವ್ಯಕ್ತಿ ಸಿಗುತ್ತದೆ. 2014ರ ಚುನಾವಣೆಯಲ್ಲಿ ಅಂಚಿಗೆ ಸರಿಸಲ್ಪಟ್ಟ ಪ್ರಜಾಪ್ರಭುತ್ವವಾದಿಗಳ, ಮಾನವ ಹಕ್ಕುಗಳನ್ನು ಎತ್ತಿಹಿಡಿಯುವವರ, ಸಂಘಸಂಸ್ಥೆಗಳ ಎದುರು ಈಗ ದೊಡ್ಡ ಸವಾಲಿದೆ. ಅವರು ಬಹುಸಂಸ್ಕೃತಿಯ ಭಾರತವನ್ನು ಕಾಪಾಡಿಕೊಳ್ಳಲು ಬಿಜೆಪಿ/ಎನ್‌ಡಿಎ ಸರ್ಕಾರದ ಮೇಲೆ ಸದಾ ಕಣ್ಣಿಟ್ಟಿರಬೇಕಿದೆ. ಯಾಕೆಂದರೆ ಎಲ್ಲರ ಯೋಗಕ್ಷೇಮ ಮತ್ತು ಶಾಂತಿಯನ್ನು ಕಾಪಾಡುವುದು ಅತ್ಯಗತ್ಯವಾಗಿದೆ.

ಬಿಜೆಪಿ ಘೋಷಿಸಿರುವ 'ಹೊಸ ಯುಗ'ವನ್ನು ಆಶಾಭಾವನೆಯಿಂದ ಸ್ವೀಕರಿಸುವ ಬದಲು ಅದನ್ನು ಸಂಶಯ ಮತ್ತು ಆತಂಕದಿಂದಲೇ ನೋಡಬೇಕಿದೆ.


ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com




ಕಾಮಾಕ್ಷಿಪಾಳ್ಯದ ಬಾಳೇಗೌಡ




ಗೋರಿಪಾಳ್ಯದ ಇಶ್ರತ್

ಮಾರಿಮುತ್ತುವೇ ನಾಚಬೇಕು ಗೋರಿಪಾಳ್ಯದ ರಣಚಂಡಿ


ಕಳ್ಳಭಟ್ಟಿ ರಾಣಿ ಮಾರಿಮುತ್ತು, ಭಕ್ಷಿಗಾರ್ಡನ್ನಿನ ಗಾಂಜಾ ರಾಣಿ ತಮಿಳ್‌ಕುಡಿ, ಆಂಜನಪ್ಪ ಗಾರ್ಡನ್ನಿನ ಸಾರಾಯಿ ರಾಣಿ ಮಾಲಾ ಮುಂತಾದ ಘಟವಾಣಿಯರಿಗೆ ಹೋಲಿಸಿದರೆ ಈಕೆ ಕೊಂಚ ವಿಪರೀತದ ಹೆಂಗಸೆ. ಡೀಲು ಪಾಲಿನ ಲೆಕ್ಕದಲ್ಲಿ




ಸೈಯದ್ ರಬು




ಜಹೀರ್




ಶಹಾಬುದ್ದೀನ್ ಖಾನ್



ಟಿಪ್ಪೂನಗರದ ಲಂಗಡಾ ಜಮೀರ್



ಜುಬೇರ್ ಅಹ್ಮದ್



ಆಸಿಫ್ ಆಲಿಬೇಗ್

ಭಯಾನಕವಲ್ಲದೆ ಹೋದರೂ ರಕ್ತ ಹರಿಸಲು ನಿಂತರೆ ಅಕ್ಷರಶಃ ರಣಚಂಡಿಯೆ. ಬೆಂಗಳೂರು ಪಾಪಕೂಪದ ಯಾರೇ ಹೆಂಗಸೊಬ್ಬಳು ಕೈಯಿಕ್ಕದ ಭೀಕರವೊಂದಕ್ಕೆ ಕೈಯಿಟ್ಟವಳು ಬಹುಶಃ ಈಕೆಯೇ ಮೊದಲಿಗಳೇನೋ!

ಥೇಟು ಪಡ್ಡೆ ರೌಡಿಯೊಬ್ಬನ ಗೆಟಪ್ಪಿನಲ್ಲಿ ನಡುವಯಸ್ಕ ಹೆಂಗಸೊಬ್ಬಳು ಜೀನ್ಸ್ ಧರಿಸಿ, ಬೈಕನ್ನೇರಿ, ಇಂಡಿಯನ್ ಮ್ಯಾಡ್‌ಮ್ಯಾನ್‌ನಂತೆ ಜಾಕೆಟ್ ತೊಟ್ಟು, ಕೈಯಲ್ಲಿ ಉದ್ದದ ಲಾಂಗ್ ಹಿಡಕೊಂಡು ನಡುರಸ್ತೆಯಲ್ಲಿ ತನ್ನ ದುಷ್ಮನ್‌ನನ್ನು ಅಟ್ಟಾಡಿಸಿ ಕತ್ತರಿಸುತ್ತಾಳೆಂದರೆ; ಅದು ಬೆಂಗಳೂರು ಪಾಪಕೂಪದ ಮಟ್ಟಿಗಂತೂ ಸಣ್ಣ ಸಂಗತಿಯೇನಲ್ಲ.

ಇಂಥಾ ಅನಾಹುತಕಾರಿ ಮಹಿಳೆಯನ್ನು ಕಾಮಾಕ್ಷಿಪಾಳ್ಯದ ಇನ್ಸ್‌ಪೆಕ್ಟರ್ ಬಾಳೇಗೌಡ ಆಕೆಯ ಇಡೀ ಹಂತಕ ಪಡೆ ಸಮೇತ ಜೈಲಿಗೆ ದಬ್ಬಿದರಾದರೂ ಲಾಂಗ್ ಹಿಡಿದು ರುಂಡ ಚೆಂಡಾಡಿದ ರಣಚಂಡಿಯ ಕತೆ ನಿಜಕ್ಕೂ ದಾರುಣವೆ!

ಏಕೆಂದರೆ ಯಾರನ್ನು ಈಕೆ ನಡುರಸ್ತೆಯಲ್ಲಿ ಅಟ್ಟಾಡಿಸಿ ಕತ್ತರಿಸಿದಳೋ ಆತ ಬೇರೆ ಯಾರೂ ಅಲ್ಲ ಈಕೆಯ ಖಾಸಾ ತಮ್ಮ. ಅಂದರೆ ಒಡಹುಟ್ಟಿದ ತಮ್ಮ!

ತನ್ನ ತಮ್ಮನನ್ನೇ ಅರ್ಧ ಡಜನ್ ರೌಡಿ ಗ್ಯಾಂಗ್ ಸಮೇತ ಅಟಕಾಯಿಸಿಕೊಂಡು ಕೊಚ್ಚಿಕೊಂಡು, ಅಕ್ಷರಶಃ ರೌಡಿಗೆಟಪ್ಪಿನಲ್ಲಿ ಜೀನ್ಸು-ಜರ್ಕಿನು ಧರಿಸಿ, ಬೈಕನ್ನೇರಿ ಲಾಂಗು ಝಳಪಿಸಿದ ಕಲಿಯುಗ ರಣಚಂಡಿಯೇ ಗೋರಿಪಾಳ್ಯದ ಇಶ್ರತ್. ಮೈಸೂರು ರಸ್ತೆ ಟಿಪ್ಪೂ ನಗರದ ನಿಗೂಢ ಪಾತಕಿ ಲಂಗಡಾ ಜಮೀರ್ ಅಲಿಯಾಸ್ ಜಮೀರ್ ಅಹ್ಮದ್ ಮತ್ತಾತನ ಅರ್ಧ ಡಜನ್ ರೌಡಿ ಪಡೆ ಕಟ್ಟಿ ಕೊಂಡು ಕಾಮಾಕ್ಷಿಪಾಳ್ಯದ ಮೇಲೆ ದಂಡೆತ್ತಿ ಹೋಗಿ ಈಕೆ ಹರಿಸಿದ್ದು ತನ್ನದೇ ಒಡಹುಟ್ಟಿದ ತಮ್ಮನ ರಕ್ತವನ್ನು. ಪರಿಸ್ಥಿತಿ, ಸನ್ನಿವೇಶ ಮತ್ತು ಎದುರಾಗುವ ಆಪತ್ತಿಗೆ ಎಂಥ ಪಿಳ್ಳೆಯೂ ಪಿಶಾಚಿಯಾಗಿ ಪರಿವರ್ತನೆಯಾಗುವ ದಾರುಣಕ್ಕೆ ಸಾಕ್ಷಿಯಾಗಿ ಸದ್ಯ ಪರಪ್ಪನ ಅಗ್ರಹಾರದ ಜೈಲು ಪಾಲಾದ ಇಶ್ರತ್ ಎಂಬ ಮುಸ್ಲಿಂ ಮಹಿಳೆಯ ಕತೆಯೇ ವಿಚಿತ್ರ-

ಖತರ್‌ನಾಕ್ ಕೊಂಪೆ ಗೋರಿಪಾಳ್ಯದ ಉಮರ್ ಫಾರೂಕ್ಯನಗರ ಎಂಬ ಸ್ಲಮ್ಮಿನ ಪಾಚಾಸಾಬ್ ಮತ್ತು ಹಸೀನಾ ದಂಪತಿಗಳ ನಾಲ್ವರು ಮಕ್ಕಳ ಪೈಕಿ ಇಶ್ರತ್ ಎರಡನೆಯವಳು. ಈಕೆಯ ಅಣ್ಣ ಜಾನಿ ಸದ್ಯ ಸೌದಿ ಅರೇಬಿಯಾದಲ್ಲಿದ್ದಾನೆ. ಜಾವಿದ್ ಎಂಬ ತಮ್ಮ ಮತ್ತು ಶಬಾನಾ ಎಂಬ ತಂಗಿಯ ನಂತರ ಕೊನೆಯವನೇ ಈಗ ಕೊಲೆಯಾಗಿರುವ ಸಾದಿಕ್. ಗೋರಿಪಾಳ್ಯ ಅಂದರೆ ಜಗಜೀವನರಾಂನಗರ ಪೊಲೀಸ್ ಠಾಣೆಯ ಪಕ್ಕದಲ್ಲೇ ಇರುವ ಅಭಿಮಾನ್ ಥಿಯೇಟರ್ ಹಿಂಭಾಗದ ಫಾರೂಕ್ಯ ನಗರ ಝೋಪಡ ಪಟ್ಟಿಯ ಪಾಚಾ ಹೇಳಿಕೇಳಿ ಹಳೆ ಮಜೂರ್!

ಅಂದರೆ ಪಾಚಾ ವೃತ್ತಿಯಲ್ಲಿ ಪಿಕ್‌ಪಾಕೆಟ್ ಅರ್ಥಾತ್ ಜೇಬುಗಳ್ಳ. ಇಂಥ ನಿರ್ಗತಿಕ ಕುಟುಂಬಕ್ಕೆ ಏಕಾಏಕಿ ಧನ ಕನಕ ಪ್ರಾಪ್ತಿಯಾಗಿದ್ದು 2008ರಲ್ಲಿ. ಅದಕ್ಕೆ ಕಾರಣನಾದವನು ಇಶ್ರತ್‌ಳ ಅಣ್ಣ ಅಂದರೆ ಪಾಚಾಸಾಬ್‌ನ ಹಿರಿ ಮಗ ಜಾನಿ. ಬುದ್ಧಿ ಬಲಿತಂತೆಯೇ ಸೌದಿಯ ಬಹರೈನ್‌ಗೆ ವಲಸೆಹೋದ ಜಾನಿ ಅಲ್ಲಿ ಸಣ್ಣ ಪುಟ್ಟ ವ್ಯಾಪಾರಕ್ಕೆ ಕೈಯಿಟ್ಟು ಅಷ್ಟಿಷ್ಟು ದುಡ್ಡು ಕಂಡ. ಬಹರೈನ್‌ನಲ್ಲಿ ಸಣ್ಣ ಮೊತ್ತವಾದರೂ ಭಾರತದ ಮಟ್ಟಿಗದು ಲಕ್ಷಾಂತರವೆ.

ಈ ಮಧ್ಯೆ ಬಹರೈನ್‌ನಲ್ಲಿ ಜಾನಿ ಸ್ವಾ ಪು ದಂಧೆಯಿಂದಲೇ ಕೋಟ್ಯಾಧೀಶನಾದ. ಸ್ವಂತ ಕಾರು, ಕಾಂಪ್ಲೆಕ್ಸ್, ಬಂಗಲೆ ಎಲ್ಲವನ್ನೂ ಖರೀದಿಸಿದ್ದ. ಅದೇನಾಯಿತೋ ಇಶ್ರತ್‌ಳ ದುಡ್ಡಿನ ರುಚಿ ಕಂಡು ಶೋಕಿಗೆ ಬಿದ್ದ ಆಕೆಯ ಗಂಡ ಬೇರೆ ಯಾರೋ ಹೆಂಗಸೊಬ್ಬಳ ಸಂಗಕ್ಕೆ ಬಿದ್ದ. ಅಂತಿಮವಾಗಿ ಮೊದಲ ಗಂಡನಿಂದ ತಲಾಖ್ ಪಡೆದ ಇಶ್ರತ್ ಇದೇ ಗೋರಿಪಾಳ್ಯದ ಸರ್ಕಲ್ಲಿನಲ್ಲಿ ಮಟಕಾ ಬರೆಯುತ್ತಿದ್ದವನೊಬ್ಬನ ಪ್ರೀತಿಗೆ ಸಿಲುಕಿ ಆತನನ್ನೇ ಮದುವೆಯಾದಳು. ದುಡ್ಡಿತ್ತು, ಆಸ್ತಿಯಿತ್ತು, ನೆಮ್ಮದಿ, ಸುಖ, ಶೋಕಿ ಎಲ್ಲವೂ ಇತ್ತು ನಿಜ. ಆದರೆ ಆಪತ್ತೆಂಬುದು ಕೊನೇ ತಮ್ಮ ಸಾದಿಕ್‌ನ ಮೂಲಕವೇ ಇಣುಕಿಣುಕಿ ತಲೆ ಹಾಕಲಾರಂಭಿಸಿತ್ತು.


ಕೊನೇ ತಮ್ಮ ಸಾದಿಕ್ ಮೈಸೂರು ರಸ್ತೆ ನಾಯಂಡ ಹಳ್ಳಿಯ ಹುಡುಗಿಯೊಬ್ಬಳನ್ನು ಮದುವೆಯಾಗಿ ಚಂದ್ರಾಲೇಔಟ್‌ಗೆ ವಲಸೆ ಹೋದನಾದರೂ ಅಣ್ಣ ಜಾನಿ ಫಾರಿನ್ನಿಗೆ ಹೋಗಿ ಸಿಕ್ಕಾಪಟ್ಟೆ ಹಣ ಖಮಾಯಿಸಿದ್ದಾನೆಂದು ಹಾಗೆ ದುಡ್ಡು ಖಮಾಯಿಸಿ ಒಡಹುಟ್ಟಿದ ತನಗೇನೂ ಮಾಡೇ ಇಲ್ಲ ಎಂದು ಮತ್ಸರಕ್ಕೆ ಬಿದ್ದ. ಅದ್ಯಾರು ತಲೆಕೆಡಿಸಿದರೋ ಅಣ್ಣ ಸೌದಿಯಲ್ಲಿ ಖಮಾಯಿಸಿದ್ದರಲ್ಲಿ ತನಗೂ ಪಾಲು ಬರಬೇಕೆಂಬ ನಿರ್ಧಾರಕ್ಕೆ ಬಂದ. ಅಣ್ಣ ತನ್ನ ಸ್ವಂತ ಪರಿಶ್ರಮದಿಂದ ಖಮಾಯಿಸಿದ್ದಕ್ಕೆ ಆತ ಮಾತ್ರವೇ ಹಕ್ಕುದಾರನೆಂದಾಗಲಿ, ಪಿತ್ರಾರ್ಜಿತವಲ್ಲದ ಬೇರೆ ಯಾವ ಸೊತ್ತಿಗೂ ಯಾರಿಗೂ ಹಕ್ಕಿಲ್ಲವೆಂಬ ಪರಿವೆಯಾಗಲಿ ಸಾದಿಕ್‌ಗಿರಲಿಲ್ಲ. ಯಾರೆಲ್ಲ ಸೇರಿ ಬುದ್ಧಿ ಹೇಳಿದರಾದರೂ ಅದನ್ನು ಕೇಳುವಷ್ಟು ತಾಳ್ಮೆ ಸಾದಿಕ್‌ಗಿರಲಿಲ್ಲ. ಅಣ್ಣ ಅಂದಮೇಲೆ ತನ್ನ ತಮ್ಮನಿಗೆ ಮಾಡಲೇಬೇಕಲ್ವ? ಒಡಹುಟ್ಟಿದವರಿಗೇ ಮಾಡದೇ ಇರೋನು ಮನುಷ್ಯನಾ? ತನ್ನ ಮನೆಯವರಿಗೆಲ್ಲ ಮೊದಲು ಮಾಡಿದ ನಂತರವೇ ಮಿಕ್ಕೆಲ್ಲ ಎಂದು ಕುರಾನ್‌ನಲ್ಲಿ ಹೇಳಿಲ್ವಾ? ಎಂದು ವಿತಂಡವಾಗಿ ದಬಾಯಿಸುತ್ತಿದ್ದ.

ಆರ್ಥಿಕವಾಗಿ ಕಾಲಕ್ರಮೇಣ ಚೇತರಿಸಿಕೊಂಡ ಅಣ್ಣ ಜಾನಿ ತನ್ನ ಪ್ರೀತಿಯ ತಂಗಿ ಇಶ್ರತ್‌ಳನ್ನು ಬಹರೈನ್‌ಗೆ ಕರೆಸಿಕೊಂಡ.


ಕೆಲಕಾಲ ಬಹರೇನ್‌ನಲ್ಲಿದ್ದು ಸಾಕಷ್ಟು ದುಡ್ಡಿನ ಸಮೇತವೇ ಬೆಂಗಳೂರಿಗೆ ವಾಪಸ್ಸಾದ ಇಶ್ರತ್‌ಳನ್ನು ಅಣ್ಣ ಜಾನಿಯೇ ನಿಂತು ಅದ್ದೂರಿಯಾಗಿ ನಿಖಾ ಮಾಡಿಸಿದ್ದ. ಅಣ್ಣನ ದುಡ್ಡಲ್ಲಿ ಸ್ವಂತ ಮನೆಯನ್ನೂ ಖರೀದಿಸಿದ್ದಳು. ಫಾರೂಕ್ಯ ನಗರದಲ್ಲಷ್ಟೇ ಅಲ್ಲ, ಟ್ಯಾನರಿ ರಸ್ತೆಯಲ್ಲೂ ಹೊಸ ಮನೆ ಕೊಂಡಳು. ದುಡ್ಡು ಬರುತ್ತಿದ್ದಂತೆ ತಂಗಿ ಶಬಾನಾ ಅದೇ ಗೋರಿಪಾಳ್ಯದ ತಮಿಳು ಕ್ರಿಶ್ಚಿಯನ್ ಹುಡುಗನೊಬ್ಬನ ಪ್ರೀತಿಗೆ ಬಿದ್ದು ಮನೆ ಬಿಟ್ಟಳು. ತಮ್ಮ ಜಾವಿದ್ ಮದುವೆಯಾಗಿ ಮತ್ತೆಲ್ಲಿಗೋ ವಲಸೆ ಹೋದರೆ ಉಳಿದವನು ಸಾದಿಕ್ ಮಾತ್ರ. ಆತ ಇಶ್ರತ್‌ಳ ಕೊನೇ ತಮ್ಮ!

ಬರುಬರುತ್ತ ಸಾದಿಕ್‌ನ ಕಾಟ ಯಾವ ಮಟ್ಟ... ಬಂತೆಂದರೆ 2008ರಲ್ಲಿ ಬೆಂಗಳೂರಿಗೆ ಬಂದಿದ್ದ ಜಾನಿಯನ್ನು ಟ್ಯಾನರಿ ರಸ್ತೆಯಿಂದ ಓಡಿಸಿಕೊಂಡು ಬಂದ ಸಾದಿಕ್ ಅಣ್ಣನನ್ನು ನಡುರಸ್ತೆಯಲ್ಲೇ ಕತ್ತರಿ... ಹಾಕಿಬಿಟ್ಟ. ಕತ್ತು ಸೀಳಿತ್ತಾದರೂ ಸಕಾಲದಲ್ಲಿ ಆಸ್ಪತ್ರೆ... ಪಾಲಾಗಿ ಜಾನಿ ಬದುಕುಳಿದ. ತದನಂತರ ಬಹರೈ... ಸೇರಿಕೊಂಡವನು ಬೆಂಗಳೂರಿಗೆ ಬರುವುದನ್ನೇ ನಿಲ್ಲಿಸಿಬಿಟ್ಟ. ಹಾಗಂತ ಜಿದ್ದು ಬಿಡಲಿಲ್ಲ. ಸುಖಸಂ...

ಟಿಪ್ಪೂನಗರದ ಹಂತಕ ಪಡೆ ಬೆನ್ನಿಗೆ ಗಾಡ್‌ಫಾದರ್ ಜಮೀರ್



ಜಮೀರ್ ಅಹ್ಮದ್




ಆರ್.ವಿ. ದೇವರಾಜ್

ಹಿಂದೆ ಆರ್.ವಿ. ದೇವರಾಜ್ ಚಾಮರಾಜಪೇಟೆಗೆ ನಿಂತು ಬಿಜೆಪಿಯ ಪ್ರಮೀಳಾ ನೇಸರ್ಗಿ ವಿರುದ್ಧ ಸೋಲಲು ಮುಖ್ಯ ಕಾರಣನಾಗಿದ್ದು ಟಿಪ್ಪೂ ನಗರದ ಲತೀಫ್ ಖಾನ್. ಮೈಸೂರು ರಸ್ತೆಯ ವಿನಾಯಕ ಟಾಕೀಸ್ ಎದುರು ಭಾಗವಾದ ಪರಮ ಕೊಳಕು ಮುಸ್ಲಿಂ ಕೊಂಪೆ ಟಿಪ್ಪೂ ನಗರದ ಮಸೀದಿ ಅಧ್ಯಕ್ಷರಾಗಿದ್ದ ಲತೀಫ್ ಖಾನ್ ಬಗ್ಗೆ ಆ ಭಾಗದ ಮುಸ್ಲಿಂರಲ್ಲಿ ವಿಶೇಷ ಪ್ರೀತಿ-ಅಕ್ಕರೆಯಿತ್ತು.


ಇದರ ಫಲವಾಗೇ ಪಕ್ಷೇತರರಾಗಿ ನಿಂತು ಲತೀಫ್ 13 ಸಾವಿರಕ್ಕೂ ಅಧಿಕ ಮತಗಳನ್ನು ಪಡೆದ ಫಲವಾಗಿ ಕಾಂಗ್ರೆಸ್ಸಿಗೆ ಬರಬೇಕಿದ್ದ ಮುಸ್ಲಿಂ ಮತಗಳು ತಪ್ಪಿ ಬಿಜೆಪಿಯ ಪ್ರಮೀಳಾ ನೇಸರ್ಗಿ ಗೆಲ್ಲುವಂತಾಯ್ತು. ಬಹುಶಃ ಲತೀಫ್ ಬದುಕಿದ್ದರೆ ಈ ಹೊತ್ತಿಗೆ ಚಾಮರಾಜಪೇಟೆಯ ಶಾಸಕರಾಗಿರುತ್ತಿದ್ದದ್ದು ಜಮೀರ್ ಅಲ್ಲ. ಅದೇನಾಯಿತೋ ಹೃದಯಾಘಾತಕ್ಕೆ ಸಿಲುಕಿ ಅಕಾಲಮರಣಕ್ಕೆ ತುತ್ತಾದ ಲತೀಫ್ ಖಾನ್‌ರ ಮಕ್ಕಳ ಪೈಕಿ ಕೊನೆಯವನಾದ ಶಬ್ಬೀರ್ ಖಾನನೇ ಈಗ ಸಾದಿಕ್ ಹತ್ಯೆಯಲ್ಲಿ ಪ್ರಮುಖ ಆರೋಪಿ.

ಲತೀಫ್ ಖಾನ್‌ರ ತಮ್ಮ ಖಾನ್ ಸಾಬರ ಮಗ ಸಿಕಂದರ್ ಖಾನ್ ಎಂಬಾತನೂ ಹಂತಕ ಪಡೆಯಲ್ಲಿದ್ದು ಸದ್ಯ ಪರಪ್ಪನ ಅಗ್ರಹಾರ ಜೈಲು ಪಾಲಾಗಿದ್ದಾನೆ. ಲಂಗಡಾ ಜಮೀರ್‌ನಂಥ ಸುಪಾರಿ ಹಂತಕನ ಪಡೆಯಲ್ಲಿ ಬಾಡಿಗೆ ಕೊಲೆಗಡುಕರಾಗಿ ಹೊಟ್ಟೆಪಾ... ನಡೆಸಬೇಕಾದ ದಾರಿದ್ರ್ಯವಾಗಲಿ ದುರ್ಗತಿಯಾಗಲಿ ಲತೀಫ್ ಮಕ್ಕಳಿಗಿರಲಿಲ್ಲ. ... ರಾಜಕೀಯ ಬಿಡಬೇಕಲ್ಲ ಲತೀಫ್‌ರ ಮತ್ತೊಬ್ಬ ತಮ್ಮ ಅಯ್ಯೂಬ್ ಸದ್ಯ ಚಾಮರಾಜ... ಶಾಸಕ ಜಮೀರ್‌ರ ಬಲಗೈ ಬಂಟ. ಕೆ.ಆರ್. ಮಾರುಕಟ್ಟೆಯ ಫುಟ್‌ಪಾತ್ ಆಮದನಿಯ... ಶಾಸಕ ಜಮೀರ್ ಸದ್ಯ ಲತೀಫ್ ತಮ್ಮ ಅಯ್ಯೂಬ್‌ಗೆ ವಹಿಸಿದ್ದಾರೆ. ತಿಂಗಳೊ... ಹೆಚ್ಚೂಕಮ್ಮಿ ಒಂದು ಲಕ್ಷದ ಉತ್ಪತ್ತಿಯಿರುವ ಕಲಾಸಿಪಾಳ್ಯ ಮಾರುಕಟ್ಟೆಯ ಬ... ಭಾಗದ ಫುಟ್‌ಪಾತ್ 'ಉತ್ಪತ್ತಿಯನ್ನು ನಿಭಾಯಿಸುವುದಕ್ಕಾದರೂ ರೌಡಿ ಪಡೆ ಬೇಕಲ್ಲ?

ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಪುರುಷೋತ್ತಮ್ ಸಾಹೇಬರಿಗೆ ಎಮ್ಮೆಲ್ಲೆ ಜಮೀ... ಮೂಲಕವೇ ಒತ್ತಡ ಹಾಕಿ ಹಂತಕರನ್ನು ಸರೆಂಡರ್ ಮಾಡಿಸಿ ಆ ಮೂಲಕ ಬಾಳೇಗೌ... ತಲೆನೋವನ್ನು ತಪ್ಪಿಸಿ ಹಂತಕರ ಪತ್ತೆಗೂ ನೆರವಾದಂತೆ ಉಪಕರಿಸಿದ ಟಿಪ್ಪೂನ... ಅಯ್ಯೂಬ್ ಇಡೀ ಲಂಗಡಾ ಜಮೀರ್‌ನ ಹಂತಕ ಪಡೆಯ ಸೂತ್ರಧಾರನೋ ಅ... ಶಾಸಕ ಜಮೀರ್ ಈ ಗ್ಯಾಂಗಿಗೆ ಗಾಡ್‌ಫಾದರೋ ಬಲ್ಲವರ್ಯಾರು?



ಸಿಕಂದರ್ ಖಾನ್



ಶಬ್ಬೀರ್ ಖಾನ್

ದೇವತೆಯಂತಿದ್ದ ಅಣ್ಣನೇ ದೂರಾದನೆಂದರೆ ಲ್ಲ ಬೀದಿಪಾಲಾಗುವುದು ಶತಸ್ಸಿದ್ಧ ಎಂಬ ಣಕ್ಕೆ ಬಿದ್ದ ಇಶ್ರತ್ ಬೇರೆಯದೇ ರವೊಂದಕ್ಕೆ ಬಂದಳು.

ಅದು ತಮ್ಮ ಸಾದಿಕ್‌ನನ್ನೇ ನಿಕಾಲಿ ಮಾಡುವ ತ್ರ. ಅನ್ಯಾಯವಾಗಿ ಅಣ್ಣನನ್ನು ಮುಗಿಸಲು ನಿಂತ ಕ್‌ನನ್ನೇ ಮುಗಿಸಿಬಿಟ್ಟರೆ ಸಾವೆಲ್ಲ ದಿಯಿಂದಿರಬಹುದೆಂಬುದು ಆಕೆಯ ದೂರದ ಕೆ. ಅದಕ್ಕೆಂದು ಮತ್ತೊಬ್ಬ ತಮ್ಮ ಜಾವಿದ್ ವಾಹಿದ್‌ನನ್ನು ರೆಡಿ ಮಾಡಿದಳು. ಅಣ್ಣ ಯಿಂದ ತಮ್ಮ ಸಾದಿಕ್‌ನ ಹತ್ಯೆಗೆಂದು 5 ಲಕ್ಷದ ರಿ ಮೊತ್ತವನ್ನೂ ಪಡಕೊಂಡಳು. ಇನ್ನು ಲು ಹಂತಕ ಪಡೆ ಬೇಕಲ್ಲ, ಅದಕ್ಕೆಂದು ಇಶ್ರತ್ ಗೆ ದಕ್ಕಿದವನು ಟಿಪ್ಪೂನಗರದ ಹಳೇ ಕ್ರಿಮಿನಲ್ ಜಮೀರ್!

ಕಾಲದಿಂದಲೇ ಪಿಕ್ ಪಾಕೆಟ್, ಮನೆಗಳವು, ಮಾಲು ಖರೀದಿ ಇತ್ಯಾದಿಗಳಲ್ಲಿ ಪಳಗಿದ ೀರ್ ಅಹ್ಮದ್ ಇಲ್ಲಿಗೆ ವರ್ಷದ ಹಿಂದೆಯೇ ಆಕ್ಸಿಡೆಂಟ್‌ನಲ್ಲಿ ತನ್ನ ಕಾಲೊಂದನ್ನು ಂಡಿದ್ದ. ಹಾಗಿದ್ದೂ ಕದ್ದೂ ಮುಚ್ಚಿ ಇಶ್ರತ್ ಚಕ್ಕಂದಕ್ಕಿಳಿದಿದ್ದ. ತಮ್ಮನನ್ನು ಮುಗಿಸಲು ಸುಪಾರಿ ಕೊಡುತ್ತಾಳೆಂದರೆ ಅದು ಯಾಸವಾದ ಕಮಾಯಿ ಎಂದೇ ಲೆಕ್ಕ ಹಾಕಿದ್ದ. 7ರ ಬುಧವಾರದಂದು ಮುಹೂರ್ತವನ್ನೂ ತ್ತು ಮಾಡಿದ. ಅದಕ್ಕೆಂದು ಬರೋಬ್ಬರಿ ಒಂದು ್ ಹಂತಕರ ಪಡೆಯನ್ನೇ ನಿಗದಿಗೊಳಿಸಿದ್ದ. ಾ ಕಮ್ಮಿ ಟಿಪ್ಪೂನಗರದ ದುಷ್ಕರ್ಮಿಗಳಿಂದಲೇ ಬಿದ್ದ ಹಂತಕ ಪಡೆ ರಕ್ತ ಹರಿಸಲು ಯಾಯಿತಾದರೂ ಸಾದಿಕ್‌ನನ್ನು ತನ್ನ ಕೈಯಾರೆ ಲ್ಲಲೇಬೇಕೆಂದು ಇಶ್ರತ್ ಹಠಕ್ಕೆ ಬಿದ್ದಳು. ಅಂದರೆ ಪೀಡೆ ತಮ್ಮನನ್ನು ತಾನೇ ಕೈಯಾರೆ ಲ್ಲಬೇಕೆಂಬುದು ಆಕೆಯ ಹಠವಾಗಿತ್ತು.

ವುದೋ ಕಾಲಕ್ಕೆ ಗೋರಿಪಾಳ್ಯ ತೊರೆದು ಯಂಡಹಳ್ಳಿಯ ಪತ್ನಿಯ ಮನೆ ಸೇರಿಕೊಂಡಿದ್ದ ಕ್ ಆ ಹೊತ್ತಿಗಾಗಲೇ ಕಾಮಾಕ್ಷಿಪಾಳ್ಯ ಪೊಲೀಸ್ ವ್ಯಾಪ್ತಿಯ ಸುಮನಹಳ್ಳಿ ಸೇತುವೆ ಪಕ್ಕದ ಾ ಕಲ್ಯಾಣ ಮಂಟಪದ ಪಕ್ಕ ಬೆಂಗಳೂರು ್ಸ್ ಎಂಬ ಸ್ಕ್ರಾಪು ಮಳಿಗೆಯೊಂದನ್ನು ಭಿಸಿದ್ದ. ಪ್ರತಿನಿತ್ಯ ಅಲ್ಲಿಂದಲೇ ನಾಯಂಡಹಳ್ಳಿಗೆ ತ್ತಿದ್ದ.

ಇದನ್ನು ಸೂಕ್ಷ್ಮವಾಗೇ ಗಮನಿಸಿದ್ದ ಇಶ್ರತ್ ಮೇ ದು ಸಂಜೆ ಟಿಪ್ಪೂ ನಗರದ ಹಂತಕರೊಂದಿಗೆ ನಹಳ್ಳಿ ಸೇತುವೆ ಬಳಿ ಹೊಂಚು ಹಾಕಿದ್ದಾಳೆ. ಲ್ಲಿ ಉದ್ದದ ಲಾಂಗು. ಯಾವತ್ತೂ ಸೀರೆ ುತ್ತಿದ್ದವಳು ಅವತ್ತು ತನ್ನ ಯೌವನದ ದಿನಗಳಲ್ಲಿ ುತ್ತಿದ್ದ ನೀಲಿಯ ಜೀನ್ಸ್ ಧರಿಸಿದ್ದಾಳೆ. ಜೀನ್ಸಿಗೆ ತೆ ಕಪ್ಪು ಬಣ್ಣದ ಜರ್ಕೀನ್ ಮತ್ತು ತಲೆಗೆ ರ್ಣ ಹೆಲ್ಮೇಟು. ತಮ್ಮ ಜಾವಿದ್‌ಗೆ ಬೈಕನ್ನು ುವಂತೆ ಹೇಳಿ ತಾನೇ ಪಲ್ಸರ್ ಬೈಕಿನ ಹಿಂಬದಿ ದ್ದಾಳೆ. ಹೊರಗಿನಿಂದ ಯಾರೇ ನೋಡಿದರೂ ್ಸ್‌ಧಾರಿ ಯುವಕರಿಬ್ಬರು ಬೈಕಿನ ಮೇಲೆ ಂತೆಯೇ ಕಾಣಿಸುತ್ತಿತ್ತು.

ತಮ್ಮ ಸಾದಿಕ್ ತನ್ನ ಅಂಗಡಿ ಮುಚ್ಚಿ ಬೈಕ್‌ನಲ್ಲಿ ನು ಸುಮನಹಳ್ಳಿ ಮೇಲ್ಸೇತುವೆಗೆ ಬೇಕೆನ್ನುವಷ್ಟರಲ್ಲೇ ಇಶ್ರತ್ ಕೂತಿದ್ದ ಬೈಕು ಅಡ್ಡ ದೆ. ಏನೆಂದು ನೋಡುವುದಕ್ಕೂ ಮೊದಲೇ ಗೆಗೊಂದು ಲಾಂಗ್ ಏಟು ಬಿತ್ತು. ನೋಡುತ್ತಾನೆ ್ರತ್ ರಣಚಂಡಿಯಂತೆ ರಕ್ತಹರಿಸಲು ನಿಂತಿದ್ದ ಅಕ್ಕ ್. 'ಚಿನಾಲ್ಯಾ... ತೂ ಇನ್ಸಾನ್ ನಹೀ.... ನ್...' ಎಂದಿದ್ದೇ ತಲೆಗೆ ಮತ್ತೊಂದು ಲಾಂಗು ದ್ದಾಳೆ. ಅಮ್ಮಾಗೇ ಎಂದು ಎದ್ದೂ ಬಿದ್ದೂ ಓಡಗಿದ ಸಾದಿಕ್ ಎಡವಿ ಮೋರಿಯೊಂದಕ್ಕೆ ್ದಿ ಒದ್ದಾಡುತ್ತಿದ್ದರೂ ಬಿಡದೆ ಇಶ್ರತ್ ಮೋರಿಗೇ ುಕಿ ಸಾದಿಕ್‌ನನ್ನು ಕತ್ತರಿಸಿದ್ದಾಳೆ. ಸುತ್ತುವರಿದಿದ್ದ ್ಪೂನಗರದ ಹಂತಕ ಪಡೆಗೆ ಆಕೆಯನ್ನು ಾವಲಾಗಿ ಕಾಯುವುದಷ್ಟೇ ಉಳಿದಿದ್ದ ಕೆಲಸ. ತಮ್ಮ ಇನ್ನೇನು ರಕ್ತ ಕಾರಿ ಹೆಣವಾದ ುದನ್ನು ಖಾತರಿಪಡಿಸಿಕೊಂಡೇ ಇಶ್ರತ್ ವಾಪಸ್ಸು ಹತ್ತಿದ್ದಾಳೆ. ರಕ್ತ ತೊಟ್ಟಿಕ್ಕುತ್ತಿದ್ದ ಲಾಂಗು, ರ್ಜರೆಯುತ್ತಿದ್ದ ಬೈಕು, ಅದರ ಹಿಂಭಾಗದಲ್ಲಿ ್ಸ್-ಜರ್ಕಿನ್ನು ತೊಟ್ಟು ನಿರಾಳ ಕೂತಿದ್ದ ಆ ಸು, ಆಕೆಯ ಸುತ್ತ ಲಾಂಗ್‌ಧಾರಿ ಬೈಕರುಗಳ ಕೆಲಸ ಮುಗಿಸಿದ ತೃಪ್ತಿಯಲ್ಲಿ ತೊಟ್ಟ ಟ್ಟನ್ನು ಆಕೆ ತೆಗೆಯುತ್ತಿದ್ದಂತೆಯೇ ಬೀಸು ಗಾಳಿಗೆ ಾಡಿದ ಆಕೆಯ ತಲೆಗೂದಲಿತ್ತಲ್ಲ- ಂಡಿಯೋ ಚಾಮುಂಡಿಯೋ ಪಾತಾಳ ಯೋ....

● ರಾ.ಸೋಮನಾಥ್

ದಾವಣಗೆರೆ: ತೇಲಿತು 'ಕಮಲ', ಮುಳುಗಿತು 'ಕೈ'

ಪಾರ್ಲಿಮೆಂಟ್ ಚುನಾವಣೆ ಮುಗಿದ ನಂತರ ದಾವಣಗೆರೆ ಕೊಂಚ ತಣ್ಣಗಾಗಿದೆ. ಮಲ್ಲಿಕಾರ್ಜುನ ಮತ್ತೆ ಮುಗ್ಗರಿಸಿದ್ದರೆ ಸಿದ್ದೇಶ್ವರ್ ಕಷ್ಟಪಟ್ಟು ಮೂರನೆ ಬಾರಿ ಗೆಲುವಿನ ನಗೆ ಬೀರಿದ್ದಾರೆ. ಜೆಡಿಎಸ್‌ನಿಂದ ಅಖಾಡಕ್ಕಿಳಿದಿದ್ದ ಮಹಿಮಾ ಪಟೇಲ್ ಪಡೆದುಕೊಂಡ 46 ಸಾವಿರ ಚಿಲ್ಲರೆ ಮತಗಳು ಪಟೇಲ್‌ಗೆ ನೆರವಾಗಿದ್ದಕ್ಕಿಂತ ಮಲ್ಲಿಕಾರ್ಜುನ್‌ಗೆ ಎಡವಟ್ಟು ಮಾಡಿದ್ದೇ ಹೆಚ್ಚು. 2009ರ ಚುನಾವಣೆಯಲ್ಲಿ ಕೇವಲ ಎರಡು ಸಾವಿರ ಮತಗಳ ಅಂತರದಿಂದ ಸೋತಿದ್ದ ಮಲ್ಲಿಕಾರ್ಜುನ್ ಈ ಬಾರಿ 17,607 ಮತಗಳಿಂದ ಮುಗ್ಗರಿಸಬೇಕಾಗಿ ಬಂದದ್ದು ಮಹಿಮಾ ಪಟೇಲ್ 'ಥರ್ಡ್' ಫೈಟಿನಿಂದಲೆ. ಕಳೆದ ಸಲ ಕಾಂಗ್ರೆಸಿಗೆ ಚನ್ನಗಿರಿ ಕ್ಷೇತ್ರ ಕೈ ಕೊಟ್ಟಿತ್ತು; ಈ ಬಾರಿ ಹೊನ್ನಾಳಿ, ಹರಿಹರ, ಚನ್ನಗಿರಿ ಕ್ಷೇತ್ರಗಳ ಜೊತೆಗೆ ಸ್ವತಃ ಮಲ್ಲಿಕಾರ್ಜುನ ಶಾಸಕರಾಗಿರುವ ದಾವಣಗೆರೆ ಉತ್ತರ ವಿಧಾನ ಸಭಾಕ್ಷೇತ್ರವೇ ಅವರಿಗೆ ಮುಳುವಾಗಿರೋದು ಅಚ್ಚರಿಯ ಸಂಗತಿ. ಸ್ವಂತ ಕ್ಷೇತ್ರದಲ್ಲೆ 23 ಸಾವಿರ ಮತಗಳ ಲೀಡನ್ನು ಬಿಜೆಪಿಗೆ ಬಿಟ್ಟುಕೊಟ್ಟು ತಮ್ಮ ಸೋಲನ್ನು ತಾವೇ ಆಹ್ವಾನಿಸಿಕೊಂಡಿದ್ದಾರೆ.


ಒಂದು ರೀತಿಯಲ್ಲಿ, ಶಾಮನೂರು ಫ್ಯಾಮಿಲಿಗೆ ಪಾರ್ಲಿಮೆಂಟ್ ಚುನಾವಣೆಯಲ್ಲಿ ಗೆಲುವು ದಕ್ಕಿದ್ದೇ ಕಡಿಮೆ. 1998 ರಲ್ಲಿ ಬಿಜೆಪಿಯ ಜಿ. ಮಲ್ಲಿಕಾರ್ಜುನಪ್ಪ ಎದರು ಕಾಂಗ್ರೆಸಿನಿಂದ ಸ್ಪರ್ಧಿಸಿದ್ದ ಶಾಮನೂರು ಶಿವಶಂಕರಪ್ಪ 11,332 ಮತಗಳಿಂದ ಗೆಲುವು ಸಾಧಿಸಿದ್ದು ಬಿಟ್ಟರೆ ದಾವಣಗೆರೆ ಸಂಪೂರ್ಣವಾಗಿ ಕಮಲದ ವಶವಾಗುತ್ತಲೇ ಬಂದಿದೆ. 1999ರ ಎಂಪಿ ಎಲೆಕ್ಷನ್‌ನಲ್ಲಿ ಬಿಜೆಪಿಯ ಜಿ.ಮಲ್ಲಿಕಾರ್ಜುನಪ್ಪ ಸಾಧಿಸಿದ ಗೆಲುವನ್ನು ಅವರ ಮಗ ಜಿ.ಎಂ. ಸಿದ್ದೇಶ್ವರ್ ಸತತ 2004, 2009 ಮತ್ತು 2014ರವರೆಗೂ ಮುಂದುವರೆಸಿಕೊಂಡೇ ಬಂದಂತಾಗಿದೆ.

2009ರ ಚುನಾವಣೆಯಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್ ನಿರಾಯಾಸವಾಗಿ ಗೆಲ್ಲಬಹುದಾಗಿತ್ತು. ಆದರೆ ಸಹೋದರ ಗಣೇಶ್ ಕೈಗೆ ಚುನಾವಣಾ ಜವಾಬ್ದಾರಿ ನೀಡಿದ್ದೇ ಮಲ್ಲಿಕಾರ್ಜುನ್ ಪಾಲಿಗೆ ದೊಡ್ಡ ಎಡವಟ್ಟಾಗಿತ್ತು. ಇನ್ನು 2014ರ ಚುನಾವಣೆಯಲ್ಲಿ ಮೋದಿ ಅಲೆಯ ಹೊರತಾಗಿಯೂ ಸಿದ್ದೇಶ್ವರರನ್ನು ಮಣಿಸುವ ಛಾನ್ಸು ಕಾಂಗ್ರೆಸ್ ಕೈಲಿದ್ದರೂ ಶಾಮನೂರು ರಾಜಕೀಯ ಏಕಾಧಿಪತ್ಯದ ಎಡವಟ್ಟು ಮತ್ತೊಂದು ಸೋಲಿಗೆ ಎರವಾಗಿದೆ.

ಮಹಿಮಾ ಪಟೇಲ್ ಕಳೆದ 2013ರ ಅಸೆಂಬ್ಲಿ ಚುನಾವಣೆಯಲ್ಲಿ ಚನ್ನಗಿರಿ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ಗೆ ಹರಸಾಹಸ ಪಟ್ಟರೂ ಸಿಕ್ಕಿರಲಿಲ್ಲ, ಕಡೆಗೆ ದಾವಣಗೆರೆ ಉತ್ತರ ಕ್ಷೇತ್ರದ ಉಮೇದುವಾರಿಕೆಯನ್ನಾದರೂ ಕಾಂಗ್ರೆಸ್ ಕೊಡುತ್ತದೆಯೇ ಎಂದು ನೋಡುತ್ತಿದ್ದ ಅವರಿಗೆ ಅಲ್ಲೂ ಮಲ್ಲಿಕಾರ್ಜುನ್ ಅಡ್ಡಗಾಲಾಕಿ ತಾನೇ ಉತ್ತರದ ಅಭ್ಯರ್ಥಿಯಾಗಿ ಕಣಕ್ಕಿಳಿದು ಗೆದ್ದುಬಂದಿದ್ದರು. ಕಡೇಪಕ್ಷ ಪಾರ್ಲಿಮೆಂಟ್ ಚುನಾವಣೆಯ ಟಿಕೆಟನ್ನಾದರೂ ಪಕ್ಷ ತನಗೆ ಕರುಣಿಸಬಹುದೆಂದು ಕೈ ಪಾಳೆಯದಲ್ಲೇ ಉಳಿದುಕೊಂಡಿದ್ದ ಮಹಿಮಾ ಪಟೇಲ್‌ರನ್ನು ಪಕ್ಷ ಕೆಟ್ಟದಾಗಿ ನಡೆಸಿಕೊಂಡಿತು. ಸ್ವತಃ ಮಹಿಮಾ ಪಟೇಲ್ ಟಿಕೆಟ್‌ಗಾಗಿ ಕೇಳಿಕೊಂಡರೂ ರಾಜ್ಯ 'ಕೈ'ಕಮಾಂಡ್ ಮತ್ತು ದೆಹಲಿಯ ಹೈಕಮಾಂಡ್ ಒನ್ಸ್ ಎಗೇನ್ ಶಾಸಕ ಮಲ್ಲಿಕಾರ್ಜುನ್‌ಗೇ ಮಣೆ ಹಾಕಿದ್ದರು. ಬಿಜೆಪಿಯ ಸಿದ್ದೇಶ್ವರ್ ಎದುರು ಮಹಿಮಾ ವೀಕ್ ಕ್ಯಾಂಡಿಡೇಟ್ ಎನ್ನುವುದು ಹೈಕಮಾಂಡಿನ ಅಭಿಪ್ರಾಯವಾಗಿತ್ತು. ತನಗೆ ಮತ್ತೊಮ್ಮೆ ಟಿಕೆಟ್ ವಂಚಿಸುವ ಪ್ರಯತ್ನ ನಡೆಯುತ್ತಿರುವುದು ಗಮನಕ್ಕೆ ಬರುತ್ತಿದ್ದಂತೆಯೇ ಮಹಿಮಾ ಪಕ್ಷದಿಂದ ಹೊರನಡೆಯುವ ಸೂಚನೆಯನ್ನೂ ನೀಡಿದ್ದರು. ಆಗಲಾದರೂ ಶಾಮನೂರು ಶಿವಶಂಕರಪ್ಪ ಎಚ್ಚೆತ್ತುಕೊಂಡು ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಡುವ ಯತ್ನಕ್ಕೆ ಮುಂದಾಗಿದ್ದರೆ ಅಥವಾ ಪಾರ್ಲಿಮೆಂಟ್‌ಗೆ ಮಲ್ಲಿಕಾರ್ಜುನ್ ಆಯ್ಕೆಯಾದರೆ ನಿನ್ನನ್ನೇ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸುತ್ತೇವೆ ಅಂತ ಮಹಿಮಾ ಪಟೇಲ್‌ರ ತಲೆ ನೇವರಿಸಿದ್ದರೂ ಕಾಂಗ್ರೆಸ್ ದಿಗ್ವಿಜಯ ಸಾಧಿಸಬಹುದಿತ್ತು. ಮಲ್ಲಿಕಾರ್ಜುನ ನಿರಾಯಾಸವಾಗಿ ಪಾರ್ಲಿಮೆಂಟ್ ಸದಸ್ಯರಾಗಿಬಿಡುತ್ತಿದ್ದರು. ಆದರೆ ಮತ್ತೊಬ್ಬರನ್ನು ಓಲೈಸುವುದು ತಮ್ಮ ಏಕಾಧಿಪತ್ಯಕ್ಕೆ ಧಕ್ಕೆ ಎಂದುಕೊಂಡ ಶಾಮನೂರು, ಮಹಿಮಾ ಪಾರ್ಟಿ ಬಿಡುವ ಮಾತನಾಡಿದ್ದಕ್ಕೆ ಪ್ರತಿಯಾಗಿ 'ಆತ ಹೇಪರ್ ಹಾವು ಬಿಡ್ತಾನೆ, ಅಷ್ಟೆ!' ಅಂದುಬಿಟ್ಟಿದ್ದರು. ಮೊದಲೇ ಟಿಕೆಟ್ ವಂಚನೆಯಿಂದ ಬುಸುಗುಡುತ್ತಿದ್ದ ಮಹಿಮಾ, ಶಾಮನೂರು ಕೊಟ್ಟ ಕಮೆಂಟಿನಿಂದ ಕೆರಳಿ ಕಾಂಗ್ರೆಸ್ ತೊರೆದಿದ್ದರು. ಹಾಗೆ ಹೊರಬಂದವರಿಗೆ ದೇವೇಗೌಡರ 'ಹೊರೆ' ಸಿದ್ಧವಾಗಿತ್ತು. ಜೆಡಿಎಸ್‌ನಿಂದ ಕಣಕ್ಕಿಳಿದ ಮಹಿಮಾ ಪಟೇಲ್‌ಗೆ ತಾನು ಗೆಲ್ಲುವುದಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಿದ್ದರೂ ತನ್ನ ಲುಕ್ಸಾನು ಎಷ್ಟೆಂಬುದನ್ನು ಶಾಮನೂರು ಟೀಮಿಗೆ ತೋರಿಸಬೇಕಿತ್ತು, ಅದನ್ನು ಮಾಡಿ ತೋರಿಸಿದ್ದಾರೆ.

ಶಾಮನೂರು ಶಿವಶಂಕರಪ್ಪ ತಾಳ್ಮೆ ಕಳೆದುಕೊಂಡು ಆಡಿದ ಮಾತು ಮಲ್ಲಿಕಾರ್ಜುನ್‌ಗೆ ಮುಳುವಾದಷ್ಟೆ ಮತ್ತೊಂದು ಎಡವಟ್ಟು ಹರಿಹರದಲ್ಲಿ ನಡೆದಿತ್ತು. ಅದೇನೆಂದರೆ, ಬಿಜೆಪಿಯ ಮಾಜಿ ಶಾಸಕ ಬಿ.ಪಿ.ಹರೀಶ್ ಪೊಲಿಟಿಕಲ್ ಗಾಡ್‌ಫಾದರ್ ಯಡ್ಡಿಯ ಜೊತೆ ಮುನಿಸಿಕೊಂಡು ಕಾಂಗ್ರೆಸ್ ಸೇರಿದ್ದೇ ತಡ, ಹರಿಹರದ ಕುರುಬರು 'ಕೈ' ವಿರುದ್ಧ ತಿರುಗಿಬಿದ್ದರು. ಈ ಹರೀಶ್ ಮೊದಲಿನಿಂದಲೂ ಹರಿಹರದ ಕುರುಬ ನಾಯಕ ರಾಮಪ್ಪ ಮತ್ತು ನಾಗಪ್ಪನವರ ವಿರುದ್ಧ ರಾಜಕೀಯ ಮಾಡಿಕೊಂಡು ಬಂದಂತವನು. ರಾಮಪ್ಪನಾದರು ಕಾಂಗ್ರೆಸ್‌ನ ಕಾಯಂ ಕ್ಯಾಂಡಿಡೇಟು. ಒಮ್ಮೆ ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯೂ ಆಗಿದ್ದವರು. ಬಿ.ಪಿ ಹರೀಶ್ ಕಾಂಗ್ರೆಸ್‌ಗೆ ಎಂಟ್ರಿ ಕೊಡುತ್ತಿದ್ದಂತೇ ಮುಂಬರುವ ಚುನಾವಣೆಗಳಲ್ಲಿ ಹರಿಹರದಲ್ಲಿ ಆತನಿಗೇ ಮಣೆ ಹಾಕುವ ಸೂಚನೆಗಳು ಶಾಮನೂರು ಪಾಳಯದಲ್ಲಿ ಕಾಣಿಸಿಕೊಂಡಿದ್ದವು. ಇದು ರಾಮಪ್ಪ ಮತ್ತು ನಾಗಪ್ಪನಂತಹ ಕುರುಬ ಸಮುದಾಯದ ನಾಯಕರಿಗೆ ತಮ್ಮ ರಾಜಕೀಯ ಅಸ್ತಿತ್ವದ ಪ್ರಶ್ನೆ ಕಾಡುವಂತೆ ಮಾಡಿತ್ತು. ಶಾಮನೂರರ ಈ ರಾಜಕೀಯ ತಂತ್ರಗಾರಿಕೆ ಅವರಿಗೆಲ್ಲ ಸಿಟ್ಟು ತರಿಸಿದ್ದೇ ತಡ ತಕ್ಕಮಟ್ಟಿನ ಕುರುಬ ಓಟುಗಳು ಕಾಂಗ್ರೆಸ್‌ನಿಂದ ದೂರವಾದವು. ಹರಿಹರದಲ್ಲಿ ಮಲ್ಲಿಕಾರ್ಜುನ್‌ಗೆ ಹಿಂದೇಟಾಗಲು ಕೇವಲ ಕುರುಬ ಫ್ಯಾಕ್ಟರ್ ಮಾತ್ರವಲ್ಲದೆ ಮತ್ತೂ ಒಂದು ಕಾರಣವಿದೆ. ಸದ್ಯ ಈಗ ಹರಿಹರದಲ್ಲಿ ಅಧಿಕಾರದಲ್ಲಿರೋದು ಜೆಡಿಎಸ್‌ನ ಶಾಸಕ ಶಿವಶಂಕರ್. ಈ ಶಿವಶಂಕರ್ ಮತ್ತು ಮಹಿಮಾ ನಡುವೆ ನಂಟು ಅಷ್ಟೊಂದೇನು ಚೆನ್ನಾಗಿಲ್ಲ. ಜೊತೆಗೆ ಶಿವಶಂಕರ್‌ಗೂ, ಬಿ.ಪಿ.ಹರೀಶ್‌ಗೂ ಕ್ಷೇತ್ರ ವೈಷಮ್ಯ ಇದ್ದದ್ದೇ. ಹರಿಹರದಲ್ಲಿ ಬಿ.ಪಿ ಹರೀಶ್ ಮತ್ತೆ ಪ್ರಾಬಲ್ಯಕ್ಕೆ ಬರೋದು ತನಗೇ ಕಂಟಕ ಎಂಬುದು ಶಿವಶಂಕರ್‌ಗೆ ಚೆನ್ನಾಗೇ ಗೊತ್ತಿದೆ. ಒಂದೊಮ್ಮೆ ಈ ಬಿ.ಪಿ.ಹರೀಶ್ ಕಾಂಗ್ರೆಸ್‌ಗೆ ಸೇರದೇ ಇದ್ದಿದ್ದರೆ, ಮಹಿಮಾ ಪಟೇಲ್ ಪರ ಕೆಲಸ ಮಾಡಲು ಸಿದ್ಧವಿರದಿದ್ದ ಶಾಸಕ ಶಿವಶಂಕರ್ ಕಾಂಗ್ರೆಸ್‌ಗೆ ನೆರವಾಗುವ ಸಾಧ್ಯತೆ ಇರುತ್ತಿತ್ತು. ಆದರೆ ಹರೀಶ್ ಕಾಂಗ್ರೆಸ್ ಸೇರಿದ್ದರಿಂದ ಮಹಿಮಾ ಮೇಲಿನ ಮುನಿಸಿಗಿಂತ ಕಾಂಗ್ರೆಸ್‌ನಲ್ಲಿ ಬಿ.ಪಿ ಹರೀಶ್ ಬಲಾಢ್ಯನಾಗಿಬಿಟ್ಟರೇನು ಗತಿ? ಎನ್ನುವ ಭಯ ಶಿವಶಂಕರ್‌ಗೆ ಕಾಡಿತ್ತು. ಇದನ್ನೇ ಬಂಡವಾಳ ಮಾಡಿಕೊಂಡ ಬಿಜೆಪಿಯ ಸಿದ್ದೇಶ್ವರ ರಾತ್ರೋರಾತ್ರಿ ಜೆಡಿಎಸ್ ಶಾಸಕ ಶಿವಶಂಕರ್ ಮನೆ ಕದತಟ್ಟಿದ್ದಲ್ಲದೆ ರಾಮಪ್ಪ ವೈ.ನಾಗಪ್ಪನನ್ನೂ ಬಲೆಗೆ ಕೆಡವಿಕೊಂಡು ಹರಿಹರದಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್‌ಗೆ ಹರೋಹರ ಎನಿಸಿಬಿಟ್ಟರು.

ಇನ್ನು ಸ್ವಕ್ಷೇತ್ರ ದಾವಣಗೆರೆ ಉತ್ತರದಲ್ಲೇ ಕಾಂಗ್ರೆಸ್ ಅಭ್ಯರ್ಥಿ ಮಲ್ಲಿಕಾರ್ಜುನ್‌ಗೆ ಬರೋಬ್ಬರಿ 23 ಸಾವಿರ ಮತಗಳ ಹಿನ್ನಡೆಯಾದದ್ದು ಅಚ್ಚರಿಯಾದರೂ ಅದು ಶಾಮನೂರು ಫ್ಯಾಮಿಲಿಯ ಸ್ವಯಂಕೃತಾಪರಾಧ. ಒಂದುವೇಳೆ ಮಲ್ಲಿಕಾರ್ಜುನ್ ಗೆದ್ದು ಪಾರ್ಲಿಮೆಂಟಿಗೆ ಆಯ್ಕೆಯಾದರೆ ಕ್ಷೇತ್ರಕ್ಕೆ ಮುಂದಿನ ಅಭ್ಯರ್ಥಿ ಯಾರು ಎನ್ನುವ ಪ್ರಶ್ನೆ ಸಹಜವಾಗಿಯೇ ಹುಟ್ಟಿಕೊಂಡಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲೇ ಉತ್ತರ ಕ್ಷೇತ್ರವನ್ನು ತಮಗೆ ಬಿಟ್ಟುಕೊಡಬೇಕೆಂದು ಮುಸ್ಲಿಮರು ಪಟ್ಟು ಹಿಡಿದಿದ್ದರೂ ಹಠಕ್ಕೆ ಬಿದ್ದು ಗಿಟ್ಟಿಸಿಕೊಂಡಿದ್ದ ಶಾಮನೂರು ಫ್ಯಾಮಿಲಿ ಎಸ್.ಎಸ್.ಮಲ್ಲಿಕಾರ್ಜುನ್‌ರನ್ನು ಕಣಕ್ಕಿಳಿಸಿತ್ತು. ಈಗಲಾದರು ಮುಸ್ಲಿಂ ಅಭ್ಯರ್ಥಿಯನ್ನೊ ಅಥವಾ ಮತ್ಯಾರೊ ಸರ್ವಸಮ್ಮತ ವ್ಯಕ್ತಿಯನ್ನೊ ಕಣಕ್ಕಿಳಿಸುತ್ತೇವೆ ಎಂದು ಪ್ರತಿಕ್ರಿಯಿಸಿದ್ದರೆ ಇಂತಹ ಅನಾಹುತ ನಡೆಯುತ್ತಿರಲಿಲ್ಲ. ಆದರೆ ತಮ್ಮ ವಂಶಾವಳಿಯನ್ನು ವಿಸ್ತರಿಸುವಂತೆ ಮಲ್ಲಿಕಾರ್ಜುನ್‌ರ ಮಡದಿ ಶ್ರೀಮತಿ ಪ್ರಭಾರ ಹೆಸರು ಈ ಚರ್ಚೆಗೆ ಎಂಟ್ರಿ ಕೊಟ್ಟದ್ದು ಹಲವರಿಗೆ ಸರಿಕಾಣಲಿಲ್ಲ. ಸ್ವತಃ ಶಾಮನೂರು ಕುಟುಂಬದಲ್ಲೇ ಭಿನ್ನಾಭಿಪ್ರಾಯ ಭುಗಿಲೇಳುವಂತೆ ಮಾಡಿತ್ತು. ಶಿವಶಂಕರಪ್ಪನವರ ಇನ್ನಿಬ್ಬರು ಪುತ್ರರಾದ ಬಕ್ಕೇಶ್ ಮತ್ತು ಗಣೇಶ್ ಕೂಡಾ ಪ್ರಭಾ ಮಲ್ಲಿಕಾರ್ಜುನ ಹೆಸರಿನ ಪ್ರಸ್ತಾಪದಿಂದ ಮನಸ್ತಾಪಗೊಂಡು ಚುನಾವಣಾ ಪ್ರಚಾರದ ಉಸಾಬರಿಗೇ ಬರಲಿಲ್ಲ. ಈಗಲಾದರೂ ಉತ್ತರ ಮತಕ್ಷೇತ್ರದ ಉಮೇದುವಾರಿಕೆ ತಮ್ಮ ಕೈಗೆ ಬರಬಹುದೆಂದು ಕೊಂಡಿದ್ದ ಮುಸ್ಲಿಮ್ ನಾಯಕರು ಶ್ರೀಮತಿ ಪ್ರಭಾ ಎಂಟ್ರಿಯಿಂದ ವಿಚಲಿತರಾದದ್ದೇ ಕೈಗೆ ದೊಡ್ಡ ಏಟು ನೀಡಿದೆ. ಇಂತಹ ಅವಕಾಶವನ್ನು ನಯವಾಗಿ ಬಳಸಿಕೊಂಡ ಸಿದ್ದೇಶ್ವರ್, ಮಲ್ಲಿಕಾರ್ಜುನರ ವಿರೋಧಿಗಳನ್ನು ಬಳಸಿಕೊಂಡು ಜಾಣ್ಮೆಯ ಹೆಜ್ಜೆಯಿಟ್ಟಿದ್ದರು.



ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಕಾಂಗ್ರೆಸ್‌ನ 39 ಜನ ಕಾರ್ಪೋರೇಟರುಗಳಿದ್ದರೂ ಮಲ್ಲಿಕಾರ್ಜುನ್‌ಗೆ ಹಿನ್ನಡೆಯಾದಕ್ಕೆ ಅವರ ಸಕ್ಕರೆ ವ್ಯವಹಾರವೂ ಕಾರಣ. ಮಂತ್ರಿ ಶಾಮನೂರು ಶಿವಶಂಕರಪ್ಪನ ಒಡೆತನದಲ್ಲಿರುವ ಕುಕ್ಕುವಾಡ, ಹರಪನಹಳ್ಳಿ ದುಗ್ಗತ್ತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳು ರೈತರಿಗೆ ಇದುವರೆಗೆ ಬಾಕಿ ನೀಡದೆ ಸತಾಯಿಸುತ್ತಿವೆ. ಖುದ್ದು ಸರ್ಕಾರವೇ ಬಾಕಿ ಚುಕ್ತಮಾಡುವಂತೆ ಆದೇಶಿಸಿದ್ದರೂ ಕ್ಯಾರೇ ಎನ್ನದ 'ಧಣಿ'ಗಳಿಗೆ ಇಲ್ಲಿನ ಜನ ಸೋಲಿನ ಬರೆ ಎಳೆದಿದ್ದಾರೆ.







ಹರಪನಹಳ್ಳಿಯಲ್ಲಿ ಶಾಸಕ ಎಂ.ಪಿ.ರವೀಂದ್ರರ ವಿರುದ್ಧ ಇರುವ ಅಲೆ ಮಲ್ಲಿಕಾರ್ಜುನ್ ಸೋಲಿಗೆ ಕಾರಣವಾಯಿತು. ಅಲ್ಲದೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ರವೀಂದ್ರ ವಿರುದ್ಧ ಕೆಜೆಪಿಯಿಂದ ಸ್ಪರ್ಧಿಸಿ ಎರಡನೇ ಸ್ಥಾನ ಪಡೆದಿದ್ದ ಕೊಟ್ರೇಶಿ ನಂತರದ ರಾಜಕೀಯ ಬೆಳವಣಿಗೆಯಲ್ಲಿ ಕೆಜೆಪಿ-ಬಿಜೆಪಿ ಗೊಂದಲದಿಂದಾಗಿ ತಟಸ್ಥವಾಗಿ ಉಳಿದಿದ್ದ. ಆತನನ್ನು ಸೆಳೆದುಕೊಳ್ಳುವ ಪ್ರಯತ್ನವನ್ನು ಮಲ್ಲಿಕಾರ್ಜುನ್ ಮಾಡಬಹುದಿತ್ತು. ಆದರೆ ರವೀಂದ್ರ ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಮಲ್ಲಿಕಾರ್ಜುನರತ್ತ ಕೊಟ್ರೇಶಿ ಸುಳಿಯದಂತೆ ನೋಡಿಕೊಂಡುಬಿಟ್ಟ. ತನ್ನ ರಾಜಕೀಯ ಅಸ್ತಿತ್ವಕ್ಕೆ ಹೀಗೆ ಅಡ್ಡಗಾಲಾಕುತ್ತಿರುವ ರವೀಂದ್ರನಿಗೆ ಪಾಠ ಕಲಿಸಲೆಂದೇ ತನ್ನ ತಟಸ್ಥ ನಿಲುವಿನಿಂದ ಹೊರಬಂದ ಕೊಟ್ರೇಶಿ ಅಧಿಕೃತವಾಗಿ ಬಿಜೆಪಿಗೆ ಹೆಗಲು ಕೊಟ್ಟು ನಿಂತಿದ್ದ. ಬಿಜೆಪಿಗೆ ಅಲ್ಲಿ ಹದಿನೈದು ಸಾವಿರ ಲೀಡ್ ಸಿಕ್ಕಿದ್ದು ಇದೇ ಕಾರಣಕ್ಕೆ.

ಇನ್ನು ಹೊನ್ನಾಳಿಯ ಶಾಸಕ ಶಾಂತನಗೌಡ 2013ರ ಚುನಾವಣೆಯಲ್ಲಿ ಗೆದ್ದದ್ದೇನೋ ನಿಜ, ಆದರೆ ಕ್ಷೇತ್ರದ ಮತದಾರನ ಪಾಲಿಗೆ ಆತ ಯಾವತ್ತಿಗೂ ಶಾಸಕ ಎನಿಸಲೇ ಇಲ್ಲ. ಆತನ ಬಲಹೀನತೆಯೇ ಮಾಜಿ ಸಚಿವ ರೇಣುಕಾಚಾರ್ಯನಿಗೆ ವರದಾನವಾಗಿದೆ. ಗೆದ್ದ ಒಂದೇ ವರ್ಷದಲ್ಲಿ ಮತದಾರರಿಗೆ ಸಪ್ಪೆಯೆನಿಸಿರುವ ಶಾಂತನಗೌಡನ ವಿರುದ್ಧ ಮಿಂಚಿದ ರೇಣುಕಾಚಾರಿ ಬಿಜೆಪಿಯ ಸಿದ್ದೇಶ್ವರ್‌ಗೆ ಏಳು ಸಾವಿರ ಲೀಡ್ ಕೊಡಿಸಿದ್ದಾನೆ. ಮಾಯಕೊಂಡ ಕ್ಷೇತ್ರದ ಶಿವಮೂರ್ತಿನಾಯ್ಕ ಹೆಚ್ಚೂಕಮ್ಮಿ ಜೆಡಿಎಸ್ ಪರವಾಗಿಯೇ ಮುಗುಂ ರಾಜಕಾರಣ ಮಾಡಿದನೆನ್ನುವ ವರ್ತಮಾನವಿದೆ. ಅದಕ್ಕೂ ಒಂದು ಕಾರಣವಿದೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಶಿವಮೂರ್ತಿ ನಾಯ್ಕನ ಗೆಲುವಿಗೆ ಎಸ್.ಎಸ್. ಮಲ್ಲಿಕಾರ್ಜುನ ನೆರವಾಗಲಿಲ್ಲ. ಆಗ ಶಿವಮೂರ್ತಿ ನೆರವಿಗೆ ಬಂದದ್ದು ಆಗಿನ್ನು ಕಾಂಗ್ರೆಸ್‌ನಲ್ಲೇ ಇದ್ದ ಮಹಿಮಾ ಪಟೇಲ್ ಮತ್ತು ತೇಜಸ್ವಿ ಪಾಟೀಲ್. ಆ ಋಣವನ್ನು ಶಿವಮೂರ್ತಿನಾಯ್ಕ ಈಗ ತೀರಿಸಿಕೊಂಡಿದ್ದಾನೆನ್ನುವ ಮಾತುಗಳು ಕೇಳಿಬರುತ್ತಿವೆ.

ಒಟ್ಟಾರೆಯಾಗಿ ದಾವಣಗೆರೆಯ ಪಾರ್ಲಿಮೆಂಟ್ ಫಲಿತಾಂಶವನ್ನು ಸಮೀಕರಿಸುವುದಾದರೆ ಎಸ್.ಎಸ್.ಮಲ್ಲಿಕಾರ್ಜುನ್ ಸೋಲಿಗೆ ಕಾರಣ ಮೋದಿ ಅಲೆಯ ಅಬ್ಬರವೂ ಅಲ್ಲ, ಸಿದ್ದೇಶಿ ಗೆಲುವಿನ ಗೊಬ್ಬರವೂ ಅಲ್ಲ, ತಂದೆ ಮಗನ ದುಡುಕಿನ ರಾಜಕೀಯ ನಿರ್ಧಾರಗಳಷ್ಟೆ!

● ಟಿ.ಎನ್.ಷಣ್ಮುಖ

ರಾಜ್ಯಸಭೆ-ವಿಧಾನ ಪರಿಷತ್ ಚುನಾವಣೆ:
ನಡೆಯುತ್ತಿದೆ ಭಾರೀ ಲಾಬಿ


ಮುಂದಿನ ತಿಂಗಳು 19 ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಕ್ಷಣಗಣನೆ ಶುರುವಾಗುತ್ತಿದ್ದಂತೆ ರಾಜಕೀಯ ಕಸರತ್ತು ತೀವ್ರಗೊಂಡಿದೆ. ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ಕರ್ನಾಟಕದಿಂದ ನಾಲ್ವರು ಚುನಾಯಿತರಾಗಬೇಕಿದ್ದು ಇದಕ್ಕಾಗಿ ಲಾಬಿ ರಾಜಕೀಯ ಮತ್ತು ಪಕ್ಷಗಳ ಬಣ ರಾಜಕೀಯ ದಿನೇದಿನೇ ನಾನಾ ಬಣ್ಣಗಳನ್ನು ಪಡೆಯುತ್ತಿದೆ. ತೆರವಾಗಲಿರೋದು ನಾಲ್ಕು ರಾಜ್ಯಸಭಾ ಸ್ಥಾನಗಳು. ಇದರಲ್ಲಿ ಕಾಂಗ್ರೆಸ್ ಎರಡು, ಬಿಜೆಪಿ ಒಂದನ್ನು ನಿರಾಯಾಸವಾಗಿ ಪಡೆಯಬಹುದು. ಆದರೆ ಉಳಿದೊಂದು ಸ್ಥಾನಕ್ಕಾಗಿ ಕಾಂಗ್ರೆಸ್-ಜೆಡಿಎಸ್ ತಂತ್ರಗಾರಿಕೆಯಲ್ಲಿ ತೊಡಗಿವೆ. ಜೆಡಿಎಸ್ ಬೆಂಬಲ ಪಡೆಯಲು ಕಾಂಗ್ರೆಸ್, ಕಾಂಗ್ರೆಸ್ ಬೆಂಬಲ ಪಡೆಯಲು ಜೆಡಿಎಸ್ ತಮ್ಮದೇ ಆದ ಲೆಕ್ಕಾಚಾರದಲ್ಲಿ ತೊಡಗಿವೆ.

ರಾಜ್ಯಸಭಾ ಚುನಾವಣೆಗೆ ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಮತ್ತು ಬಿ.ಕೆ.ಹರಿಪ್ರಸಾದ್ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಸಿಗೋದು ಬಹುತೇಕ ನಿಕ್ಕಿಯಾಗಿದೆ. ಒಂದೊಮ್ಮೆ ಇವರಿಗೆ ಟಿಕೆಟ್ ಸಿಕ್ಕರೆ, ಮತ್ತೊಂದು ಅವಧಿಗೆ ಇವರು ಚುನಾಯಿತರಾಗೋದು ನಿಶ್ಚಯ. ಮೂರನೆಯ ಸ್ಥಾನ ಬಿಜೆಪಿಗೆ. ಇನ್ನುಳಿದ ಒಂದು ಸ್ಥಾನಕ್ಕಾಗಿಯೇ ಕಾಂಗ್ರೆಸ್-ಜೆಡಿಎಸ್ ತಂತ್ರಗಾರಿಕೆಯಲ್ಲಿ ತೊಡಗಿರೋದು.

ಬಿಜೆಪಿ-ಕಾಂಗ್ರೆಸ್ ಪಕ್ಷಗಳಿಂದ ಮೂವರು ಗೆದ್ದ ನಂತರ ಉಳಿದ ಕಾಂಗ್ರೆಸ್ ಹಾಗೂ ಜೆಡಿಎಸ್ ಮತಗಳು ಒಗ್ಗೂಡಿದರೆ ನಾಲ್ಕನೇ ಅಭ್ಯರ್ಥಿ ಗೆಲ್ಲಬಹುದು. ಆ ನಾಲ್ಕನೇ ಅಭ್ಯರ್ಥಿ ತಾನೇ ಯಾಕಾಗಬಾರದು ಎಂಬುದು ಮಾಜಿ ಕೇಂದ್ರ ವಿತ್ತ ಸಚಿವ ಪಿ.ಚಿದಂಬರಂ ಅವರದು. ದೇವೇಗೌಡರು ಪ್ರಧಾನಿಯಾಗಿದ್ದಾಗ ಅವರ ಕೇಂದ್ರ ಸಂಪುಟದಲ್ಲಿ ಸಚಿವರಾಗಿದ್ದೋರು ಈ ಚಿದಂಬರಂ. ಅಂದಿನಿಂದ ಇಂದಿನವರೆವಿಗೂ ವೈಯಕ್ತಿಕ ನೆಲೆಗಟ್ಟಿನಲ್ಲಿ ಇವರ ಮಧ್ಯೆ ಮಧುರ ಬಾಂಧವ್ಯವೇ ಇದೆ. ಈಗಾಗಲೇ ಚಿದಂಬರಂ ಅವರು ಈ ಸಂಬಂಧ ದೇವೇಗೌಡರೊಂದಿಗೆ ದೂರವಾಣಿಯಲ್ಲಿ ಚರ್ಚೆ ನಡೆಸಿದ್ದು, ಮುಂದಿನ ವಾರ ತಾವೇ ಖುದ್ದು ಭೇಟಿಯಾಗುವ ಹಂಬಲವನ್ನು ದೇವೇಗೌಡರಲ್ಲಿ ಹೇಳಿಕೊಂಡಿದ್ದಾರೆ. ಒಂದು ವೇಳೆ ದೇವೇಗೌಡರು ಚಿದಂಬರಂಗೆ ತಮ್ಮ ಪಕ್ಷದ ವಿಧಾನಸಭಾ ಶಾಸಕರ ಓಟುಗಳನ್ನು ಕೊಡಿಸಿದ್ದೇ ಆದರೆ ಚಿದಂಬರಂ ಕಾಂಗ್ರೆಸ್ ವತಿಯಿಂದ ಮೂರನೆಯ ಅಭ್ಯರ್ಥಿಯಾಗ ಬಹುದು. ಆದರೆ ಜೆಡಿಎಸ್‌ನ ಕೆಲವು ನಾಯಕರ ಸ್ಟ್ರಾಟಜಿ ಬೇರೆಯಾಗಿದೆ. ನಲವತ್ತು ಶಾಸಕ ಬಲವಿರುವ ತಮ್ಮ ಪಕ್ಷ ಸಂಪನ್ಮೂಲವಿರುವ ಅಭ್ಯರ್ಥಿಯೊಬ್ಬರನ್ನು ಕಾಂಗ್ರೆಸ್ ಪಕ್ಷದಿಂದಲೇ ಕಣಕ್ಕಿಳಿಸಿ ರಾಜ್ಯಸಭಾ ಸದಸ್ಯರೊಬ್ಬರನ್ನು ಆರಿಸಿ ತರುವುದು ಈ ತಂತ್ರಗಾರಿಕೆ. ಇದಕ್ಕೆ ಸೂಕ್ತವೆಂದು ಅವರು ಪರಿಗಣಿಸಿರೋದು ಕಾಂಗ್ರೆಸ್ ಪಕ್ಷದವರೇ ಆದ ಕುಪೇಂದ್ರ ರೆಡ್ಡಿ ಅವರನ್ನು.

ಅಂದರಿಕಿ ಮಂಚಿವಾಡು

ಒಂದು ಕಾಲಕ್ಕೆ ಏನೇನೂ ಇಲ್ಲದಿದ್ದ ಕುಪೇಂದ್ರ ರೆಡ್ಡಿಯ ಬೆನ್ನಿಗೆ ನಿಂತವರು ಇದೇ ದೇವೇಗೌಡರು. ದೇವೇಗೌಡರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸುವಾಗ ಅವರ ಸುತ್ತಮುತ್ತ ಇದ್ದ ಕೆಲವೇ ಕೆಲವರಲ್ಲಿ ಈ ಕುಪೇಂದ್ರ ರೆಡ್ಡಿ ಕೂಡಾ ಒಬ್ಬರು. ವೃತ್ತಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಯಾಗಿ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿವಂತನಾಗುವುದರ ಹಿಂದೆ ದೇವೇಗೌಡರ ಎಲ್ಲ ರೀತಿಯ ಬೆಂಬಲವಿತ್ತು. ಹೆಚ್‌ಎಸ್‌ಆರ್ ಎರಡನೇ ಹಂತದ ಬಡಾವಣೆಯಲ್ಲಿ ಕುಪೇಂದ್ರ ರೆಡ್ಡಿ ಕಟ್ಟಿಸಿರುವ ಬಸವೇಶ್ವರ್ ದೇವಸ್ಥಾನಕ್ಕೆ ವಾರಕ್ಕೊಂದು ಬಾರಿ ಬರುವ ದೇವೇಗೌಡರು ಅಲ್ಲಿಯೇ ಅರ್ಧದಷ್ಟು ದಿನ ಕಳೆಯುತ್ತಾರೆ. ಕುಪೇಂದ್ರ ರೆಡ್ಡಿ ಕೂಡಾ 2008ನೇ ಇಸ್ವಿಯವರೆವಿಗೆ ಜೆಡಿಎಸ್‌ನ ಅಭ್ಯುದಯಕ್ಕಾಗಿಯೇ ಕಾಯಾ-ವಾಚಾ-ಮನಸಾ ದುಡಿದಿದ್ದಾರೆ. ಕ್ಷೇತ್ರ ಪುನರ್ವಿಂಗಡನೆ ಸಂದರ್ಭದಲ್ಲಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರವಾಗಿ ರೂಪುಗೊಂಡಾಗ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದರೆ ತಾವು ಶಾಸಕರಾಗಬಹುದು ಎಂಬ ನಿರೀಕ್ಷೆಯಿಂದ ಕುಪೇಂದ್ರ ರೆಡ್ಡಿ ಕಾಂಗ್ರೆಸ್ ಟಿಕೆಟ್ ಪಡೆದರು. ಆದರೆ ಯಡಿಯೂರಪ್ಪ ಪರ ಬೀಸಿದ ಸಹಾನುಭೂತಿ ಅಲೆಯಲ್ಲಿ ಬಿಜೆಪಿ ಅಭ್ಯರ್ಥಿ ಸತೀಶ್ ರೆಡ್ಡಿ ವಿರುದ್ಧ ಹದಿನಾರು ಸಾವಿರ ಮತಗಳ ಅಂತರದಿಂದ ಸೋತುಹೋದರು. ಸಾವಿರಾರು ಕೋಟಿ ರೂಪಾಯಿಗಳ ಒಡೆಯನಾಗಿದ್ದು, ರೆಡ್ಡಿಗಳ ಪ್ರಾಬಲ್ಯವಿರುವ ಈ ಭಾಗದಲ್ಲಿ ಕಿಂಗ್‌ಮೇಕರ್ ಆಗಿದ್ದ ತಾನೇ ಸೋತುಹೋದದ್ದು ಕುಪೇಂದ್ರ ರೆಡ್ಡಿಗೆ ಅವಮಾನವಾಗಿತ್ತು, ಅಂದೇ ಆಪ್ತರ ಮುಂದೆ ತಾವೆಂದೂ ನೇರ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದರು ಕುಪೇಂದ್ರ ರೆಡ್ಡಿ.

ವಿಧಾನಸಭಾ ಟಿಕೆಟ್ ಒಲ್ಲೆ

2013ರ ವಿಧಾನಸಭಾ ಚುನಾವಣೆಯಲ್ಲಿ ಕುಪೇಂದ್ರ ರೆಡ್ಡಿಯವರಿಗೆ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಟಿಕೆಟ್ ನೀಡಲು ಕಾಂಗ್ರೆಸ್ ಸಿದ್ಧವಿತ್ತು ಆದರೆ ಅದನ್ನು ಬೇಡವೆಂದ ಕುಪೇಂದ್ರ ರೆಡ್ಡಿ, ತಮ್ಮ ಪರಮಾಪ್ತ ನಂಬಿಕೆಯ ಶಿಷ್ಯ ನಾಗಭೂಷಣ ರೆಡ್ಡಿಗೆ ಟಿಕೆಟ್ ಕೊಡಿಸಿದರು. ಮಾತ್ರವಲ್ಲ ಅವರ ಗೆಲುವಿನ ಹೊಣೆಯನ್ನು ತಾವೇ ಹೊತ್ತುಕೊಂಡರು. ಆದರೆ ಸತೀಶ್ ರೆಡ್ಡಿ ಆ ಚುನಾವಣೆಯಲ್ಲಿ ಗೆದ್ದರು.

ರಾಜ್ಯಸಭೆಯ ಆಸೆ ಚಿಗುರಿತ್ತು

ಕುಪೇಂದ್ರ ರೆಡ್ಡಿ ಈ ನೇರ ಚುನಾವಣೆಯ ಉಸಾಬರಿ ಬೇಡವೆಂದು ನಿರ್ಧರಿಸಿದಾಗಲೇ ಅವರಲ್ಲಿ ರಾಜ್ಯಸಭೆಯ ಕನಸು ಚಿಗುರೊಡೆದಿತ್ತು. ಕುಬೇರರಾದ ವಿಜಯಮಲ್ಯ ತಮಿಳುನಾಡಿನ ರೇಸ್‌ಕುದುರೆಗಳ ಒಡೆಯ ರಾಮಸ್ವಾಮಿ, ಮಾಧ್ಯಮ ಕ್ಷೇತ್ರದ ಶ್ರೀಮಂತ ರಾಜೀವ್ ಚಂದ್ರಶೇಖರ್ ಅವರಂತೆ ತಾವು ಏಕೆ ರಾಜ್ಯಸಭಾ ಸದಸ್ಯರಾಗಬಾರದು ಎಂಬ ಜಿಜ್ಞಾಸೆ ಶುರುವಾಗಿತ್ತು. ಅವರಂತೆಯೇ ಈ ಕುಪೇಂದ್ರ ರೆಡ್ಡಿ ಕೂಡ ಎಲ್ಲ ರಾಜಕೀಯ ಪಕ್ಷಗಳಿಗೆ ಹತ್ತಾರು ಕೋಟಿ ವಂತಿಗೆ ನೀಡಿದ್ದರು. ಸಂದರ್ಭ ಒದಗಿಬಂದರೆ ಶಾಸಕರನ್ನು ಓಲೈಸಿಕೊಳ್ಳುವ ಆರ್ಥಿಕ ತಾಕತ್ತು ಮತ್ತು ಎಲ್ಲ ಪಕ್ಷಗಳ ನಾಯಕರ ನಡುವೆ ಪ್ರಬಲವಾದ ನೆಟ್‌ವರ್ಕ್ ಕೂಡ ಇತ್ತು. ಹೀಗಾಗಿ ರಾಜ್ಯದಿಂದ ಸಿಗಬಹುದಾದ ನಾಲ್ಕನೇ ಸ್ಥಾನಕ್ಕೆ ಕಣ್ಣು ಕೀಲಿಸಿ ಕೂತಿದ್ದಾರೆ ಕುಪೇಂದ್ರ ರೆಡ್ಡಿ.

ಚಿದಂಬರಂ ವರ್ಸಸ್ ಕುಪೇಂದ್ರ ರೆಡ್ಡಿ

ಆದರೆ ಅದೇ ನಾಲ್ಕನೇ ಸ್ಥಾನಕ್ಕೆ ಮಾಜಿ ವಿತ್ತ ಸಚಿವ ಚಿದಂಬರಂ ಸಹ ಕಣ್ಣು ಹಾಕಿರುವುದು ಕುಪೇಂದ್ರ ರೆಡ್ಡಿಯವರಿಗೆ ನುಂಗಲಾರದ ತುತ್ತಾಗಿದೆ. ಕಾಂಗ್ರೆಸ್ ಹೈಕಮಾಂಡ್ ಸಹಜವಾಗಿಯೇ ಚಿದಂಬರಂ ಪರ ಇರುತ್ತದೆ. ಇನ್ನೂ ರಾಜ್ಯ ಕಾಂಗ್ರೆಸ್ ನಾಯಕರಿಗೆ ಕುಪೇಂದ್ರ ರೆಡ್ಡಿ ಪರ ಒಲವಿದೆ. ಇವರಿಬ್ಬರಲ್ಲಿ ಯಾರೇ ಗೆಲ್ಲಬೇಕಾದರೂ ಜೆಡಿಎಸ್‌ನ ನಲವತ್ತು ಶಾಸಕರ ಬೆಂಬಲ ಬೇಕು. ಅಂದರೆ ದೇವೇಗೌಡರ ಕೃಪಾಶೀರ್ವಾದ ಪಡೆದವರು ಗೆಲ್ಲುತ್ತಾರೆ. ದೇವೇಗೌಡರಿಗೆ ಚಿದಂಬರಂ ಬಗ್ಗೆ ಗೌರವವಿದೆ. ಆದರೆ ತಮ್ಮಿಂದಲೇ ಆರ್ಥಿಕವಾಗಿ ಮೇಲೆ ಬಂದ, ಈಗಲೂ ತನ್ನನ್ನು ಗೌರವಿಸುವ ಕುಪೇಂದ್ರ ರೆಡ್ಡಿ ಬಗ್ಗೆ ಪ್ರೀತಿ ಇದೆ. ಚಿದರಬರಂಗೆ ರಾಷ್ಟ್ರಮಟ್ಟದ ಖ್ಯಾತಿ ಇದೆ. ಆದರೆ ಕುಪೇಂದ್ರ ರೆಡ್ಡಿ ಬಳಿ ಕೊಳೆತುಹೋಗುವಷ್ಟು ಹಣವಿದೆ. ಜೊತೆಗೆ ಕುಪೇಂದ್ರ ರೆಡ್ಡಿ ನಮ್ಮ ರಾಜ್ಯದವರೇ ಎಂಬ ಸಮಜಾಯಿಷಿ ಕೂಡಾ ನೀಡಬಹುದು. ಅಂತಿಮವಾಗಿ ದೇವೇಗೌಡರು ಯಾರ ಪರ ನಿಲ್ಲುತ್ತಾರೋ ಅವರು ಕಾಂಗ್ರೆಸ್‌ನ ಮೂರನೇ ಅಭ್ಯರ್ಥಿ ಆಗಬಲ್ಲರು.

ಪಕ್ಷಗಳಲ್ಲಿ ಪರ ವಿರೋಧ

ಜೆಡಿಎಸ್ ಜೊತೆ ಸೇರಿ ರಾಜ್ಯಸಭಾ ಸ್ಥಾನ ಗೆಲ್ಲಲು ರಾಜ್ಯ ಕಾಂಗ್ರೆಸ್‌ನ ಒಂದು ಗುಂಪು ವಿರೋಧಿಸುತ್ತಿದೆ. ಜೆಡಿಎಸ್ ಜೊತೆ ಕೈಜೋಡಿಸುವ ಬದಲು ಕಾಂಗ್ರೆಸ್‌ನಲ್ಲಿ ಹೆಚ್ಚುವರಿಯಾಗಿ ಉಳಿಯುವ ಮತಗಳು, ಎಂಇಎಸ್ ಮತ್ತು ಕೆಜೆಪಿಯ ತಲಾ ಇಬ್ಬರು ಶಾಸಕರು, ಜೊತೆಗೆ ತಮ್ಮದೇ ಪಕ್ಷದ ಶಾಸಕರ ದ್ವಿತೀಯ ಪ್ರಾಶಸ್ತ್ಯದ ಮತಗಳನ್ನು ತಮ್ಮ ಅಭ್ಯರ್ಥಿಗೆ ಹಾಕಿಸಿ ತಮ್ಮದೇ ಪಕ್ಷದವರನ್ನ ಗೆಲ್ಲಿಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಇವರದ್ದಾಗಿದೆ. ಒಂದು ವೇಳೆ ಕಾಂಗ್ರೆಸ್ ತಾನು ಬಯಸಿದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದಿದ್ದರೆ ಕುಪೇಂದ್ರ ರೆಡ್ಡಿಯವರನ್ನು ತಮ್ಮ ಪಕ್ಷದಿಂದ ಕಣಕ್ಕೆ ಇಳಿಸುವ ಬಗ್ಗೆಯೂ ಜೆಡಿಎಸ್ ಚಿಂತನೆ ನಡೆಸಿದೆ. ತಮ್ಮ ಪಕ್ಷದ ನಲವತ್ತು ಶಾಸಕರು, ಪಕ್ಷೇತರ ಶಾಸಕರು ಹಾಗೂ ಎಂಇಎಸ್ ಶಾಸಕರು, ಸಾಧ್ಯವಾದಲ್ಲಿ ಕಾಂಗ್ರೆಸ್‌ನಿಂದಲೇ ಹಲವರನ್ನು ಬುಟ್ಟಿಗೆ ಹಾಕಿಕೊಂಡು ತಮ್ಮ ಪಕ್ಷದ ವತಿಯಿಂದಲೇ ರಾಜ್ಯಸಭಾ ಸದಸ್ಯರನ್ನು ಗೆಲ್ಲಿಸಿಕೊಳ್ಳುವ ರಿಸ್ಕ್‌ಗೆ ಜೆಡಿಎಸ್ ಮುಂದಾದರೂ ಅಚ್ಚರಿಯಿಲ್ಲ.

ಪುಢಾರಿಗಳ ರಂಗತಾಲೀಮು

ಜಾತಿವಾರು ಲೆಕ್ಕಾಚಾರ, ಪಕ್ಷಕ್ಕೆ-ಸರ್ಕಾರಕ್ಕೆ ಸಲ್ಲಿಸಿರುವ ಸೇವೆ, ದೆಹಲಿ ನಾಯಕ-ನಾಯಕಸಾನಿಯರ ನಂಟು-ಗಂಟು ಮುಂತಾದವುಗಳನ್ನು ಮುಂದಿಟ್ಟುಕೊಂಡು ಘಟಾನುಘಟಿಗಳು ವಿಧಾನ ಪರಿಷತ್ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾರೆ.

ರಾಜ್ಯಮಟ್ಟದ ಗಾಡ್‌ಫಾದರ್‌ಗಳಿಗೆ ತಾವು ಮಾಡಿರುವ ಸೇವೆ-ಇಟ್ಟಿರುವ ನಿಷ್ಠೆ, ರಾಜಕೀಯ ಪ್ರಾತಿನಿಧ್ಯವಿಲ್ಲದ ತಂತಮ್ಮ ಜಾತಿ-ಉಪಜಾತಿ, ತಮ್ಮ ಆಯ್ಕೆಯಿಂದ ಪಕ್ಷಕ್ಕೆ-ನಾಯಕನಿಗೆ ಆಗುವ ರಾಜಕೀಯ-ಆರ್ಥಿಕ ಅನುಕೂಲಗಳನ್ನು ಮನವರಿಕೆ ಮಾಡಿಕೊಡುವ ಯತ್ನ, ಹಡಬಿಟ್ಟಿ ದುಡ್ಡಿನ ಥೈಲಿ ಕೈಯಲ್ಲಿ ಹಿಡಿದು ಎಂಎಲ್ಸಿ ಸ್ಥಾನಕ್ಕಾಗಿ ಶತಾಯಗತಾಯ ಪ್ರಯತ್ನಗಳನ್ನು ಪಾಡುತ್ತಿದ್ದಾರೆ.

ಇದು ಫುಲ್‌ಟೈಂ ಪ್ರೊಫೆಷನಲ್ ರಾಜಕಾರಣಿಗಳ ಕತೆಯಾದರೆ, ಪಾರ್ಟ್‌ಟೈಂ ಪುಢಾರಿಗಳ ಪ್ರವರವೇ ಬೇರೆ. ಮುಖ್ಯಮಂತ್ರಿ, ರಾಜಕೀಯ ಪಕ್ಷಗಳ ರಾಜ್ಯಾಧ್ಯಕ್ಷರು, ಪ್ರಭಾವಿ ನಾಯಕರು, ಅಷ್ಟೆ ಏಕೆ ಅವರ ಅಂತಃಪುರದ ಸಖ-ಸಖಿಯರ ಮುಂದೆ ಸರ್ಕಾರಿ ನಾಮ ನಿರ್ದೇಶನದ ಆರು ಸ್ಥಾನಗಳ ಪೈಕಿ ಒಂದಕ್ಕಾಗಿ ಹಲ್ಲುಗಿಂಜುತ್ತಿರುವ ದುರ್ಗದ ರಾಜೇಗೌಡರಂಥ ಸಾಹಿತಿಗಳು, ಭವ್ಯಾರಂಥ ಕಲಾವಿದರೇನ್ನಾರು, ರಕ್ತ-ಪಾಪಗಳನ್ನು ಮೈಗಂಟಿಸಿಕೊಂಡಿರುವ ಸ್ವಘೋಷಿತ ಸಾಧಕ-ಸಾಧಕಿಯರ ಪಟ್ಟಿ ಮಾಡುತ್ತಾ ಹೋದರೆ ಭವ್ಯ ಇತಿಹಾಸವುಳ್ಳ ಕರ್ನಾಟಕ ಸಾಂಸ್ಕೃತಿಕ ಲೋಕವೇ ತಲೆತಗ್ಗಿಸಬೇಕಾಗುತ್ತೆ.

ಮಳೆಹನಿ ನಿಂತಿಲ್ಲ

ಮಳೆ ನಿಂತರೂ ಮಳೆ ಹನಿ ನಿಂತಿಲ್ಲ ಎನ್ನುವಂತೆ ಲೋಕಸಭಾ ಚುನಾವಣೆಯ ಗುಂಗಿನಿಂದ ಹೊರಬರುವ ಮೊದಲೇ ವಿಧಾನಸಭೆಯಿಂದ ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ, ಪಶ್ಚಿಮ ಮತ್ತು ಆಗ್ನೇಯ ಪದವೀಧರರ ತಲಾ ಒಂದೊಂದು ಸ್ಥಾನ, ಈಶಾನ್ಯ ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರ ಸೇರಿ ಒಟ್ಟು 11 ಸ್ಥಾನಗಳಿಗೆ ಚುನಾವಣೆ ಎದುರಾಗಿದೆ.

ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಸೇರಿದಂತೆ ಭಾರತಿ ಶೆಟ್ಟಿ, ಕೆ.ವಿ.ನಾರಾಯಣಸ್ವಾಮಿ, ಎಂ.ಸಿ.ನಾಣಯ್ಯ, ಎಂ.ವಿ.ರಾಜಶೇಖರನ್, ಸಿದ್ದರಾಜು ಮತ್ತು ಕೆ.ಮೋನಪ್ಪ ಭಂಡಾರಿಯವರ ಅವಧಿ ಜೂನ್ ಅಂತ್ಯಕ್ಕೆ ಕೊನೆಗೊಳ್ಳಲಿದೆ. ಈ ಏಳು ಜನರಲ್ಲಿ ಬಿಜೆಪಿಯ ನಾಲ್ವರು, ಜೆಡಿಎಸ್‌ನ ಇಬ್ಬರು ಹಾಗೂ ಕಾಂಗ್ರೆಸ್‌ನ ಒಬ್ಬರಿದ್ದಾರೆ. ಪ್ರಸ್ತುತ ವಿಧಾನಸಭೆಯಲ್ಲಿ ಪಕ್ಷಗಳಿಗಿರುವ ಸಂಖ್ಯಾಬಲದ ಆಧಾರದ ಮೇಲೆ ಹೇಳುವುದಾದರೆ ಕಾಂಗ್ರೆಸ್ 4, ಜೆಡಿಎಸ್ ಮತ್ತು ಬಿಜೆಪಿ ತಲಾ ಒಂದೊಂದರಲ್ಲಿ ನಿರಾಯಾಸವಾಗಿ ಗೆಲ್ಲಬಹುದು. ಉಳಿದ ಮತ್ತೊಂದು ಸ್ಥಾನಕ್ಕಾಗಿ ಕುದುರೆ ವ್ಯಾಪಾರ ನಡೆದರೂ ಅಚ್ಚರಿಯಿಲ್ಲ.

ಸದ್ಯಕ್ಕೆ ವಿಧಾನಪರಿಷತ್ ಚುನಾವಣಾ ಟಿಕೆಟ್‌ಗಾಗಿ ಬಹಳ ಸದ್ದು ಕೇಳಿ ಬರುತ್ತಿರುವುದು ಕಾಂಗ್ರೆಸ್‌ನ ಪಡಸಾಲೆಯಿಂದಲೆ. ಕಳೆದ ವಿಧಾನಸಭೆ ಮತ್ತು ಈಗಿನ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ವಂಚಿತರಾದವರು ಈಗ ಟಿಕೆಟ್ ಪಡೆಯಲು ಯತ್ನಿಸುತ್ತಿದ್ದಾರೆ. ಹೋದ ವರ್ಷದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಹುತೇಕ ಬಂಡಾಯ ಅಭ್ಯರ್ಥಿಗಳ ಮೂಗಿಗೆ ಕಾಂಗ್ರೆಸ್ ವಿಧಾನಪರಿಷತ್ ಸ್ಥಾನದ ತುಪ್ಪವನ್ನು ಸವರಿ ಕಣದಿಂದ ಹಿಂದೆ ಸರಿಯುವಂತೆ ಮಾಡಿತ್ತು. ಉದಾಹರಣೆಗೆ ಹೇಳಬೇಕೆಂದರೆ ಮಹಾದೇವಪುರ ವಿಧಾನಸಭಾ ಕ್ಷೇತ್ರದಿಂದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನಲ್ಲೂರಹಳ್ಳಿ ನಾಗೇಶ್ ಎಂಬ ಯುವಮುಖಂಡನನ್ನು ಕೆಪಿಸಿಸಿ ಅಧ್ಯಕ್ಷರಾದ ಪರಮೇಶ್ವರ್ ಅವರೇ ಎಂಎಲ್‌ಸಿ ಮಾಡುವುದಾಗಿ ಪುಸಲಾಯಿಸಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಎ.ಸಿ.ಶ್ರೀನಿವಾಸ್ ಪರ ಕೆಲಸ ಮಾಡುವಂತೆ ಮನವೊಲಿಸಿದ್ದರು. ಆದರೆ ದುರಂತ ನೋಡಿ, ಈಗ ತಾವು ಎಂಎಲ್‌ಸಿ ಆಗಬೇಕಾದರೆ ಹೈಕಮಾಂಡ್ ಹಾಗೂ ಸಿದ್ದರಾಮಯ್ಯನವರ ಮರ್ಜಿ ಕಾಯಬೇಕಾದ ಪರಿಸ್ಥಿತಿ ಪರಮೇಶ್ವರ್ ಅವರದು.

ಇನ್ನುಳಿದಂತೆ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಚುನಾವಣೆ ಟಿಕೆಟಿನಿಂದ ವಂಚಿತರಾದ ಹೆಚ್.ಎಂ.ರೇವಣ್ಣನವರಿಗೂ ಸಿದ್ದರಾಮಯ್ಯ ಇದೇ ಪ್ರಾಮಿಸ್ ಮಾಡಿದ್ದರು. ಹೀ
ಒಬ್ಬೊಬ್ಬ ಪ್ರಬಲ ನಾಯಕರೂ ಒಂದೊಂದು ಸಂದರ್ಭದ
ಆಕಾಂಕ್ಷಿಗಳಿಗೆ ಎಂಎಲ್‌ಸಿ ಎಂಬ ಕನ್ನಡಿಯೊಳಗಿನ ಗಂಟ
ತೋರಿಸಿದ್ದಾರೆ. ಆಕಾಂಕ್ಷಿಗಳಲ್ಲಿ ಪ್ರಮುಖವಾಗಿ ಕೆಪಿಸಿ
ಮಾಜಿ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ, ಮಾಜಿ ಸಚಿವರಾ
ರಾಣಿ ಸತೀಶ್, ಎಚ್.ಎಂ.ರೇವಣ್ಣ, ಜೆ.ಅಲೆಗ್ಸಾಂಡರ
ಮೇಲ್ಮನೆ ಪ್ರತಿಪಕ್ಷದ ಮಾಜಿ ನಾಯಕ ವಿ.ಎಸ್.ಉಗ್ರ
ಮೇಲ್ಮನೆ ಮಾಜಿ ಸದಸ್ಯರಾದ ಕೆ.ಸಿ.ಕೊಂಡಯ
ಡಾ.ಎಲ್.ಹನುಮಂತಯ್ಯ, ಕೆಪಿಸಿಸಿ ಪ್ರಧಾ
ಕಾರ್ಯದರ್ಶಿಗಳಾದ ಎನ್.ಎಸ್.ಬೋಸ್‌ರಾಜು, ಕೆಪಿಸಿ
ಕಾರ್ಯದರ್ಶಿ ಕಡೂರು ನಂಜಪ್ಪ, ಎಸ್.ಎಸ್.ಪ್ರಕಾಶ
ವೆಂಕಟರಾವ್ ಘೋರ್ಪಡೆ, ಮಾಜಿ ಮೇಯ
ಎಂ.ರಾಮಚಂದ್ರಪ್ಪ, ಕೇಂದ್ರದ ಮಾಜಿ ಸಚಿ
ಡಿ.ಕೆ.ತಾರಾದೇವಿ, ಇಕ್ಬಾಲ್ ಅಹ್ಮದ್ ಸರಡಗಿ ಅವ
ಹೆಸರು ಕೇಳಿಬರುತ್ತಿದೆ.


ಹೀಗಾಗಿ ಇವರೆಲ್ಲರೂ ಪ್ರಮುಖ ಆಕಾಂಕ್ಷಿಗಳು ಹಾಗ
ಅಷ್ಟೇ ಪ್ರಬಲರು. ಇಷ್ಟೇ ಆಗಿದ್ದರೆ ಕಾಂಗ್ರೆಸ್‌ನ ಮುಂಚೂ
ನಾಯಕರೂ ಸುಧಾರಿಸಿಕೊಳ್ಳುತ್ತಿದ್ದರೇನೋ. ಆದರೆ ಕಳೆ
ವಿಧಾನಸಭಾ ಚುನಾವಣೆಯಲ್ಲಿ ಸೋತವರೂ ಕೂ
ದುಂಬಾಲು ಬಿದ್ದಿದ್ದಾರೆ. ಆದರೆ ವಿಧಾನಸಭ
ಚುನಾವಣೆಯಲ್ಲಿ ಸೋತವರಿಗೆ ವಿಧಾನಪರಿಷತ್‌ಗೆ ಟಿಕೆ
ಇಲ್ಲ ಎಂಬ ಎಐಸಿಸಿ ಮಾರ್ಗಸೂಚಿ ಇರುವುದರಿ
ಇವರ ಬೇಡಿಕೆಗೆ ಬೆಂಬಲ ದೊರೆಯುತ್ತಿಲ್ಲ.

ಇವತ್ತು ಮುಖ್ಯಮಂತ್ರಿಗಳ ಮನೆ, ಗೃಹ ಕಚೇ
ವಿಧಾನಸೌಧದ ಪಡಸಾಲೆ... ಎಲ್ಲಿ ನೋಡಿದರ
ಜನಸಾಮಾನ್ಯರು ಮತ್ತು ಅಧಿಕಾರಿಗಳಿಗಿಂತ ಹೆಚ್ಚಾಗಿ ತಮ್ಮ
ಎಂಎಲ್‌ಸಿ ಮಾಡಿ ಎಂದು ಗೋಗರೆಯುವವರ ಸಂಖ್ಯೆ
ಹೆಚ್ಚು, ಅದಕ್ಕಾಗಿ ಜಿಲ್ಲಾ ಮುಖಂಡನಿಂದ ಹಿಡಿದು ರ
ನಾಯಕರು, ಮಠಾಧೀಶರಿಂದ ಹಿಡಿದು ಜನಾಂಗ
ಮಹಾನ್ ನಾಯಕರ ಶಿಫಾರಸ್ಸು ಪತ್ರ ತರುತ್ತಿದ್ದಾರೆ. ಹಿ
ಇವರಲ್ಲಿ ಬಹುತೇಕರು ವಿಧಾನಸಭೆಗೂ ಟಿಕೆಟ್ ಕೇಳಿದ್ದ
ಲೋಕಸಭೆಗೂ ಕೇಳಿದ್ದರು. ಈಗ ವಿಧಾನಪರಿಷತ್ತಿ
ಕೇಳುತ್ತಿದ್ದಾರೆ. ಮುಂದೆ ನಿಗಮ-ಮಂಡಳಿಗೆ ಅಧ್ಯಕ್ಷ ಸ
ಆದಾಗದಿದ್ದರೆ ಸದಸ್ಯ ಸ್ಥಾನ. ಕೊನೆಗೆ ಸ್ಥಳೀಯ ಚುನಾ
ನಿರಂತರ ಪ್ರಯತ್ನಿಸುತ್ತಲೇ ಇರುತ್ತಾರೆ. ಇವರೊಂ
ಆಡಳಿತಾರೂಢ ಪಕ್ಷದ ಆಸ್ಥಾನ ಸಾಹಿತಿಗಳು-ಕಲಾವಿದ
ಸರತಿ ಸಾಲಿನಲ್ಲಿ ನಿಂತುಬಿಟ್ಟಿದ್ದಾರೆ. ಸಕಾ
ನಾಮನಿರ್ದೇಶನದ ಆರು ಸ್ಥಾನಗಳ ಮೇಲೆ ಇವರ ಕ

ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ
ತಲೆನೋವನ್ನು ನೈಸಾಗಿಯೇ ಎಐಸಿಸಿಗೆ ವರ್ಗಾಯಿಸ
ಪ್ರಯತ್ನಿಸುತ್ತಿದ್ದಾರೆ. ಎಲ್ಲರಿಂದ ಅರ್ಜಿಗಳನ್ನು ಪಡೆದುಕೊ
ಮುಖ್ಯಮಂತ್ರಿಗಳು "ಅರ್ಜಿಗಳನ್ನು ಕೆಪಿಸಿಸಿಗೆ ಕಳುಹಿಸಿದ
ಅವರು ಎಐಸಿಸಿ ಮಾರ್ಗಸೂಚಿಗನುಗುಣವಾಗಿ ವರ್ಗೀಕ
ದೆಹಲಿಗೆ ಕಳುಹಿಸುತ್ತಾರೆ. ನೀವು ಅಲ್ಲಿಯೇ ಪ್ರಯತ್ನಪ
ಒಳ್ಳೆಯದು" ಎಂಬ ಸಲಹೆ ನೀಡಿ ಆಕಾಂಕ್ಷಿಗಳ
ಸಾಗಹಾಕುತ್ತಿದ್ದಾರೆ.

ಹಾಗೆಂದ ಮಾತ್ರಕ್ಕೆ ಸಿದ್ದರಾಮಯ್ಯ ಈ ಅಭ್ಯರ್ಥಿ
ಆಯ್ಕೆಯಲ್ಲಿ ತಲೆತೂರಿಸುವುದಿಲ್ಲ ಎಂದೇನೂ
ಜಾತಿಸಮೀಕರಣಕ್ಕೆ ಹೆಚ್ಚು ಒತ್ತು ನೀಡುವ ಬಂ
ಅವರದು. ಲಿಂಗಾಯತರ ಕೋಟಾದಲ್ಲಿ ಎಂ.ವಿ.
ಶೇಖರನ್ ಹಾಗೂ ಒಕ್ಕಲಿಗರ ಕೋಟಾದಲ್ಲಿ ಎಸ್
ಕೃಷ್ಣರನ್ನು ಅಭ್ಯರ್ಥಿಯಾಗಿ ರಾಜ್ಯ ಸಭೆಗೆ ಟಿಕೆಟ್
ಬಹುದು. ಹೀಗಾದರೆ ವಿಧಾನಪರಿಷತ್‌ಗೆ ನಡೆಯ
ನಾಮನಿರ್ದೇಶನದಲ್ಲಿ ಒಕ್ಕಲಿಗ ಸಮುದಾಯದವ
ಅವಕಾಶ ಇಲ್ಲ ಎನ್ನುವ ಮಾತುಗಳೂ ಹರಿದಾಡು
ಓಬಿಸಿ ಕೋಟಾದಲ್ಲಿ ಹೆಚ್.ಎಂ.ರೇವಣ್ಣನವರಿಗೆ ಅವ
ಕೊಡಿಸಲು ಖುದ್ದು ಆಸಕ್ತಿ ವಹಿಸಿರುವ ಸಿಎಂ,
ಸಂಖ್ಯಾತರ ಕೋಟಾದಲ್ಲಿ ನಾಮನಿರ್ದೇಶನ ಮಾಡುವ
ದಾವಣಗೆರೆ ಡಿಸಿಸಿ ಪ್ರೆಸಿಡೆಂಟ್ ಜಬ್ಬಾರ್ ಖಾನ್‌ಗೆ ವ
ಕೊಟ್ಟಿದ್ದಾರೆ ಎನ್ನುವ ಮಾತುಗಳೂ ಚಾಲ್ತಿಯಲ್ಲಿದೆ.

● ಬಿ. ನಾರಾಯ



ದಕ್ಷಿಣ ಕನ್ನಡ: ಮಂತ್ರಿ ಅಭಯನ

ಭಯಾನಕ ಭಾನ್ಗಡಿಗಳು !!

ದಕ್ಷಿಣ ಕನ್ನಡದಲ್ಲೀಗ ಮೀನು ಮಂತ್ರಿ ಅಭಯಚಂದ್ರ 'ಅದ್ಭ ಕೀಡಾ' ಖಾತೆಯಲ್ಲಿ ಕಾರ್ಯತತ್ಪರನಾಗಿರುವ ...ನತರಕಾರಿ ಆಟದ ಬಗ್ಗೆ ದೊಡ್ಡ ಚರ್ಚೆ-ವಿಮರ್ಶೆ ...ಯುತ್ತಿದೆ! ಜೈನ ಪಾಳೆಗಾರಿಕೆಯ ಪಕ್ಕಾ ಪಳಿಯುಳಿಕೆ ...ಯಿರುವ ಅಭಯ ಮಂತ್ರಿಯಾಗುತ್ತಲೇ ಆತನ ಪೂರ್ವಾ...ದ ತರಹೇವಾರಿ ತರಲೆಗಳಿಗೆ ದುಪ್ಪಟ್ಟು ಬಿರುಸು ...ಬಬಿಟ್ಟಿದೆ. ಮೊದಲೇ ಪುಂಡ; ಜತೆಗೆ ಮಂತ್ರಿಗಿರಿ ನೆತ್ತಿಗೇರಿದರೆ ಕೇಳಬೇಕಾ? ಮಂತ್ರಿಯೊಬ್ಬನಲ್ಲಿ ...ರಡಾಗಿ ಇರಬೇಕಾದ ಕೃತಜ್ಞತೆ, ಅರ್ಹತಾಭಾವ, ಬದ್ಧತೆ, ...ಒಂದೂ ಇಲ್ಲದ ಅಭಯ ಕಂಡಕಂಡವರ ಮೇಲೆ ...ಏರಿಸಿ ಗುದುಮುರಿಗೆಗೆ ಮುಂದಾಗುತ್ತಿದ್ದಾರೆ!

...ಶಾಸಕ-ಅಧಿಕಾರಿ-ರಿಕ್ಷಾಚಾಲಕ-ಎಮ್ಮೆಲ್ಲೆಯಿಂದ ...ಯು ಅರಸಿ ಬರುವ ಪ್ರಜೆ, ಎದುರು ಪಾರ್ಟಿ ...ಂಡ... ಹೀಗೆ ಯಾರೇ ಇರಲಿ ಅಭಯ ಬಾಯಿಗೆ ...ಂತೆ ಬೈದು, ರೌಡಿಯಂತೆ ಹಾರಾಡಿ ಬಿಪಿ ...ಸೋಳ್ಳೋದು ಮಾಮೂಲಾಗಿ ಹೋಗಿದೆ! ಕಾಂಗ್ರೆಸ್‌ನ ... ಬ್ರೋಕರ್ ವೀರಪ್ಪ ಮೊಯ್ಲಿ ಮಹಾತ್ಮನ ಆತ್ಮಾಪ್ತ ...ನಾದ ಅಭಯ ಮೂಡಬಿದರೆಯಿಂದ ಸತತ ನಾಲ್ಕು ... ಗೆದ್ದಿರುವುದು ಪ್ರಜಾತಂತ್ರದ ದೌರ್ಬಲ್ಯದ ...ಣಾಮವೇ ಸರಿ! ಪ್ರತಿಬಾರಿ ಗೆದ್ದಾಗಲೂ ಅಭಯನ ...ಟ-ಅಟ್ಟಹಾಸ ಹೆಚ್ಚಾಯಿತೆ ವಿನಃ ಕ್ಷೇತ್ರಕ್ಕೆ ಬಿಲ್ಲಿ ...ಯೋಜನ ಆಗಲಿಲ್ಲ. ಮೇಡಂ ಮಾಲತಿ ಮೊಯ್ಲಿಯ ... ಕ್ಯಾಬಿನೆಟ್‌ನ ಅತ್ಯಾಪ್ತ ಸದಸ್ಯನೆಂಬ ಕ್ಯಾಲಿಬರ್ ...ಲೇ ಆತ ಸಿದ್ದು ಸಂಪುಟ ಸೇರಿದ್ದಾನೆ.

...ಅಲ್ಪಸಂಖ್ಯಾತ ಜೈನ್ ಕೋಟಾದಲ್ಲಿ ಮಂತ್ರಿಗಿರಿ ದಕ್ಕಿದ್ದೇ ...ಈ ಅಧಿಕಪ್ರಸಂಗಿ 'ತನ್ನತನ' ತೋರಿಸಿಕೊಂಡೇ ...ತನಗೆ ನೀಡಿದ್ದ ಮೀನುಗಾರಿಕಾ ಇಲಾಖೆ ಬಗ್ಗೆಯೇ ... ಮಾತಾಡಿ ನವ ಪುರೋಹಿತಶಾಹಿ ಪ್ರವರ ತೋರಿಸಿದ್ದ ...ಮ ಕ್ರೀಡಾಖಾತೆಯಲ್ಲೂ ಕಿಸಿದಿದ್ದು ಅಷ್ಟಕ್ಕಷ್ಟೇ. ...ಪತ್ರಿಕೆಯೊಂದರ ವರದಿಗಾರನಿಗೆ ತನಗೆ ...ರಿಜಾಗುವಂಥ ವರದಿ ಬರೆದರೆ ಕೈಕಾಲು ಮುರಿದು ...ಬೇಡಿ ತಿನ್ನೋ ಹಾಗೆ ಮಾಡ್ತೇನೆಂದು ಧಮಕಿ ಹಾಕಿ ...ವಿವಾದಕ್ಕೆ ಸಿಲುಕಿರುವ ಈ ಮಂತ್ರಿ ಮಹಾಶಯ ... ಅವಘಡ ಸೃಷ್ಟಿಸುತ್ತಲೇ ಇದ್ದಾನೆ.

...ಭಿಕ್ಷಾಟನೆ ಭಾನ್ಗಡಿ' ಮೂಲ ಕುತೂಹಲಕರವಾಗಿದೆ. ...ಡಬಿದರೆ ಕ್ಷೇತ್ರದಲ್ಲಿರುವ 'ನಿಡ್ಡೋಡಿ' ಎಂಬಲ್ಲಿ ಪರಿಸರ-...ಸಂಕುಲಕ್ಕೆ ಹಾನಿ ಮಾಡುವ ಉಷ್ಣ ವಿದ್ಯುತ್ ಸ್ಥಾವರ ...ಗೆ ಹಿಂದಿನ ಬಿಜೆಪಿ ಸರ್ಕಾರ ನಿರ್ಧರಿಸಿತ್ತು. ಆತಂಕಿತ ...ಸುತ್ತಲಿನ ಜನ ಬೀದಿಗಿಳಿದು ಈ ಪ್ರಾಜೆಕ್ಟ್ ವಿರುದ್ಧ ...ಟಿಸಿದ್ದರು. ಆಗ ಶಾಸಕನಾಗಿದ್ದ ಅಭಯ ಜನರ ...ನಿಂತು ಥರ್ಮಲ್ ಪ್ರಾಜೆಕ್ಟ್ ಬರಲು ಬಿಡುವುದಿಲ್ಲ ...ಳಿ ವೀರಾವೇಷ ಪ್ರದರ್ಶಿಸಿದ್ದ. ಈ ನಾಟಕದಿಂದ ...ಮ ಮತ್ತೆ ಗೆದ್ದು ಶಾಸಕನೂ ಆದ. ಆದರೆ ಗೆದ್ದು ...ಯಾದ ನಂತರ ಆತ ಬಣ್ಣ ಬದಲಿಸಿಬಿಟ್ಟ. ಕಾಂಗ್ರೆಸ್ ...ರ ಸದ್ರಿ ಯೋಜನೆ ಬೇಗ ಅನುಷ್ಠಾನಗೊಳ್ಳುವಂತೆ ಕೇಂದ್ರ ಇಂಧನ ಮಂತ್ರಿಗೆ ಪತ್ರ ಬರೆದಾಗಲೂ ಕ್ಷೇತ್ರ ಶಾಸಕ ಯಾನೆ ಮೀನು-ಆಟದ ಮಂತ್ರಿ ಅಭಯ ಎಡಬಿಡಂಗಿಯಂತೆ ವರ್ತಿಸಿದ್ದಾನೆ.

ಇದೆಲ್ಲ ಸಹಜವಾಗೇ ಪತ್ರಿಕೆಗಳಲ್ಲಿ ಬಂದಿದೆ. ಇದರಿಂದ ಬಿಪಿ ಗಿರಾಕಿ ಅಭಯ ಹತಾಶನಾಗಿದ್ದಾನೆ. ದಿನಪತ್ರಿಕೆಯೊಂದರ ವರದಿಗಾರ 'ನಿಡ್ಡೋಡಿ ಉಷ್ಣ ಸ್ಥಾವರದ ಬಗ್ಗೆ ನಿಮ್ಮ ಅಭಿಪ್ರಾಯವೇನು....?' ಎಂದು ಕೇಳಿದ್ದಾನೆ. ಅಷ್ಟಕ್ಕೇ ಕೆರಳಿದ ಮಂತ್ರಿ '...ಈ ಬಗ್ಗೆ ವರದಿ ಮಾಡಿದ್ರೆ ನಿನ್ನ ಕೈ-ಕಾಲು ಮುರಿದು ಭಿಕ್ಷೆ ಬೇಡಿ ತಿನ್ನೋ ಹಾಗೆ ಮಾಡ್ತೇನೆ...' ಎಂದಬ್ಬರಿಸಿ ಬೊಬ್ಬಿರಿದಿದ್ದಾನೆ. ವರದಿಗಾರ ಪೊಲೀಸ್ ಕಂಪ್ಲೇಟು ಕೊಡಲು ಹೋದರೆ ಅದು ಸ್ವೀಕಾರ ಆಗಲಿಲ್ಲ. ಮಂತ್ರಿಗಳ ಮೇಲೆ ಕೇಸು ಹಾಕುವ ತಾಕತ್ತು ಪೆದ್ದು ಪೊಲೀಸರಿಗೆಲ್ಲಿದೆ, ಪಾಪ?!

ಈ ಘಟನೆಗೂ ಮೊದಲು ಸದ್ರಿ ಮಂತ್ರಿಜೀ ರಿಕ್ಷಾ ಡ್ರೈವರ್ ಒಬ್ಬನಿಗೆ ಕಪಾಳಮೋಕ್ಷ ಮಾಡಿ ಭರ್ಜರಿ ಸುದ್ದಿಯಾಗಿದ್ದ. ಅದು ಕಳೆದ ಮಳೆಗಾಲದ ಒಂದು ದಿನ. ಮುಲ್ಕಿ-ಮೂಡಬಿದರೆ ಕ್ಷೇತ್ರದ ರಸ್ತೆಯೊಂದರ ರಿಪೇರಿಗೆ ಆಗ್ರಹಿಸಿ ಜನರು ಪ್ರತಿಭಟನೆ ಹಮ್ಮಿಕೊಂಡಿದ್ದರು. ಅದರಲ್ಲಿ ರಿಕ್ಷಾ ಚಾಲಕರೂ ಸೇರಿದ್ದರು. ಸಂಘ ಪರಿವಾರದ ಕಿತಾಪತಿಗಾರರು ಸಹಜವಾಗೇ ಆ ಪ್ರತಿಭಟನೆಯಲ್ಲಿ ಸೇರಿಕೊಂಡು ಮಂತ್ರಿಗೆ ಕಿರಿಕ್ ಮಾಡಲು ಕಾದಿದ್ದರು. ಚೆಡ್ಡಿಗಳ ಪ್ರಚೋದನೆಯಿಂದ ಒಬ್ಬ ರಿಕ್ಷಾ ಡ್ರೈವರ್ ಮಂತ್ರಿ ಅಭಯನ ಎದುರು ನಿಂತೇ ಧಿಕ್ಕಾರ ಕೂಗಿದ್ದಾನೆ. ಇದನ್ನು ಜಾಣ್ಮೆಯಿಂದ ನಿಭಾಯಿಸುವ ಕಲೆ ಗೊತ್ತಿಲ್ಲದ ಹಸೀ ಹುಂಬ ಅಭಯ ಆ ಡ್ರೈವರ್‌ನೊಂದಿಗೆ ಜಗಳಕ್ಕೆ ನಿಂತಿದ್ದಾನೆ. ಮಾತಿಗೆ ಮಾತು ಬೆಳೆದಿದೆ. ಮಂತ್ರಿ ಡ್ರೈವರ್‌ಗೆ ಬಾರಿಸಿದ್ದಾನೆ. ಕಾಂಗ್ರೆಸ್ ಸರ್ಕಾರ ಮಾನ ಹರಾಜಾಗಿ ಸಂಘ ಪರಿವಾರದ ಹಿಂದುತ್ವ ಹಿಡನ್ ಅಜೆಂಡಾಗೆ ಮಂತ್ರಿ ಅಭಯನಿಂದ ಬಲ ಬಂದಿದೆ.

ಅಭಯನಂತಹ ಎಡವಟ್ಟು ಕಾಂಗ್ರೆಸ್ ಲೀಡರ್‌ಗಳಿಂದಾಗಿಯೇ ಇವತ್ತು ದಕ್ಷಿಣ ಕನ್ನಡವೆಂದರೆ ಹಿಂದುತ್ವದ ಹಿಂಸೆಯ ಪ್ರಯೋಗಶಾಲೆಯಂತಾಗಿದೆ. ಟೀಕೆಗಳನ್ನು ಸಕಾರಾತ್ಮಕವಾಗಿ- ತಣ್ಣಗೆ ಎದುರಿಸಿ ತಪ್ಪು ತಿದ್ದಿಕೊಳ್ಳುವ ಸರಳ ಯೋಚನೆಯೇ ಇಲ್ಲದ ಅಭಯನ ಗೂಂಡಾಗಿರಿ ಪುರಾಣ ಒಂದೆರಡಲ್ಲ! ಮೊಯ್ಲಿ ಮಹಾತ್ಮೆಯಿಂದ ಈ ಬಸ್ ಮಾಫಿಯಾ ಡಾನ್ ವಿಧಾನ ಪರಿಷತ್ ಸದಸ್ಯನಾದಾಗಲೇ ಮೂಡಬಿದರೆಯ ಚೌಕಿದಾರನಂತೆ ಹಾರಾಡತೊಡಗಿದ್ದ. ಮೊದಲ ಬಾರಿ ಎಮ್ಮೆಲ್ಲೆಯಾದಾಗ ಕ್ಷೇತ್ರದ ಸಾರ್ವಜನಿಕರ ಮೇಲೇರಿ ಹೋಗಲಾರಂಭಿಸಿದ್ದ. ಅಂದಿನ ಕಾಂಗ್ರೆಸ್ ಶಾಸಕ ವಿಜಯಕುಮಾರ್ ಶೆಟ್ಟಿಗೆ ಬೂಟು ಕಾಲಿಂದ ಒದೆಯುವುದಾಗಿ ಈ ಮೊಯ್ಲಿ ಬಂಟ ಬೈದು ರೋಫ್ ಹಾಕಿದ್ದ. ಸುರತ್ಕಲ್‌ನ ಶಾಸಕನಾಗಿದ್ದ ಶೆಟ್ಟಿ ತನ್ನ ಬಾಸ್ ಮೊಯ್ಲಿಯ ಕಡು ಶತ್ರು ಜನಾರ್ದನ ಪೂಜಾರಿ ಶಿಷ್ಯನೆಂಬುದೇ ಅಭಯನ ಅನಾಗರಿಕ ಅರಚಾಟಕ್ಕೆ ಮೂಲವಾಗಿತ್ತು.

ಅಭಯನ ಅಹಂಕಾರದ ಹಾರಾಟದ ಮತ್ತೊಂದು ಸ್ಯಾಂಪಲ್ ಹೀಗಿದೆ. ತನ್ನ ಪರಂಪರಾಗತ ಎದುರಾಳಿ (ಜೆಡಿಎಸ್) ಮಾಜಿ ಮಂತ್ರಿ ಅಮರನಾಥ ಶೆಟ್ಟಿ ಎಂಬ ಸರಳ-ಸಜ್ಜನನಿಗೆ ಒಂದು ಎಲೆಕ್ಷನ್ ಹೊತ್ತಲ್ಲಿ ಅಭಯ ಸೊಂಟದ ಕೆಳಗಿನ ಭಾಷೆಯಲ್ಲಿ ಟೀಕಿಸಿದ್ದ. ಇದು ದೊಡ್ಡ ಗಲಾಟೆಗೆ ಕಾರಣವಾಗಿತ್ತು. ಸದಾ ಬೌನ್ಸರ್‌ಗಳನ್ನು ಬೆನ್ನಿಗಿಟ್ಟುಕೊಂಡೇ ಓಡಾಡುವ ಈ ಭಂಡನ ಬಳಿಗೆ ಹೋಗಲಿಕ್ಕೇ ಜನರೀಗ ಅಂಜುವಂತಾಗಿದೆ. ಒಂದು ಮಂತ್ರಿಯ ನಾಲಿಗೆ- ಮುಷ್ಟಿಯ ಭಯವಾದರೆ, ಮತ್ತೊಂದು ಆತನ ಖಾಸಗಿ ಬಾಡಿಗಾರ್ಡ್‌ಗಳ ಆಕ್ರಮಣದ ಅಂಜಿಕೆ. ಅತ್ತ ಅಸೆಂಬ್ಲಿಯಲ್ಲೂ ಹಿಂದೆ ಈ ಅಭಯ ಹಿರಿಯ ಮಂತ್ರಿ ಪಿ.ಜಿ.ಆರ್. ಸಿಂಧ್ಯಾರ ಜತೆ ಅಸಭ್ಯವಾಗಿ ವರ್ತಿಸಿ ರಾಜ್ಯವ್ಯಾಪಿ 'ಕೀರ್ತಿ'ಗೂ ಭಾಜನರಾದ ಇತಿಹಾಸ ಇದೆ.

ಒಂದಂತೂ ಖರೆ. ಅಭಯನಿಂದಾಗಿ ಮೊದಲೇ ನೆಲ ಕಚ್ಚಿರುವ ದ.ಕ. ಕಾಂಗ್ರೆಸ್ ಇನ್ನಷ್ಟು ಹೈರಾಣಾಗುವುದು ಗ್ಯಾರಂಟಿ. ಹಾಗೆಯೇ ಜನಪರ ಯೋಚನೆಯ ಸಿಎಂ ಸಿದ್ದು ಸರ್ಕಾರಕ್ಕೆ ಈತ ದೊಡ್ಡ ದೃಷ್ಟಿ ಬೊಟ್ಟೇ. ಮೊನ್ನೆಯ ಎಲೆಕ್ಷನ್‌ನಲ್ಲೂ ಈತ ಜನಾರ್ದನ ಪೂಜಾರಿ ವಿರುದ್ಧವೇ ಕಾರ್ಯಾಚರಣೆ ನಡೆಸಿ 'ಗುರು' ಮೊಯ್ಲಿಯನ್ನು ಸಂಪ್ರೀತಗೊಳಿಸಿದ್ದಾನೆ. ಈತನ ಮಂತ್ರಿಗಿರಿ ಮೂಡಬಿದರೆಗಷ್ಟೇ ಅಲ್ಲ, ಇಡೀ ದಕ್ಷಿಣ ಕನ್ನಡಕ್ಕೆ ಹೊರೆಯಂತಾಗಿದೆ. ಸಿಎಂ ಸಿದ್ದು ಈ ಮದ್ದಾನೆಗೆ ಅಂಕುಶ ಹಾಕುವರಾ?!

● ವರದಿಗಾರ

...ಥ ದೇಶವ ಕಂಡು ಮಮ್ಮಲ ಮರುಗು

...ತದತರಂಗದ ಅರಿವಿಲ್ಲದಂಥ ದೇಶ
...ಂಗದಿ ಧಾಂಬಿಕತೆ ಮೆರೆವಂಥ ದೇಶ:
... ದೇಶವ ಕಂಡು ಮಮ್ಮಲ ಮರುಗು.

...ಬವ ಕಾಳನು ತಾ ಬೆಳೆಯದ ದೇಶ
...ಡುವ ಬಟ್ಟೆಯ ತಾ ನೂಲದ ದೇಶ:
... ದೇಶವ ಕಂಡು ಮಮ್ಮಲ ಮರುಗು.

... ದಾಂಡಿಗನ ಪಟ್ಟಕ್ಕೇರಿಸೋಂಥ ದೇಶ
...ಕೋರರಿಗೆ ಒಕ್ಕೊರಲ ಜಯಕಾರ ಹಾಕುವ ದೇಶ:
... ದೇಶವ ಕಂಡು ಮಮ್ಮಲ ಮರುಗು.

... ಬಯಕೆ ಬುಗ್ಗೆಗೆ ಬೆಚ್ಚಿ ಬೀಳುವ ದೇಶ
...ದ್ದು ದೊಗ್ಗು ಸಲಾಮು ಹೊಡೆವಂಥ ದೇಶ:
... ದೇಶವ ಕಂಡು ಮಮ್ಮಲ ಮರುಗು.

...ತಿಂದರು ಎದೆ ಸೆಟೆಸಿ ನಿಲ್ಲದಂಥ ದೇಶ
...ಶಾತೆಯಲಿ ಎದೆ ಬಡಿದು ರೋದಿಸುವ ದೇಶ:
... ದೇಶವ ಕಂಡು ಮಮ್ಮಲ ಮರುಗು.

...ವ ಗತ ನಾಡೇ ಹಿತವೆನ್ನುವ ದೇಶ
...ಶದಿ ತಲೆ ಎತ್ತಲು ಕೊಸರಾಡುವ ದೇಶ:
... ದೇಶವ ಕಂಡು ಮಮ್ಮಲ ಮರುಗು.

ನರಿಬುದ್ಧಿಯುವ ಆಡಳಿತಗಾರನಾದಂಥ ದೇಶ
ಯಾಮಾರಿಸುವ ಸಲಹೆಗಾರನಿರುವಂಥ ದೇಶ
ತೇಪೆ ಹಾಕಿದ ಅಣಕವಾಡೇ ಕಲೆ ಅನ್ನೋಂಥ ದೇಶ:
ಇಂಥ ದೇಶವ ಕಂಡು ಮಮ್ಮಲ ಮರುಗು.

ಸೋತವರ ಹಂಗಿಸಿ ಹೀಯಾಳಿಸಿ ಬೀಳ್ಕೊಡದಂಥ ದೇಶ
ಗೆದ್ದವರ ಭಟ್ಟಂಗಿ ಭಜಂತ್ರಿ ಬಾರಿಸಿ ಎದಿರುಗೊಳ್ಳೋಂಥ ದೇಶ:
ಇಂಥ ದೇಶವ ಕಂಡು ಮಮ್ಮಲ ಮರುಗು.

ಪರಿಜ್ಞಾನಿ ಹಿರಿಕರು ದಿವ್ಯಮೌನಿಗಳಾಗಿರೋಂಥ ದೇಶ
ಹಲ್ಕಚ್ಚಿ ಸೆಣೆಸುವ ಛಲವಂತರು ಗಾಢ ನಿದ್ದೆಯಲ್ಲಿರುವಂಥ ದೇಶ:
ಇಂಥ ದೇಶವ ಕಂಡು ಮಮ್ಮಲ ಮರುಗು.

ಒಡೆದು ಚೂರಾಗಿರೋಂಥ ದೇಶ
ಒಂದೊಂದು ಚೂರು ತಾನೇ ದೇಶ ಅಂತಿರೋ ದೇಶ:
ಇಂಥ ದೇಶವ ಕಂಡು ಮಮ್ಮಲ
ಮರುಗು.

● ಖಲೀಲ್ ಗಿಬ್ರಾನ್

ಕನ್ನಡಕ್ಕೆ: ಕೆ.ಫಣಿರಾಜ್



ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಮೋದಿಯ ನೆರಳು

ಷಾ ಎಂಬ ಉರುಳು



ಕಳೆದ ಲೋಕಸಭೆಯಲ್ಲಿ ದೇಶದ ಅತೀ ಹೆಚ್ಚು ಲೋಕಸಭಾ ಸದಸ್ಯರುಳ್ಳ ಉತ್ತರ ಪ್ರದೇಶದಲ್ಲಿ ಬಿಜೆಪಿಯಿಂದ ಗೆದ್ದು ಬಂದದ್ದು ಕೇವಲ ಹತ್ತು ಮಂದಿ ಸಂಸದರು ಮಾತ್ರ. ಅಂದರೆ ಒಟ್ಟು 80 ಮಂದಿ ಉತ್ತರ ಪ್ರದೇಶದ ಸಂಸದರ ಪೈಕಿ ಹತ್ತು ಮಂದಿ ಎಂದರೆ ಅದು ಹೆಚ್ಚೆಂದರೆ ಶೇ.13 ರಷ್ಟಾಗಬಹುದು.

10 ಮಂದಿಯಿದ್ದ ಬಿಜೆಪಿಗೆ ಏಕಾಏಕಿ ಎಪ್ಪತ್ತೊಂದು ಸ್ಥಾನಗಳು ಲಭಿಸಿತೆಂದರೆ; ಅದನ್ನು ಪವಾಡವೆಂದೇ ತಾನೇ ಭಾವಿಸಬೇಕು?

ಇಂಥಾದ್ದೊಂದು ಪವಾಡಕ್ಕೆ ಕಾರಣನಾದವನ ಹೆಸರು ಅಮಿತ್ ಷಾ. ಅಮಿತ್ ಭಾಯಿ ಅನಿಲ್ ಚಂದ್ರ ಷಾ ಎಂಬುದು ಈತನ ಪೂರ್ತಿ ಹೆಸರು. ದೂರದ ಗುಜರಾತ್‌ನಿಂದ ಉತ್ತರಪ್ರದೇಶಕ್ಕೆ ಬಂದು ಕೇವಲ ಒಂದೂವರೆ ವರ್ಷದೊಳಗೆ ಹತ್ತಿದ್ದ ಬಿಜೆಪಿ ಸಂಸದರ ಸಂಖ್ಯೆಯನ್ನು 71ಕ್ಕೆ ಏರಿಸುವಂಥಾ ಯಾವ ಮಂತ್ರದಂಡ ಈತನ ಬಳಿಯಿತ್ತೆಂದು ಖುದ್ದು ಮುಲಾಯಂ, ಅಖಿಲೇಶ್ ಯಾದವ್, ಮಾಯಾವತಿ ಮಾತ್ರವೇ ಏಕೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಮಗ ರಾಹುಲ್ ಸಮೇತ ತಲೆ ತಲೆ ಚಚ್ಚಿಕೊಳ್ಳುವಂತೆ ಪವಾಡ ಮೆರೆದ ಅಮಿತ್ ಷಾ ಎಂಬ ಹೆಸರೆಷ್ಟು ನಿಗೂಢವೋ ಈತನ ಕಾರ್ಯಾಚರಣೆಯೂ ಅಷ್ಟೇ ರೋಚಕ ಮತ್ತು ಭಯಾನಕ!

ಲೋಕಸಭೆಯ ಒಟ್ಟು ಸದಸ್ಯರ ಪೈಕಿ 80ರಷ್ಟು ಸಂಸದರನ್ನು ಗೆಲ್ಲಿಸಿ ಕಳಿಸುವ ಉತ್ತರ ಪ್ರದೇಶದಲ್ಲೇ ಸೋನಿಯಾ ಮತ್ತು ರಾಹುಲ್ ಗಾಂಧಿ ಪ್ರತಿನಿಧಿಸುವ ರಾಯ್‌ಬರೇಲಿ ಮತ್ತು ಅಮೇಥಿಗಳೂ ಬರುತ್ತವೆಯಲ್ಲವೆ? ಕಾಂಗ್ರೆಸ್ಸಿನ ದೌರ್ಭಾಗ್ಯವೆನ್ನಿ ದುರಂತವೆನ್ನಿ. ಈ ಹಿಂದೆ 21 ಮಂದಿ ಕಾಂಗ್ರೆಸ್ ಸಂಸದರಿದ್ದ ಉತ್ತರ ಪ್ರದೇಶಕ್ಕೀಗ ತಾಯಿ ಮಗ ಬಿಟ್ಟರೆ ಮೂರನೇ ಕಾಂಗ್ರೆಸ್ ಸಂಸದನೊಬ್ಬ ಗತಿಯಿಲ್ಲ, ಕೇವಲ ಇಬ್ಬರೇ ಇಬ್ಬರು ಕಾಂಗ್ರೆಸ್ ಎಂಪಿಗಳು ಮಾತ್ರ.

ಮುಲಾಯಂ ದುರ್ಗತಿ

ಕಾಂಗ್ರೆಸ್ ಪಾಡೇನೋ ಹೀಗಾಯಿತು. ಇನ್ನು ಉತ್ತರ ಪ್ರದೇಶವನ್ನು ಸದ್ಯ ಆಳುತ್ತಿರುವ ಸಮಾಜವಾದಿ ಪಕ್ಷದ ಮಹಾನ್ ನೇತಾರ ಮುಲಾಯಂ ಸಿಂಗ್ ಮತ್ತವರ ಮುಖ್ಯಮಂತ್ರಿ ಪುತ್ರ ಅಖಿಲೇಶ್ ಯಾದವ್‌ರ ಮಾನವಾದರೂ ಉಳಿಯಬೇಕಿತ್ತಲ್ಲವೆ?

ಕಳೆದ ಬಾರಿ ಸಮಾಜವಾದಿ ಪಕ್ಷದಿಂದ 23 ಮಂದಿ ಸಂಸದರು ಉತ್ತರ ಪ್ರದೇಶದಿಂದ ಗೆದ್ದು ಬಂದಿದ್ದರೆ ಈ ಬಾರಿ ಅದು ಬೆರಳೆಣಿಕೆಯಷ್ಟು ಅಂದರೆ ಕೇವಲ ಐದಕ್ಕೆ ಕುಸಿದಿದೆ. ಸದ್ಯ ಯುಪಿಯನ್ನಾಳುತ್ತಿರುವುದು ಸಮಾಜವಾದಿ ಸರ್ಕಾರ. ಯುಪಿಯ ಮಹಾನ್ 'ನೇತಾಜಿ' ಮುಲಾಯಂ ಸಿಂಗ್ ಯಾದವ್ ನಿನ್ನೆ ಮೊನ್ನೆಯ ತನಕ ಕೇಂದ್ರ ಮಂತ್ರಿಯಾಗಿದ್ದವರು. ಅವರ ಮಗನೇ ರಾಜ್ಯದ ಮುಖ್ಯಮಂತ್ರಿಯಾಗಿದ್ದೂ ಹಿಂದಿದ್ದ 23 ಕ್ಕಿಂತಲೂ ಹೆಚ್ಚಿಗೆ ಗೆಲ್ಲುವುದು ಹಾಳಾಗಲಿ ಕನಿಷ್ಠ ಇಪ್ಪತ್ತು ಸೀಟಾದರೂ ಗೆಲ್ಲಬೇಕಿತ್ತಲ್ಲವೇ? ಎಲ್ಲಿಯ ಇಪ್ಪತ್ಮೂರು ಎಲ್ಲಿಯ ಐದು?

ಉತ್ತರ ಪ್ರದೇಶ ಕಂಡ ಮತ್ತೊಬ್ಬ ರಾಷ್ಟ್ರ ನಾಯಕಿಯೆಂದರೆ ಅದು ಬಹುಜನ ಸಮಾಜ ಪಕ್ಷದ ಅಧಿನಾಯಕಿ ಮಾಯಾವತಿ. ಸಮಾಜವಾದಿ ಸರ್ಕಾರ ತಪ್ಪಿದರೆ ಬಿಎಸ್‌ಪಿ ಅಧಿಕಾರಕ್ಕೆ ಬರುವುದು ಈತನಕ ಉತ್ತರಪ್ರದೇಶ ಕಂಡ ವಾಡಿಕೆ. ಬಿಜೆಪಿ, ಕಾಂಗ್ರೆಸ್, ಜನತಾದಳ, ಕಮ್ಯೂನಿಸ್ಟ್‌ಗಳೆಲ್ಲವನ್ನೂ ಬದಿಗೊತ್ತಿ ಸಮಾಜವಾದಿ ಪಾರ್ಟಿ ಮತ್ತು ಬಹುಜನ ಸಮಾಜ ಪಕ್ಷಗಳೇ ಕಳೆದೆರಡು ದಶಕದಿಂದ ಉತ್ತರ ಪ್ರದೇಶವನ್ನಾಳುತ್ತಿರುವಾಗ ಕಳೆದ ಬಾರಿ 20ರಷ್ಟಿದ್ದ ಬಿಎಸ್‌ಪಿ ಸಂಸದರ ಸಂಖ್ಯೆ ಈ ಬಾರಿ ಕನಿಷ್ಠ ಹದಿನೈದಾದರೂ ಇರಬೇಕಿತ್ತಲ್ಲವೆ? ಬೇಡ ಯಕಶ್ಚಿತ್ 10 ಸ್ಥಾನವಾದರೂ ಬೇಡವೆ?

ಅದೇನು ದುರಂತವೋ ಗೊತ್ತಿಲ್ಲ, 20 ಮಂದಿ ಸಂಸದರಿದ್ದ ಮಾಯಾವತಿ ಮಡಿಲಿಗೀಗ ಒಬ್ಬೇ ಒಬ್ಬ ಸಂಸದ ದಿಕ್ಕಿಲ್ಲ. ಇಪ್ಪತ್ತೊಂದಿದ್ದ ಕಾಂಗ್ರೆಸ್ ಎರಡಕ್ಕಿಳಿದು, ಇಪ್ಪತ್ಮೂರಿದ್ದ ಸಮಾಜವಾದಿ ಪಾರ್ಟಿ ಐದಕ್ಕೆ ಕುಸಿದು, ಇಪ್ಪತ್ತಿದ್ದ ಬಹುಜನ ಸಮಾಜ ಪಕ್ಷ ನಾಮಕಾವಸ್ತೆಗೊಂದು ಖಾತೆ ಯನ್ನೂ ತೆರೆಯದಂತೆ ಮಾಡಿದ ಮಾಂತ್ರಿಕನೇ ಅಮಿತ್ ಷಾ!

ಕಳೆದ ಬಾರಿ ಕೇವಲ ಹತ್ತಿದ್ದ ಬಿಜೆಪಿ ಸಂಸದರ ಸಂಖ್ಯೆಯನ್ನು ರಾತ್ರೋರಾತ್ರಿ 71ಕ್ಕೇರಿಸಿದ್ದೂ ಇದೇ ನವ ಚಾಣಕ್ಯನೆ.

ನವ ಚಾಣಕ್ಯ

ಚರಣ್‌ಸಿಂಗ್ ಪುತ್ರ ಅಜಿತ್‌ಸಿಂಗ್‌ರ ಲೋಕದಳ, ಮುಸ್ಲಿಂ ಲೀಗ್, ಜನತಾ ದಳ, ಕಮ್ಯೂನಿಸ್ಟ್ ಇತ್ಯಾದಿ ಅಸಂಖ್ಯಾತ ಪಕ್ಷಗಳ್ಯಾವುದಕ್ಕೂ ಚೋಣಿಯಾಗದ ಹಾಗೆ ಮಾಡಿ, ಮಣ್ಣು ಪಾಲಾಗಿದ್ದ ಬಿಜೆಪಿಯನ್ನು ಮುಗಿಲಿಗೇರುವಂತೆ ಮಾಡಿ, ದೇಶದ ರಾಜಕೀಯ ಪಂಡಿತರೆಲ್ಲರ ಲೆಕ್ಕಾಚಾರ ತಲೆಕೆಳಗಾಗಿಸಿ, ಸಮಸ್ತ ಮಾಧ್ಯಮ ರಾಜಕೀಯ ಲೋಕವನ್ನೇ ಬೆಸ್ತು ಬೀಳಿಸುವಂತೆ ಮಾಡಿದ ಅಮಿತ್ ಷಾನನ್ನೇ ಸದ್ಯ ನವ ಚಾಣಕ್ಯ ಎಂದು ಮಾಧ್ಯಮಗಳು ಬಿಂಬಿಸುತ್ತಿವೆ. ಉತ್ತರ ಪ್ರದೇಶದಲ್ಲಿ ಬಿಜೆಪಿ ಜೊತೆ ಸ್ಥಾನ ಹೊಂದಾಣಿಕೆ ಮಾಡಿಕೊಂಡಿದ್ದ ಅಪ್ನಾ ದಳ್ ಎಂಬ ಮರಿ ಪಾರ್ಟಿ ಗೆದ್ದ ಎರಡು ಸ್ಥಾನಗಳನ್ನೂ ಸೇರಿಸಿದರೆ ಯುಪಿಯ ಒಟ್ಟು 80 ಸ್ಥಾನಗಳ ಪೈಕಿ ಬಿಜೆಪಿ ಕೂಟವೊಂದೇ 73 ಸ್ಥಾನಗಳನ್ನು ಬಾಚಿದಂತಾಯ್ತು.

ಇದರರ್ಥ ಉತ್ತರ ಪ್ರದೇಶದಲ್ಲಿ ಶೇ.90ಕ್ಕೂ ಅಧಿಕ ಸ್ಥಾನಗಳನ್ನು ಬಿಜೆಪಿಯೊಂದೇ ಬಾಚಿಕೊಂಡಿತು!

ಈ ಹಿಂದೆ ಯುಪಿಯ ಒಟ್ಟು ಮತಗಳ ಪೈಕಿ ಶೇ.12 ರಷ್ಟಿದ್ದ ಬಿಜೆಪಿ ಏಕಾಏಕಿ ಮೋದಿ ಅಲೆಗೆ ಸಿಲುಕಿ ಶೇ. 42.3 ರಷ್ಟು ಓಟು ಬಾಚುತ್ತದೆಯೆಂದರೆ ಅದಕ್ಕೆ ಕಾರಣನಾದ ಅಮಿತ್ ಷಾ ಕೇವಲ ಒಂದೂವರೆ ವರ್ಷದಲ್ಲಿ ಉತ್ತರ ಪ್ರದೇಶದಂಥ ಘಟಾನುಘಟಿಗಳ ರಾಜ್ಯದಲ್ಲಿ ಮಾಡಿದ ಕಾರಸ್ಥಾನವಾದರೂ ಎಂಥದ್ದು?

ಎನ್‌ಡಿಎ ಕತೆ ಒತ್ತಟ್ಟಿಗಿರಲಿ ಬಿಜೆಪಿ ಗಿಟ್ಟಿಸಿದ 280 ಕ್ಕೂ ಅಧಿಕ ಸ್ಥಾನಗಳ ಪೈಕಿ ಉತ್ತರ ಪ್ರದೇಶವೊಂದರಿಂದಲೇ 71 ಸ್ಥಾನಗಳನ್ನು ಗಳಿಸಿಕೊಟ್ಟ ಅಮಿತ್ ಷಾ ಸದ್ಯ ಮೋದಿ ಬಿಟ್ಟರೆ ಬಿಜೆಪಿಯ ಎರಡನೇ ಸರ್ವಶಕ್ತ ನಾಯಕ!

ಬಿಜೆಪಿಯ ಪಿತಾಮಹನೆಂದೇ ಚಾಲ್ತಿಯಲ್ಲಿದ್ದ ಅಡ್ವಾನಿ, ಬಿಜೆಪಿಯ ಮತ್ತೊಬ್ಬ ಹಿರಿಯ ನಾಯಕ ಮುರಳಿ ಮನೋಹರ್ ಜೋಷಿ, ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್, ಸುಷ್ಮಾ ಸ್ವರಾಜ್, ಉಮಾ ಭಾರತಿ, ಅರುಣ್ ಜೈಟ್ಲಿ, ಗಡ್ಕರಿ, ವೆಂಕಯ್ಯ ನಾಯ್ಡು, ಅನಂತ್‌ಕುಮಾರ್ ಇತ್ಯಾದಿಗಳೆಲ್ಲರನ್ನೂ ರಾತ್ರೋರಾತ್ರಿ ಬದಿಗೊತ್ತಿ ಮೋದಿಯ ನಂತರದ ಅತ್ಯಂತ ಪ್ರಭಾವಿ ಮತ್ತು ಬಲಾಢ್ಯ ನಾಯಕನೆಂದೇ ಚಾಲ್ತಿಗೆ ಬಂದ ಅಮಿತ್ ಷಾ ಉತ್ತರ ಪ್ರದೇಶದಂಥ ರಾಜ್ಯವೊಂದನ್ನು ಅದ್ಯಾವ ಮಾಯೆಯಿಂದ ಗೆದ್ದನೆಂಬುದೇ ಇವತ್ತಿಗೂ ನಿಗೂಢ.

ಫೇಕ್ ಎನ್‌ಕೌಂಟರ್ಸ್

2013ರ ಜೂನ್‌ನಲ್ಲಿ ಗೋವಾದಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯ ಹೊತ್ತಿಗೆ ಅಮಿತ್ ಷಾ ಕೇವಲ ಗುಜರಾತ್‌ನ ಮೋದಿ ಸಂಪುಟದ ಮಂತ್ರಿಯಷ್ಟೆ. ಮೋದಿ ಗುಜರಾತ್‌ಗೆ ಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ ಆತನ ಕ್ಯಾಬಿನೆಟ್‌ನ ಏಳೆಂಟು ಖಾತೆಗಳನ್ನಾಳುತ್ತಿದ್ದವನು ಅಮಿತ್ ಷಾ. ಗುಜರಾತ್‌ನ ಪೊಲೀಸ್ ಖಾತೆ, ಕಾನೂನು ಮತ್ತು ಸಂಸದೀಯ ಇಲಾಖೆ, ಸಹಕಾರ ಖಾತೆ, ಮುಜರಾಯಿ, ವಸತಿ ಇತ್ಯಾದಿ ಅರ್ಧ ಡಜನ್ನಿಗೂ ಅಧಿಕ ಪ್ರಭಾವಿ ಇಲಾಖೆಗಳನ್ನು ಸತತ ಒಂದು ದಶಕದ ಕಾಲ ನಿಭಾಯಿಸಿದ ಅಮಿತ್ ಷಾ ಮೊದಲ ಬಾರಿಗೆ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿದ್ದು ಇಶ್ರತ್ ಜಹಾನ್ ನಕಲಿ ಎನ್‌ಕೌಂಟರ್ ಕೇಸಿನಲ್ಲಿ.

ಗುಜರಾತ್‌ನ ನಟೋರಿಯಸ್ ಗ್ಯಾಂಗ್‌ಸ್ಟರ್ ಸೊಹ್ರಾಬುದ್ದೀನ್ ಮತ್ತು ಆತನ ಪತ್ನಿಯ ನಕಲಿ ಎನ್‌ಕೌಂಟರ್ ಪ್ರಜಾಪತಿ ಎಂಬ ಪೊಲೀಸ್ ಮಾಹಿತಿದಾರನ ಕೊಲೆ, ಇಶ್ರತ್ ಜಹಾನ್ ಮತ್ತು ಇತರೆ ಮೂವರ ಎನ್‌ಕೌಂಟರ್... ಹೀಗೆ ಗುಜರಾತ್‌ನ ಪೊಲೀಸ್ ಮತ್ತು ಜೈಲು ಖಾತೆ ಮಂತ್ರಿಯಾಗಿದ್ದುಕೊಂಡೇ ಒಂದಲ್ಲ ಮೂರು ನಕಲಿ ಎನ್‌ಕೌಂಟರ್ ಪ್ರಕರಣಗಳಲ್ಲಿ ಖುದ್ದು ಆರೋಪಿಯಾಗಿ ಜೈಲುಪಾಲಾದ ಅಮಿತ್ ಷಾನ ಹೆಸರು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಮಟ್ಟದಲ್ಲಿ ಮೊದಲ ಬಾರಿಗೆ ಪ್ರಸ್ತಾಪಿಸಲ್ಪಟ್ಟದ್ದು 2013ರ ಜೂನ್‌ನಲ್ಲಿ.



ಗೋವಾದಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಗುಜರಾತ್ ಮುಖ್ಯಮಂತ್ರಿ ಮೋದಿಯನ್ನು ಮುಂಬರುವ ಲೋಕಸಭಾ ಚುನಾವಣಾ ಪ್ರಚಾರ ಸಮಿತಿಗೆ ಅಡ್ವಾನಿಯ ಪ್ರತಿಭಟನೆಯ ನಡುವೆಯೂ ರಾಜನಾಥ್ ಗುಂಪು ಅಧ್ಯಕ್ಷನನ್ನಾಗಿಸಿದರೆ ಅದರ ಬೆನ್ನಲ್ಲೇ ಅಮಿತ್ ಷಾನನ್ನು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿತ್ತು. ಸತತ 12 ವರ್ಷಗಳ ಕಾಲ ಮುಖ್ಯಮಂತ್ರಿ ಮೋದಿಯ ಗುಜರಾತ್ ಸಂಪುಟದ ಪ್ರಭಾವಿ ಮಂತ್ರಿಯಾಗಿದ್ದ ಅಮಿತ್ ಷಾ ತಿಹಾರ್ ಜೈಲು ಪಾಲಾಗಿ ಜಾಮೀನಿನ ಮೇಲೆ ಹೊರಬಿದ್ದ. ಆತನ ವಿರುದ್ಧ ಇರುವ ನಕಲಿ ಎನ್‌ಕೌಂಟರ್ ಕೇಸುಗಳಲ್ಲಿ ಆತ ಮೂಗು ತೂರಿಸಬಾರದೆಂಬ ಕಾರಣಕ್ಕೆ ಸುಪ್ರೀಂಕೋರ್ಟ್ ಷಾ ಗುಜರಾತಿಗೆ ಕಾಲಿಡಕೂಡದೆಂದು ಷರತ್ತು ವಿಧಿಸಿದೆ. ಹೀಗೆ ಜಾಮೀನಿನ ಮೇಲೆ ಜೈಲಿನಿಂದ ಹೊರ ಬಂದ ಷಾ 2013ರ ಜೂನ್‌ನ ಗೋವಾ ಕಾರ್ಯಕಾರಿಣಿಯ ನಂತರ ಮತ್ತೆ ಮಾಧ್ಯಮಗಳ ಕಣ್ಣಿಗೆ ಬಿದ್ದದ್ದು ದೆಹಲಿಯ ಗುಜರಾತ್ ಭವನದಲ್ಲಿ.

ಯುಪಿಯ ಹೊಣೆ ಹೊತ್ತು

1964ರಲ್ಲಿ ಹುಟ್ಟಿದ ಅಮಿತ್ ಷಾ ತನ್ನ 20ನೇ ವಯಸ್ಸಿಗೇ ಆರೆಸ್ಸೆಸ್ ಕಾರ್ಯಕರ್ತನಾಗಿದ್ದ. ಮಾಸಿದ ಕುರ್ತಾ-ಪೈಜಾಮಾ, ಕಾಲಿಗೆ ಹಳೇ ಚಪ್ಪಲಿ, ಕುತ್ತಿಗೆಯಲ್ಲಿ ರುದ್ರಾಕ್ಷಿ, ಬೋಳುತಲೆ ಮತ್ತು ಕಪ್ಪು ಗಡ್ಡ ಬಿಟ್ಟು ಸರ್ವೇಸಾಮಾನ್ಯ ಆರೆಸ್ಸೆಸ್ ಕಾರ್ಯಕರ್ತನಂತೆಯೇ ದೆಹಲಿಯ ಗುಜರಾತ್ ಭವನದ ಸಣ್ಣ ಕೊಠಡಿಯೊಂದರಲ್ಲಿ ವಾಸಿಸುತ್ತಿದ್ದ ಅಮಿತ್ ಷಾನ ಬೆನ್ನಿಗೆ ಮೋದಿ ದೊಡ್ಡ ಹೊರೆಯನ್ನೇ ಹೊರಿಸಿದ್ದ. ಅದು ಉತ್ತರ ಪ್ರದೇಶದ ಚುನಾವಣಾ ರಣತಂತ್ರದ ಹೊಣೆಗಾರಿಕೆ.

ಆ ನಂತರ ಲಕ್ನೋದ ಬಿಜೆಪಿ ಕಚೇರಿಯಲ್ಲಿ ಪ್ರತ್ಯಕ್ಷನಾದ ಅಮಿತ್ ಷಾ ಯಾರೆಂಬುದೇ ಯುಪಿಯ ಬಿಜೆಪಿ ಕಾರ್ಯಕರ್ತರಿಗೆ ಗೊತ್ತಿರಲಿಲ್ಲ. ಅಲ್ಲಿಂದಾಚೆಗೆ ಅದೇ ಲಕ್ನೋದ ಬಿಜೆಪಿ ನಾಯಕರೊಬ್ಬರ ಫ್ಲಾಟಿನಲ್ಲಿ ಕೆಲಕಾಲ ವಾಸವಿದ್ದದ್ದು ಬಿಟ್ಟರೆ ಉತ್ತರ ಪ್ರದೇಶದ ಅತಿರಥ ಮಹಾರಥರಾದ ಮುಲಾಯಂ, ಮಾಯಾವತಿ, ಅಖಿಲೇಶ್, ಅಜಿತ್ ಸಿಂಗ್, ಅಜಂಖಾನ್, ಮೇನಕಾ ಗಾಂಧಿ ಮುಂತಾದವರಿಗೆಲ್ಲ ಅಮಿತ್ ಕಾಣಿಸಿದ್ದು ತನ್ನ ರಕ್ಕಸ ಕಾರ್ಯತಂತ್ರದ ಮೂಲಕವೆ.

ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ಖುದ್ದು ಉತ್ತರ ಪ್ರದೇಶದವರೆ. ಆದರೂ ಉತ್ತರ ಪ್ರದೇಶದಂಥ ಬೃಹತ್ ರಾಜ್ಯವನ್ನೇ ಆಯ್ದು ಅದಕ್ಕೆ ಅಮಿತ್ ಷಾನನ್ನು ಚುನಾವಣಾ ತಾಂತ್ರಿಕನನ್ನಾಗಿ ಮೋದಿ ನೇಮಿಸಿದ್ದಕ್ಕೂ ಕಾರಣವಿತ್ತು. ಅಮಿತ್ ಮೋದಿಯ ಅತ್ಯಂತ ನಂಬಿಕಸ್ಥ ಬಲಗೈ ಬಂಟನಷ್ಟೇ ಅಲ್ಲ, ಮಹಾನ್ ರಣತಂತ್ರ ನಿಪುಣ. ಗೋವಾ ಕಾರ್ಯಕಾರಿಣಿ ತರುವಾಯ ಷಾ ಮಾಡಿದ ಮೊದಲ ಕೆಲಸವೇ ಇಡೀ ಉತ್ತರ ಪ್ರದೇಶವನ್ನು ಸುತ್ತಿ ಬಂದದ್ದು. ಮಾಯಾವತಿ ವಿರುದ್ಧ ಮುಲಾಯಂ ಪಕ್ಷ ಗೆದ್ದು ಸರ್ಕಾರ ರಚಿಸಲು ಕಾರಣ ಮತ್ತು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುವುದೇ ಇದರ ಉದ್ದೇಶವಾಗಿತ್ತು.

ಭೂತ್‌ಕೇಂದ್ರಿತ ತಂತ್ರ

ಹಾಗೇ ರಾಜ್ಯ ಸುತ್ತಿ ಬಂದ ಷಾ ಯುಪಿಯ ವಿಧಾನಸಭೆಯ ಪಕ್ಕದಲ್ಲೇ ಇದ್ದ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಬಹುತೇಕ ನಾಯಕರ ಸಭೆ ಕರೆದು ಮುಂದಿನ ಚುನಾವಣೆಯ ಕಾರ್ಯತಂತ್ರಗಳ ಬಗ್ಗೆ ಸಮಾಲೋಚಿಸುತ್ತಿದ್ದ. ಬೇರೆಲ್ಲ ನಾಯಕರು ಅಖಿಲೇಶ್ ಯಾದವ್ ಮತ್ತು ಬಿಎಸ್ಪಿ ನಾಯಕಿ ಮಾಯಾವತಿಯ ರಣತಂತ್ರದ ಮುಂದೆ ನಿರಾಶಾವಾದಿಗಳಾಗಿ ಉಗುರು ಕಡಿಯುತ್ತಿದ್ದರೆ ಷಾ ಆಶಾ ಕಣ್ಣುಗಳಿಂದಲೇ ವಿವರ ಕಲೆ ಹಾಕಿದ್ದ. ಅದು ಉತ್ತರ ಪ್ರದೇಶದುದ್ದಕ್ಕೂ ಲಭ್ಯವಿದ್ದ ಬಿಜೆಪಿ ಕಾರ್ಯಕರ್ತರು ಮತ್ತು ಮತಗಟ್ಟೆಗಳ ಪಟ್ಟಿ.

"ಈ ಸಾರಿ ನಾವೆಲ್ಲರೂ ಭೂತ್‌ಕೇಂದ್ರಿತವಾಗಿ ಆಖಾಡಕ್ಕಿಳಿಯಬೇಕು. ಏಕೆಂದರೆ ಪ್ರತಿಯೊಂದೂ ಭೂತ್ ಮಟ್ಟದಿಂದಲೇ ಶುರುವಾಗುತ್ತದೆ ಮತ್ತು ಅಂತಿಮವಾಗಿ ಅಲ್ಲಿಂದಲೇ ಎಲ್ಲವೂ ನಿರ್ಧರಿಸಲ್ಪಡುತ್ತದೆ!"

ಷಾನ ಈ ಮಾತಿಗೆ ಯುಪಿ ಬಿಜೆಪಿ ಅಧ್ಯಕ್ಷ ಲಕ್ಷ್ಮಿಕಾಂತ್ ವಾಜಪೇಯಿ ಬಳಿ ಪ್ರತ್ಯುತ್ತರವಿರಲಿಲ್ಲ. ಇದಾಗಿದ್ದೇ ಉತ್ತರ ಪ್ರದೇಶದ ಪ್ರತಿ ಜಿಲ್ಲೆಯನ್ನೂ ಖುದ್ದಾಗಿ ಸುತ್ತಿ ಬಂದ ಷಾ ಆಯಾ ಜಿಲ್ಲಾಮಟ್ಟದಲ್ಲಿ ಬಿಜೆಪಿ ಕಾರ್ಯತಂತ್ರದ ಸಭೆ ಕರೆ ಸ್ಥಳೀಯ ಪರಿಸ್ಥಿತಿ, ಆಯಾ ಪಕ್ಷಗಳ ರಣತಂತ್ರ, ನಾಯಕರ ಇತಿಹಾಸ ಎಲ್ಲವನ್ನೂ ಸೂಕ್ಷ್ಮವಾಗಿ ಪಟ್ಟಿ ಮಾಡಿಕೊಂ ಈ ಹಿಂದೆ ಮಾಯಾವತಿಯ ಬಿಎಸ್ಪಿ ಮತ್ತು ಮುಲಾಯ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ಏರ್ಪಟ್ಟ ಪರಿ ಸನ್ನಿವೇಶಗಳನ್ನು ಷಾ ಅರ್ಥೈಸಿಕೊಂಡಿದ್ದ.

ಒಂದಾನೊಂದು ಕಾಲಕ್ಕೆ ರಾಮಜನ್ಮಭೂ ಹೋರಾಟದ ನೆಲೆಯಾಗಿದ್ದ ಉತ್ತರ ಪ್ರದೇಶದಲ್ಲಿ ಸ್ವ ತಾಕತ್ತಿನ ಮೇಲೆಯೇ ಅಧಿಕಾರಕ್ಕೆ ಬಂದಿದ್ದ ಬಿಜೆ ಇದ್ದಕ್ಕಿದ್ದಂತೆ ತನ್ನ ನೆಲೆ ಕಳೆದುಕೊಂಡಿದ್ದರ ಹಿಂದಿ ಕಾರಣವನ್ನೂ ಅರ್ಥೈಸಿಕೊಂಡಿದ್ದ.

ಬಿಎಸ್ಪಿ ಮತ್ತು ಎಸ್ಪಿಗಳನ್ನು ಸೋಲಿಸಲು ಬೇಕಿದ್ದ ಹೊಸ ಮುಖ ಮತ್ತು ಹೊಸ ಹೊಸ ಭರವಸೆಗಳ ಎಂಬುದು ಅರ್ಥವಾಗುತ್ತಿದ್ದಂತೆ ಸದ್ದಿಲ್ಲದೆ ತನ್ನ ಕಾರಸ ಶುರು ಹಚ್ಚಿಕೊಂಡ. ಸಮಾಜವಾದಿ ಪಕ್ಷದ ಅಖಿಲೇ ಹೆಸರಿಗಷ್ಟೇ ಮುಖ್ಯಮಂತ್ರಿಯಂತಿದ್ದ ಮುಲಾಯಂ ನಂತ ಎಸ್‌ಪಿಯ ಅಧಿನಾಯಕನಂತಿದ್ದ ಆಜಮ್‌ಖಾನ್ ಮ ಎಸ್‌ಪಿಯ ಮಗದೊಬ್ಬ ಅಧಿಪತಿ ಶಿವಪಾಲ್ ಯಾದ ಮಧ್ಯೆ ಅಧಿಕಾರ ಸಂಬಂಧಿ ಘರ್ಷಣೆಯಿತ್ತು. ಇದೆಲ್ಲ ಫಲವಾಗಿ ಅಖಿಲೇಶ್ ಸರ್ಕಾರದ ವಿರುದ್ಧ ಯುಪಿ ಜನಕ್ಕೆ ಜಿಗುಪ್ಸೆ ಶುರುವಾಗಿತ್ತು. ಕೊಟ್ಟ ಭರವಸೆಗಳ ಈಡೇರಿಸುವಲ್ಲಿ ಎಸ್‌ಪಿ ವಿಫಲವಾಗಿತ್ತು. ಇದಲ್ಲದೆ ಎ

ರ ಮುಸ್ಲಿಂ ಓಟ್ ಬ್ಯಾಂಕ್ ದುರಾಸೆಗೆ ಬಿದ್ದು ತೆ ಸೂಕ್ಷ್ಮ ಸಂಗತಿಯೊಂದಕ್ಕೆ ಕೈಯಿಟ್ಟಿತ್ತು.

ಮುಸ್ಲಿಂ ಮೀಸಲಾತಿ?

ಜಿದಂ ಸಾಚಾರ್ ಸಮಿತಿ ವರದಿಯನ್ನು ಗೊಳಿಸುವುದು!

ಮುಸ್ಲಿಮರ ಆರ್ಥಿಕ ಸ್ಥಿತಿಗತಿ ಕುರಿತಂತೆ ಅಧ್ಯಯನ ದ ಸಾಚಾರ್ ಸಮಿತಿ ಮುಸ್ಲಿಮರಿಗೆ ಮೀಸಲಾತಿ ವ ಬಗ್ಗೆ ಕಟ್ಟುನಿಟ್ಟಾಗೇ ಶಿಫಾರಸ್ಸು ಮಾಡಿತ್ತು. ತಕ್ಕಂತೆ ಮುಜಾಫರ್ ನಗರದಲ್ಲಿ ಕೋಮು ಗಲಭೆ ದ್ದಿತು.

2013ರ ಸೆಪ್ಟೆಂಬರ್ ಹೊತ್ತಿಗೆ ಉತ್ತರ ಪ್ರದೇಶದಲ್ಲಿ ಲೆದ್ದ ಕೋಮು ಜ್ವಾಲೆಯಿಂದಾಗಿ ಮೇಲ್ಜಾತಿ ಗಳೆಲ್ಲ ಸಹಜವಾಗೇ ಬಿಜೆಪಿಯತ್ತ ವಾಲುತ್ತಿದ್ದರು. ದರೆ ಮಾಯಾವತಿ, ಮುಲಾಯಂ ಮತ್ತು ಕಾಂಗ್ರೆಸ್ ದಂತೆ ಯುಪಿಯ ಬಲಾಢ್ಯ ಪಕ್ಷಗಳೆಲ್ಲವೂ ಮುಸ್ಲಿಮರ ಾಗಿದ್ದದ್ದು ಬಿಜೆಪಿ ಪಾಲಿಗೆ ರೊಟ್ಟಿ ಜಾರಿ ತುಪ್ಪಕ್ಕೆ ತಾಗಿತ್ತು. ಉತ್ತರ ಪ್ರದೇಶದ ಜನಸಂಖ್ಯೆಯ ಐದನೇ ಭಾಗದಷ್ಟಿದ್ದ ಮೇಲ್ಜಾತಿ ಹಿಂದೂಗಳೆಲ್ಲ ನುಗಟ್ಟಲೆ ಬಹುಜನ ಸಮಾಜ ಪಕ್ಷಕ್ಕೆ ಓಟು ದ್ದರು.

ಉತ್ತರ ಪ್ರದೇಶದ ಇನ್ನೂರಕ್ಕೂ ಅಧಿಕ ಹಿಂದುಳಿದ ಗಳಲ್ಲದೆ ಮೂರನೇ ಒಂದು ಭಾಗದಷ್ಟಿದ್ದ ಯಾದವರು, ಪ್ರದಾಯಿಕವಾಗಿ ಮುಲಾಯಂ ಪಕ್ಷವನ್ನು ಲಿಸುತ್ತಿದ್ದರು. ಇಂಥಾ ಸ್ಥಿತಿಯಲ್ಲಿ ಹಿಂದುಳಿದ ವರ್ಗಗಳ ಶೇ.27ರಷ್ಟು ಮೀಸಲಾತಿಯಲ್ಲಿ ಮುಸ್ಲಿಮರಿಗೆಂದೇ 4.5 ರಷ್ಟು ಮೀಸಲಾತಿ ಕೊಟ್ಟರೆಂದರೆ ಉತ್ತರ ಶದ ಬಹುಸಂಖ್ಯಾತ ಓಬಿಸಿ ವರ್ಗಕ್ಕೆ ದೊಡ್ಡ ಯವಾಗಿ ಸರ್ಕಾರಿ ನೌಕರಿಗಳಲ್ಲೂ ಮುಸ್ಲಿಮರು ಗಳ ಪಾಲಿಗೆ ಕೈಹಾಕುತ್ತಾರೆಂಬ ಪುಕಾರೆಬ್ಬಿಸಿದ್ದೇ ತ್ ಷಾ.


ಉತ್ತರ ಪ್ರದೇಶದಲ್ಲಿ ಬಿಜೆಪಿ ಒಂದೇ ಮುಸ್ಲಿಂ ಲಾತಿಯನ್ನು ವಿರೋಧಿಸುತ್ತಿದ್ದದ್ದು ಅಲ್ಲಿನ ಹಿಂದುಳಿದ ಗಳೆಲ್ಲ ಬಿಜೆಪಿಯತ್ತ ಆಕರ್ಷಿಸುವಂತಾಗಿತ್ತು. ಇದಲ್ಲದೆ ದಿ ಜಾತಿಯಲ್ಲಿ ಹಿಂದುಳಿದ ಗಾಣಿಗರ ಜಾತಿಗೆ ವನೆಂದೂ ಯುಪಿಯ ಇತರೇ ಬಿಜೆಪಿ ನಾಯಕರಾದ ಾಭಾರತಿ, ಕಲ್ಯಾಣ್‌ಸಿಂಗ್, ರಾಜನಾಥ್ ಾದವರೆಲ್ಲರೂ ಹಿಂದುಳಿದ ವರ್ಗದವರೇ ಎಂದು ಮಟ್ಟದ ಪ್ರಚಾರ ಮಾಡಲಾಯಿತು.

ಯಾವ ಹಿಂದುಳಿದ ವರ್ಗ ಮತ್ತು ದಲಿತ ಪರ ಣ ವಿರೋಧಿ ರಾಜಕಾರಣವನ್ನು ಮುಲಾಯಂ, ಯಾವತಿ ರೂಢಿಸಿಕೊಂಡಿದ್ದರೋ ಅಮಿತ್ ಷಾ ಅದನ್ನೇ ಪರವಾಗಿ ಹೈಜಾಕ್ ಮಾಡಿದ್ದೂ ಅಲ್ಲದೆ ಮುಸ್ಲಿಮರ ್ಧ ತಿರುಗಿಸಿ ಬಿಟ್ಟಿದ್ದ. ಪ್ರತಿ ಬೂತ್‌ಗೆ ಈ ಹಿಂದೆ ಮಂದಿ ಕಾರ್ಯಕರ್ತರ ತಂಡ ರಚಿಸಿದ್ದನ್ನು ಏಕಾಏಕಿ ಮಂದಿಗೇರಿಸಿದ. ಇಡೀ ಉತ್ತರ ಪ್ರದೇಶದ ,000 ಮತಗಟ್ಟೆಗಳಿಗೆ ತಲಾ ಹತ್ತು ಮಂದಿಯಂತೆ ರಚಿಸಿ ಅವರಿಗೆ ವಿಶೇಷ ತರಬೇತಿಯ ವ್ಯವಸ್ಥೆ ಸಿದ್ದ. ಜೊತೆಗೆ ಪ್ರತಿ ಮತಗಟ್ಟೆಗೆಂದೇ ತಲಾ ರೋ ಗಾಡಿಯನ್ನೂ ಅದಕ್ಕೆಂದೇ ಐದು ಲಕ್ಷ ಾಯಿಗಳ ಖರ್ಚಿನ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದ. ಬೂತ್ ಒಂದಕ್ಕೆ ಹತ್ತು ಮಂದಿಯ ತಂಡ, ಖರ್ಚಿಗೆ ಲಕ್ಷ ಮತ್ತು ಓಡಾಡಲು ಕಾರು ಸಿಕ್ಕಿತೆಂದರೆ ರ್ತರ ಹುಮ್ಮಸ್ಸೇ ಬೇರೆಯಾಗುತ್ತದೆ. ಇಷ್ಟೆಲ್ಲ ವ್ಯವಸ್ಥೆ ಯೇ ಚುನಾವಣಾ ದಿನದ ರಿಹರ್ಸಲ್ ಎಂಬಂತೆ 21ರಂದು ಲಕ್ನೋದಲ್ಲಿ ಮೋದಿಯ ರ್‍ಯಾಲಿಯನ್ನು ಡಿಸಲಾಗಿತ್ತು.

ಅಂದರೆ ಮೋದಿಯ ರ್‍ಯಾಲಿಯನ್ನೇ ಚುನಾವಣೆಯೆಂದು ಸಿ ಪ್ರತಿ ಬೂತ್ ಮಟ್ಟದಲ್ಲಿ ಕಾರ್ಯಕ್ರಮ ಸಲಾಯಿತು. ಚುನಾವಣೆಗೆಂದೇ ಓಟು ಹಾಕಲು ಂದಂತೆ ಜನ ರ್‍ಯಾಲಿಗೂ ಬರಬೇಕು. ಆಗ ನಿಜವಾದ ನೆಂದು ಗೊತ್ತಾಗುತ್ತದೆ. ಸಾಲದ್ದಕ್ಕೆ ಎಲ್ಲಿ ತಪ್ಪಾಗಿದೆ ದೂ ಸ್ಪಷ್ಟವಾಗುತ್ತದೆ. ಇದಾದ ನಂತರ ಕೊನೆಯ ನೆ ಮನೆಮನೆಗೆ ಪ್ರಚಾರ ಮಾಡುವುದಲ್ಲದೆ ತಲಾ ಮಟ್ಟದಲ್ಲಿ ಕನಿಷ್ಠ ನೂರು ಮಂದಿ ಹೊಸ ಾರರನ್ನು ನೋಂದಾಯಿಸುವ ಕಾರ್ಯಕ್ರಮವನ್ನು ಲಾಯಿತು. ಒಬ್ಬ ಮತದಾರನಿಗೆ ಒಂದಲ್ಲ ಮೂರು ಫೋನ್ ಮಾಡಿ ಆತ್ಮೀಯತೆ ಬೆಳೆಸಿಕೊಳ್ಳುವ ಂದು ವಿಶಿಷ್ಟ ತಂತ್ರವನ್ನೂ ಷಾ ರೂಪಿಸಿದ್ದ. ಇದಲ್ಲದೆ ಾನದ ದಿನ ಮತಗಟ್ಟೆಗೇ ಜನರನ್ನು ಕರೆದೊಯ್ದು ಹಾಕಿಸುವ ರಹಸ್ಯ ಕಾರ್ಯಾಚರಣೆಯನ್ನು ಯೋಜಿಸ ್ದ್ಯಾವುದರ ಪರಿಜ್ಞಾನವೇ ಇಲ್ಲದ ಮುಖ್ಯಮಂತ್ರಿ ೇಶ್ ಮತ್ತು ಬಹುಜನ ಸಮಾಜ ಪಕ್ಷದ ನಾಯಕಿ ಾವತಿ ಈಗ ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. 80 ಸಭಾ ಸ್ಥಾನಗಳ ಪೈಕಿ ಕೇವಲ ಹತ್ತಿದ್ದದ್ದು ೊಂದೇ 71 ಸ್ಥಾನ ಗೆದ್ದು ತನ್ನೊಡನೆ ಅಪ್ನಾದಳದ ್ನು ಗೆಲ್ಲಿಸಿಕೊಂಡ ಪವಾಡದ ಹಿಂದಿದ್ದದ್ದು ಅಮಿತ್ ಾದ್ಯ ತಲೆ ಮತ್ತು ಚಾಣಕ್ಯನ ಛಲವೊಂದೆ.

• ರಾ. ಸೋಮನಾಥ್

ಮೋದಿ ಗೆಲುವಿನಲ್ಲಿ ಅದನಿ-ಅಂಬಾನಿ ದೋಚಿದ್ದು



ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಚಾರಿತ್ರಿಕ ಗೆಲುವು ಸಾಧಿಸಿದ ನಂತರ "ಭಾರತ ಗೆದ್ದಿದೆ; ಒಳ್ಳೆಯ ದಿನಗಳು ಬರಲಿವೆ" ಎಂದು ಮೋದಿ ಟ್ವಿಟರ್‌ನಲ್ಲಿ ಹೇಳಿದ್ದರು (ಇದನ್ನು ಮೋದಿಯೇ ಬರೆದರೋ ಅಥವಾ ಮೋದಿಯ ಪರವಾಗಿ ಪ್ರಚಾರಕರು ಬರೆದರೋ ಸದ್ಯಕ್ಕೆ ತಿಳಿದುಬಂದಿಲ್ಲ!) ಅದು ಹಾಗಿರಲಿ.

ಅಧಿಕಾರ ಹಿಡಿದಿರುವ ಮೋದಿ ಮತ್ತು ಬಿಜೆಪಿ ಪಕ್ಷಗಳಿಗೆ ಚುನಾವಣಾ ಫಲಿತಾಂಶದಿಂದ ಒಳ್ಳೆಯ ದಿನಗಳು ಬಂದಿವೆ ಎಂಬುದನ್ನು ವಿಶೇಷವಾಗಿ ವಿವರಿಸಬೇಕಿಲ್ಲ. ಅದು ಬಿಟ್ಟರೆ ಮತ್ತಾರಿಗೆ ಒಳ್ಳೆಯ ದಿನಗಳು ಬರಲಿವೆ? ಈ ಪ್ರಶ್ನೆಗೆ ಉತ್ತರ ಕಂಡುಹಿಡಿಯಲು ಅಷ್ಟೇನೂ ಪಾಂಡಿತ್ಯ ಬೇಕಾಗಿಲ್ಲ. ಮಾಮೂಲಿಯಂತೆ ದಿನವೂ ಬಿತ್ತರಗೊಳ್ಳುವ ಸುದ್ದಿಗಳನ್ನು ನಾವು ಪರೀಕ್ಷಕ ದೃಷ್ಟಿಯಿಂದ ಗಮನಿಸಬೇಕು ಅಷ್ಟೆ.

ಬಿಜೆಪಿಯ ಗೆಲುವಿನ ಸುದ್ದಿ ತಿಳಿಯುತ್ತಿದ್ದಂತೆಯೇ ಷೇರು ಮಾರುಕಟ್ಟೆಯ ವಹಿವಾಟು ಇದ್ದಕ್ಕಿದ್ದಂತೆ ಏರಿಕೆಯಾಗಿದೆ. ಇದಕ್ಕೆ ಕಾರಣ ನರೇಂದ್ರ ಮೋದಿಯ ಪರಮ ಆಪ್ತರಾದ ಗೌತಮ್ ಅದಾನಿ ಮಾಲಿಕತ್ವದ ಅದಾನಿ ಗ್ರೂಪ್ಸ್ ಮತ್ತು ಮುಖೇಶ್ ಅಂಬಾನಿ ಮಾಲಿಕತ್ವದ ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳು ನಾಗಾಲೋಟದಲ್ಲಿ ಗಗನಕ್ಕೇರಿವೆ. ಹೀಗಾಗಿ ಮೋದಿಯ ಆಪ್ತರು ಒಮ್ಮೆಲೆ ಸಾವಿರಾರು ಕೋಟಿಗಳನ್ನು ಬಾಚಿಕೊಂಡಿದ್ದಾರೆ. ಆದರೆ ನೆನಪಿಡಿ. ಇನ್ನೂ ಮೋದಿ ಅಧಿಕೃತವಾಗಿ ಪ್ರಧಾನಿಯಾಗಿ ಪ್ರಮಾಣವಚನವನ್ನೂ ಸ್ವೀಕರಿಸಿಲ್ಲ.

ಷೇರು ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಏರುಪೇರುಗಳು ಉಂಟಾಗುವುದು ಆಯಾ ಕಂಪನಿಗಳ ಭವಿಷ್ಯದ ಲೆಕ್ಕಾಚಾರದ ಆಧಾರದಲ್ಲಿ. ಹಾಗೆಯೇ ಈ ಬಾರಿಯ ಲೋಕಸಭಾ ಚುನಾವಣಾ ಪ್ರಕ್ರಿಯೆಯ ನಂತರ ಕೆಲವು ಕಂಪನಿಗಳಿಗೆ ಬಂಪರ್ ಲಾಟರಿ ಹೊಡೆಯುವ ಲೆಕ್ಕಾಚಾರದಲ್ಲಿ ಅದಾನಿ ಮತ್ತು ಅಂಬಾನಿ ಕಂಪನಿಗಳು ಸಾವಿರಾರು ಕೋಟಿಗಳನ್ನು ಬಾಚಿಬಿಟ್ಟಿವೆ.

ಸೆಪ್ಟೆಂಬರ್ 13ರಂದು ಮೋದಿಯೇ ಬಿಜೆಪಿಯ ಪ್ರಧಾನಿ ಅಭ್ಯರ್ಥಿಯೆಂದು ಘೋಷಣೆಯಾದ ಕ್ಷಣದಿಂದಲೇ ಅದಾನಿಯ ಅದೃಷ್ಟ ಖುಲಾಯಿಸಿಬಿಟ್ಟಿತ್ತು. ಮೋದಿಯ ಸಖ್ಯದಿಂದ ಅದಾನಿ ಹೇಗೆ ಬೆಳೆದಿದ್ದಾನೆ ಎಂಬುದನ್ನು ಕಣ್ಣಾರೆ ಕಂಡಿರುವ ಷೇರು ಹೂಡಿಕೆದಾರರು, ಮೋದಿ ಮುಂದಿನ ಪ್ರಧಾನಿಯಾದರೆ ಅದಾನಿಯ ಕಂಪನಿಗೆ ಒದಗಬಹುದಾದ ಬಂಪರ್ ಲಾಭಗಳ ಬಗ್ಗೆ ಲೆಕ್ಕಾಚಾರ ಪ್ರಾರಂಭವಾಯಿತು. ಹೀಗೆ ಅದಾನಿ ಕಂಪನಿಯ ಷೇರುಗಳನ್ನು ಕೊಳ್ಳಲು ಹೂಡಿಕೆದಾರರು ಮುಗಿಬಿದ್ದರು.

2013ರ ಸೆಪ್ಟೆಂಬರ್ ತಿಂಗಳಲ್ಲಿ ಸರಾಸರಿ 140 ರೂಪಾಯಿಯಲ್ಲಿದ್ದ ಅದಾನಿ ಷೇರು ಮೌಲ್ಯ ಏಪ್ರಿಲ್ 22ರ ವೇಳೆಗೆ ಮೂರು ಪಟ್ಟು ಏರಿಕೆ ಕಂಡು 432 ರೂಪಾಯಿಗೇರಿತು. ಚುನಾವಣಾ ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಮತ್ತಷ್ಟು ಗಗನಮುಖಿಯಾಗಿ ಏರಿ 525 ರೂಪಾಯಿಗೆ ಏರಿಬಿಟ್ಟಿದೆ. ಬ್ಲೂಮ್‌ಬರ್ಗ್ ಬಿಲಿಯನೇರ್ ಇಂಡೆಕ್ಸ್ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಸೆಪ್ಟೆಂಬರ್ 13ರಂದು 1.9 ಬಿಲಿಯನ್ ಡಾಲರ್ ಅಥವಾ 11,400 ಕೋಟಿಗಳಷ್ಟಿದ್ದ (ಇದೆಲ್ಲ ಅಧಿಕೃತ ಲೆಕ್ಕಗಳಷ್ಟೆ) ಅದಾನಿ ಕಂಪನಿ ಸಮೂಹದ ಮೌಲ್ಯ ಚುನಾವಣಾ ಫಲಿತಾಂಶ ಹೊರಬಿದ್ದ ಮೇ 16ರ ಸಂಜೆಯ ವೇಳೆಗೆ 7.8 ಬಿಲಿಯನ್ ಡಾಲರ್‌ಗಳಿಗೆ, ಅಂದರೆ 46,800 ಕೋಟಿಗಳಿಗೆ ಏರಿಕೆ ಕಂಡಿದೆ. ಅಂದರೆ ಕೇವಲ 8 ತಿಂಗಳಲ್ಲಿ 4 ಪಟ್ಟು ಅಧಿಕ ಅಭಿವೃದ್ಧಿ, ಸುಮಾರು 35,000 ಕೋಟಿಗಳ ಹಠಾತ್ ಲಾಭ! ಮೋದಿ ಮುಖ್ಯಮಂತ್ರಿಯಾದ ನಂತರದ 12 ವರ್ಷಗಳಲ್ಲಿ ಅದಾನಿಯ ಆಸ್ತಿಪಾಸ್ತಿ ಎಷ್ಟು ಪಟ್ಟು ಏರಿಕೆ ಆಗಿರಬಹುದು ಎಂದು ನಾವು ಊಹಿಸಲೂ ಸಾಧ್ಯವಿಲ್ಲ. ಅಧಿಕೃತ ಲೆಕ್ಕಗಳ ಪ್ರಕಾರವೇ ಅದಾನಿ ಆಸ್ತಿ ಮೋದಿ ಅವಧಿಯಲ್ಲಿ 85 ಪಟ್ಟು ಹೆಚ್ಚಳ ಕಂಡಿದೆ!

ಹಾಗೆಯೇ ಈ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ಮಾರ್ಚ್ ತಿಂಗಳಲ್ಲಿ ಸುಮಾರು 800 ರೂಪಾಯಿ ಆಜುಬಾಜಿನಲ್ಲಿದ್ದ ರಿಲಯನ್ಸ್‌ನ ಷೇರುಗಳ ಬೆಲೆ ಚುನಾವಣಾ ಫಲಿತಾಂಶ ಬಂದನಂತರ 1120 ರೂಪಾಯಿಗಳಿಗೆ ಏರಿಕೆಯಾಗಿದೆ. ಷೇರು ಮಾರುಕಟ್ಟೆ ಗೋಲ್‌ಮಾಲ್‌ನಲ್ಲಿ ಅಂಬಾನಿಗಳು ಹೇಗೂ ಎತ್ತಿದ ಕೈ. ಆದ್ದರಿಂದ ಅವರು ಈ ಪರಿಸ್ಥಿತಿಯನ್ನು ಚೆನ್ನಾಗಿಯೇ ಸದುಪಯೋಗಪಡಿಸಿಕೊಂಡಿದ್ದಾರೆ.

ಮುಖೇಶ್ ಅಂಬಾನಿ ಈ ಅವಧಿಯಲ್ಲಿ ಆರು ಬಿಲಿಯನ್ ಡಾಲರ್‌ಗಳಷ್ಟು, ಅಂದರೆ ಸುಮಾರು



36,000 ಕೋಟಿಗಳಷ್ಟು ಲಾಭವನ್ನು ಬಾಚಿದ್ದಾನೆ.

ಚುನಾವಣೆಯ ಎಣಿಕೆ ಶುರುವಾಗಿ ಮೋದಿ ಪರ ಫಲಿತಾಂಶ ಬಂದ ಒಂದೇ ದಿನದಲ್ಲಿ ಮುಖೇಶ್ ಅಂಬಾನಿ ಸುಮಾರು 6,000 ಕೋಟಿಗಳಷ್ಟು ಲಾಭ ಮಾಡಿದರೆ, ಗೌತಮ್ ಅದಾನಿ 3,600 ಕೋಟಿಗಳಷ್ಟು ಲಾಭ ಬಾಚಿದ್ದಾನೆ. ಕಿರಿಯ ಅನಿಲ್ ಅಂಬಾನಿ ಕೂಡ ಇಂಥಾ ಅಭಿವೃದ್ಧಿಯ ಫಲಾನುಭವಿಯೇ. ಆತ ಇದೇ ದಿನ ಸುಮಾರು 3,000 ಕೋಟಿಗಳ ಗಂಟನ್ನು ತನ್ನ ಕಂಪನಿಯ ಲೆಕ್ಕಕ್ಕೆ ಸೇರಿಸಿಕೊಂಡಿದ್ದಾನೆ. ಹೀಗೆ ಮೋದಿ ಗೆಲುವಿನ ಲೆಕ್ಕಾಚಾರದಲ್ಲಿ ಮೋದಿಯ ನಿಕಟವರ್ತಿಗಳೆಂದು ಗುರುತಿಸಲ್ಪಟ್ಟಿರುವ ಹತ್ತಾರು ಕಂಪನಿಗಳು ಸಾವಿರಾರು ಕೋಟಿ ಬಾಚಿವೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಮೋದಿಯನ್ನು ಪ್ರಧಾನಿಯನ್ನಾಗಿ ಮಾಡಲಿಕ್ಕೆ ಕಾರ್ಪೊರೇಟ್ ಕಂಪನಿಗಳು ವ್ಯಯಿಸಿದ ಹಣವನ್ನು ಈಗಾಗಲೇ ಲಾಭದ ಸಮೇತ ಪಡೆದುಕೊಂಡಿವೆ ಎನ್ನಲು ಅಡ್ಡಿಯಿಲ್ಲ.

ಆದರೆ ಇಲ್ಲಿ ನಾವು ಒಂದು ಕಠೋರ ಸತ್ಯವನ್ನು ನೆನಪಿನಲ್ಲಿಡಬೇಕು. ಹೀಗೆ ಸಾವಿರಾರು ಕೋಟಿಗಳ ಹೂಡಿಕೆಯಾಗಿ, ಕೆಲವು ಕಂಪನಿಗಳ ಸಂಪತ್ತು ಸಾವಿರಾರು ಕೋಟಿಗಳಷ್ಟು ಏರಿಕೆ ಕಂಡರೂ ಇದರಿಂದ ಬಡಪಾಯಿ ಮತದಾರರಿಗಾಗಲಿ ಅಥವಾ ಈ ದೇಶದ ಅಭಿವೃದ್ಧಿಗಾಗಲಿ ಎಳ್ಳಷ್ಟೂ ಪ್ರಯೋಜನವಿಲ್ಲ. ಇದು ಕೇವಲ ಷೇರು ಮಾರುಕಟ್ಟೆ ಎಂಬ ಹೆಸರಿನ ಜೂಜುಕಟ್ಟೆಯಲ್ಲಿ ಕೈ ಬದಲಾಗಿರುವ ಮೊತ್ತವಷ್ಟೆ.

ದೇಶದ ಆರ್ಥಿಕ ರಾಜಧಾನಿ ಮುಂಬೈನ ಷೇರು ಮಾರುಕಟ್ಟೆಯಲ್ಲಿ ಇಂಥಾ ಬೆಳವಣಿಗೆಗಳು ನಡೆಯುತ್ತಿದ್ದರೆ, ವಜ್ರ ಮತ್ತು ಚಿನ್ನದ ವ್ಯಾಪಾರಿಗಳೇ ತುಂಬಿ ತುಳುಕುತ್ತಿರುವ ಇದೇ ಮುಂಬೈನ ದಕ್ಷಿಣ ಭಾಗದಲ್ಲಿರುವ ರವಿವೇರಿ ಬಜಾರ್‌ನಲ್ಲಿ ಮೇ 16ರ ಮಧ್ಯಾಹ್ನ ಎಲ್ಲೆಲ್ಲೂ ಪಟಾಕಿಯ ಸದ್ದು ಸಿಹಿ ಹಂಚುವ ಸಂಭ್ರಮವೋ ಸಂಭ್ರಮ. ಕಾರಣ ದೇಶದ ಬಹುತೇಕ ಚಿನ್ನದ ವ್ಯಾಪಾರ ಗುಜರಾತಿ ಮೂಲದ ಮಾರ್ವಾಡಿ ಮತ್ತು ಸಿಂಧಿಗಳ ಕೈಯಲ್ಲೇ ಕೇಂದ್ರೀಕೃತವಾಗಿದ್ದು ಮೋದಿಯ ಗೆಲುವಿನಿಂದ ಅವರೆಲ್ಲರೂ ಥ್ರಿಲ್ ಆಗಿದ್ದಾರೆ.

ಈ ಗುಜರಾತಿ ವ್ಯಾಪಾರಿಗಳ ಆನಂದ ಕೆಲವೇ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗಿದೆ. ಅದೇನೆಂದರೆ ಮೋದಿ ಗೆಲುವಿನ ಸುದ್ದಿ ಹೊರಬಿದ್ದ ಒಂದೆರಡು ದಿನಗಳಲ್ಲೇ ಚಿನ್ನದ ಆಮದಿನ ಮೇಲೆ ವಿಧಿಸಿದ್ದ ಕಟ್ಟಳೆಯನ್ನು ರಿಸರ್ವ್ ಬ್ಯಾಂಕ್ ಸಡಿಲಗೊಳಿಸಿದೆ. ಚಿನ್ನ ಹಾಗೂ ಆಭರಣ ವ್ಯಾಪಾರಿಗಳ ಸಂಘದ ನಿರ್ದೇಶಕ ಸುರೇಶ್ ಜೈನ್ ಪ್ರಕಾರ "ಬಹಳ ದಿನಗಳಿಂದ ಇಟ್ಟಿದ್ದ ಬೇಡಿಕೆ ಈಗ ಈಡೇರಿದೆ."

ಆದರೆ ಕೆಲವು ತಿಂಗಳುಗಳ ಹಿಂದೆ ಚಿನ್ನದ ಆಮದಿಗೆ ಸಂಬಂಧಿಸಿದ ಒಂದು ವಿಷಯವನ್ನು ನಾವು ಇಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದು. ಜಗತ್ತಿನಲ್ಲಿ ಭಾರತವೇ ಬಹುದೊಡ್ಡ ಚಿನ್ನದ ಬಳಕೆದಾರನಾಗಿದ್ದು ನಮ್ಮ ದೇಶದಲ್ಲಿ ಬಿಕರಿಯಾಗುವ ಬಹುತೇಕ ಎಲ್ಲ ಚಿನ್ನವನ್ನೂ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಕಳೆದ ಕೆಲ ತಿಂಗಳುಗಳ ಹಿಂದೆ ಡಾಲರ್ ಸಂಗ್ರಹದಲ್ಲಿ ಕೊರತೆ ಉಂಟಾಗಿ ರೂಪಾಯಿ ಮೌಲ್ಯ ಕುಸಿದ ಹಿನ್ನೆಲೆಯಲ್ಲಿ ಚಿನ್ನದ ಆಮದಿನ ಮೇಲೆ ಕೆಲ ನಿರ್ಬಂಧಗಳನ್ನು ರಿಸರ್ವ್



ಬ್ಯಾಂಕ್ ವಿಧಿಸಿತ್ತು. ರೂಪಾಯಿ ಮೌಲ್ಯ ಕುಸಿದಾಗ ಬೀದಿಯಲ್ಲಿ ಬೊಬ್ಬೆ ಹಾಕಿದ್ದ ಇದೇ ಬಿಜೆಪಿ ಪಕ್ಷ ಇನ್ನೂ ಕುರ್ಚಿಯಲ್ಲಿ ಕೂರುವ ಮುನ್ನವೇ ವ್ಯತಿರಿಕ್ತ ಆರ್ಥಿಕ ನೀತಿಯನ್ನು ಕಣ್ಸನ್ನೆಯಲ್ಲೇ ಜಾರಿ ಮಾಡಿಬಿಟ್ಟಿದೆ.

ಈ ಬೆಳವಣಿಗೆಗಳನ್ನು ಗುಜರಾತ್ ಮಾದರಿ ಅಭಿವೃದ್ಧಿ ಎಂದಾದರೂ ಕರೆಯಬಹುದು ಅಥವಾ ಮುಂಬರುವ ದಿನಗಳ ಭಾರತದ ಅಭಿವೃದ್ಧಿಯ ಸೂಚಕ ಎಂದಾದರೂ ಅರ್ಥ ಮಾಡಿಕೊಳ್ಳಬಹುದು.

•ದೊಡ್ಡಿಪಾಳ್ಯ ನರಸಿಂಹಮೂರ್ತಿ

ಫ್ಯಾಸಿವಾದದ ಸ್ಯಾಂಪಲ್


ಮೋದಿಯ ಆಡಳಿತದಲ್ಲಿ ಕಾನೂನು ಸ್ಥಿತಿಗತಿ ಹೇಗಿರುತ್ತದೆ? ಅದರಲ್ಲೂ ಮೋದಿಯನ್ನು ವಿರೋಧಿಸಿದವರ ಕತೆಯೇನು ಎಂಬುದಕ್ಕೆ ಬೆಂಗಳೂರಿನಲ್ಲೇ ಒಂದು ಸಣ್ಣ ಸ್ಯಾಂಪಲ್ ಸಿಕ್ಕಿದೆ. ಗುಜರಾತ್‌ನಲ್ಲಿ ಮೋದಿ ನೇತೃತ್ವದಲ್ಲಿ ನಡೆದ ನರಹತ್ಯಾಕಾಂಡವನ್ನು ವಿರೋಧಿಸಿ ಮಾತನಾಡಿದ ಕಾರಣಕ್ಕೆ ಪ್ರಗತಿಪರ ಸಾಹಿತಿ ಯು.ಆರ್.ಅನಂತಮೂರ್ತಿಯವರ ಮೇಲೆ ಈ ಕೂಟ ಮುಗಿ ಬಿದ್ದು ತಮ್ಮ ಕಿರುಕುಳ ಆರಂಭಿಸಿದ್ದಾರೆ.


ಅಹಿಂದ ನಾಯಕನೆಂದು ಹೆಸರಾಗಿರುವ ಸಿದ್ದರಾಮಯ್ಯ ನಾಯಕತ್ವದ ಕಾಂಗ್ರೆಸ್ ಸರ್ಕಾರ ಇದ್ದರೂ ಕೂಡ ತಮ್ಮ ಫ್ಯಾಸಿಸ್ಟ್ ನಡವಳಿಕೆಯನ್ನು ಬಹಿರಂಗವಾಗಿ ಪ್ರದರ್ಶಿಸಿದ್ದಾರೆಂದ ಮೇಲೆ ರಾಜ್ಯದಲ್ಲೂ ಬಿಜೆಪಿ ಸರ್ಕಾರವೇ ಇದ್ದಿದ್ದರೆ ಏನು ಕತೆ?

ತಮ್ಮ ಮನೆಯ ದೂರವಾಣಿಗೆ ಕರೆ ಮಾಡಿ ಅಸಭ್ಯವಾಗಿ ಮಾತಾಡುವ, ಬೆದರಿಕೆ ಒಡ್ಡಿದ್ದರ ಪರಿಣಾಮವಾಗಿ ಈ ಇಳಿ ವಯಸ್ಸಿನಲ್ಲಿ ಅನಂತಮೂರ್ತಿಯವರು ಎಂಥಾ ಮಾನಸಿಕ ಒತ್ತಡ ಅನುಭವಿಸುತ್ತಿರಬಹುದೆಂಬುದನ್ನು ಯಾರಾದರೂ ಊಹಿಸಬಹುದು. ಆದರೆ ಮೋದಿವಾದಿಗಳಿಗೆ ಇದರಿಂದ ವಿಕೃತ ಮೋಜು!

ಸದ್ಯಕ್ಕೆ ಸರ್ಕಾರ ಅನಂತಮೂರ್ತಿಯವರ ಮನೆಗೆ ಪೊಲೀಸ್ ರಕ್ಷಣೆ ನೀಡಿದೆ. "ನನಗೆ ಪ್ರಾಣ ಬೆದರಿಕೆ ಬಂದಿಲ್ಲ; ಆದರೆ ಮಾನ ಬೆದರಿಕೆ ಬಂದಿದೆ. ಹೆಚ್ಚಿನ ಬೆದರಿಕೆ ಬಂದಿರುವುದು ಬ್ರಾಹ್ಮಣರಿಂದ" ಎಂದು ಸ್ವತಃ ಅನಂತಮೂರ್ತಿಯವರೇ ವಿವರಣೆ ನೀಡಿದ್ದಾರೆ. ಫ್ಯಾಸಿಸಂನ ಬತ್ತಳಿಕೆಯಲ್ಲಿ ಮಾನಸಿಕ ಕಿರುಕುಳವೂ ಒಂದು ಪ್ರಮುಖ ಅಸ್ತ್ರವಾಗಿದೆ.

ಕಳಚಿಬಿದ್ದ ಸಮಾಜವಾದದ ಹಳೆಯ ಕೊಂಡಿ: ಡಾ. ಅಮ್ಮೆಂಬಳ ಬಾಳಪ್ಪ






ಮೊನ್ನೆ ನಮ್ಮನ್ನಗಲಿದ ಸ್ವಾತಂತ್ರ್ಯಸೇನಾನಿ ಡಾ. ಅಮ್ಮೆಂಬಳ ಬಾಳಪ್ಪ ಕರಾವಳಿ ಕರ್ನಾಟಕದ ಹಳೆ ತಲೆಮಾರಿನ ಸಮಾಜವಾದದ ಕೊನೆಯ ಕೊಂಡಿ. ಅವರ ವೈಯಕ್ತಿಕ ಬದುಕು, ಉಡುಗೆತೊಡುಗೆ, ಸರಳಜೀವನ, ಬ್ರಹ್ಮಚರ್ಯ, ಅವರು ಕೊನೆಯುಸಿರೆಳೆದ ಮನೆಯ ಹೆಸರು (ಅಹಿಂಸಾ) ಇವೆಲ್ಲವನ್ನು ನೋಡುವಾಗ ಅವರೋರ್ವ ಅಪ್ಪಟ ಗಾಂಧಿವಾದಿಯಂತೆ ಕಾಣುತ್ತಾರೆ. ಆದರೆ ಹೋರಾಟದ ಬದುಕು, ಹಿಂದುಳಿದ ವರ್ಗಗಳ ಏಳಿಗೆಗೆ ತುಡಿಯುತ್ತಿದ್ದ ಅವರ ಮನಸ್ಸು, ರೈತಾಪಿ ವರ್ಗದ, ಕಾರ್ಮಿಕ ವರ್ಗದ ಹಕ್ಕುಗಳಿಗಾಗಿ ಅವರು ಎತ್ತಿದ್ದ ಧ್ವನಿಯ ಪರಿ ಇವೆಲ್ಲವನ್ನು ನೋಡುವಾಗ ಅವರೋರ್ವ ಅಪ್ಪಟ ಸಮಾಜವಾದಿಯಂತೆ ಗೋಚರಿಸುತ್ತಾರೆ. ಬಾಳಪ್ಪರು ಸಮಾಜವಾದ ಮತ್ತು ಗಾಂಧಿವಾದ ಇವೆರಡರಿಂದಲೂ ಹೊರತಲ್ಲ, ಆದಾಗ್ಯೂ ಅವರನ್ನು ಓರ್ವ ಗಾಂಧಿ ಪ್ರಣೀತ ಸಮಾಜವಾದಿ ಎನ್ನುವುದೂ ಅಷ್ಟು ಸೂಕ್ತವೆನಿಸುವುದಿಲ್ಲ. ಅಮ್ಮೆಂಬಳ ಬಾಳಪ್ಪರ ಆರೋಗ್ಯದ ದಿನಗಳಲ್ಲಿ ಅವರೊಂದಿಗೆ ನಿಕಟಸಂಪರ್ಕವಿಟ್ಟಿದ್ದ ನನಗೆ ಅವರು "ಸಮಾಜವಾದ ಮತ್ತು ಗಾಂಧಿವಾದದ ಹದವಾದ ಮಿಶ್ರಣ"ದಂತೆ ಕಾಣುತ್ತಿದ್ದರು. ಬಾಳಪ್ಪ ತಮ್ಮ ಬದುಕಿನ ಕೊನೆಯ ಐದಾರು ವಸಂತಗಳನ್ನು ಹೊರತುಪಡಿಸಿ ಸದಾ ಜನರೊಂದಿಗೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬದುಕಿದ್ದರು. ಬಾಳಪ್ಪರಿಂದ ರಾಜಕೀಯ ದೀಕ್ಷೆ ಪಡೆದು ದೇಶ ಕಂಡ ಅಪ್ರತಿಮ ಕಾರ್ಮಿಕ ಹೋರಾಟಗಾರನಾಗಿ ಮೈದಾಳಿ ನಿಂತು ರಾಜಕೀಯ ಬದುಕಿನ ಇಳಿಸಂಜೆಯಲ್ಲಿ ಕೊಳಕು ರಾಜಕೀಯದ ಕೊಚ್ಚೆಗುಂಡಿಯಲ್ಲಿ ತನ್ನ ಕಾಲುಗಳನ್ನು ಹೊಳಿಸಿಕೊಂಡವರು ಜಾರ್ಜ್ ಫೆರ್ನಾಂಡಿಸ್. ತನ್ನ ಶಿಷ್ಯ ಜಾರ್ಜ್ ಫೆರ್ನಾಂಡಿಸರನ್ನು ಬಾಳಪ್ಪರು ಅತಿಯಾಗಿ ಪ್ರೀತಿಸುತ್ತಿದ್ದರೂ ಜಾರ್ಜ್ ಬಿಜೆಪಿಯೊಂದಿಗಿನ ಮೈತ್ರಿಯನ್ನು ಅವರು ಕಟುವಾಗಿ ಟೀಕಿಸುತ್ತಿದ್ದರು. ಜಾರ್ಜ್ ಈ ಆರೆಸ್ಸೆಸ್‌ಗಳೊಂದಿಗೆ ಕೈಜೋಡಿಸಿ ಅವನನ್ನು ಇಷ್ಟು ಕಾಲ ಪೊರೆದ ಸಮಾಜವಾದಿ ಸಿದ್ಧಾಂತಕ್ಕೆ ಎಳ್ಳು ನೀರು ಬಿಟ್ಟನಲ್ಲಾ ಎಂದು ಬಾಳಪ್ಪ ವಿಷಾದ ವ್ಯಕ್ತಪಡಿಸುತ್ತಿದ್ದರು.

ಜಾರ್ಜ್ ಕೇಂದ್ರದ ರಕ್ಷಣಾ ಸಚಿವರಾಗಿದ್ದಾಗ ತನ್ನ ಗುರುವಿಗೆ ಉನ್ನತ ಸ್ಥಾನಮಾನಗಳ ಆಮಿಷವೊಡ್ಡಿದ್ದರು. ಆದರೆ ತನ್ನ ಶಿಷ್ಯ ಸಂಘ ದೋಷದಿಂದ ಪಡೆದ ಅಧಿಕಾರದ ಗದ್ದುಗೆಯಲ್ಲಿ ಕೂತು ಅರ್ಪಿಸಲು ಮುಂದೆ ಬಂದ 'ಗುರುದಕ್ಷಿಣೆ'ಯನ್ನು ಬಾಳಪ್ಪ ಯಾವ ಮುಲಾಜು ಇಲ್ಲದೇ ತಿರಸ್ಕರಿಸಿದ್ದರು. ಜಾರ್ಜ್ ಫೆರ್ನಾಂಡಿಸ್‌ರ ಕೊನೆಗಾಲದ ಸಾರ್ವಜನಿಕ ಬದುಕಿನಲ್ಲಿ ನನಗೆ ಅವರು ಮತ್ತು ಬಾಳಪ್ಪ ನಡುವಿನ ಸಾಮ್ಯತೆ ಕಾಣುತ್ತಿದ್ದುದು ಇಸ್ತ್ರಿ ಹಾಕದ ಜುಬ್ಬಾ ಪೈಜಾಮು ಮತ್ತು ಸವೆದ ಚಪ್ಪಲಿಗಳಲ್ಲಿ ಮಾತ್ರ. ಸಮಾಜವಾದದೊಂದಿಗಿನ ಬಿಡಲಾಗದ ನಂಟಿನಿಂದಾಗಿ, ಸಮಾಜವಾದದ ನೂರು ತುಂಡುಗಳಲ್ಲೊಂದಾದ ಜಾತ್ಯತೀತ ಜನತಾದಳದೊಂದಿಗೆ ಬಾಳಪ್ಪ ತಮ್ಮನ್ನು ಗುರುತಿಸಿಕೊಂಡಿದ್ದರು. ಜನತಾದಳದ ಭೀಷ್ಮ ಪಿತಾಮಹ ಪ್ರತೀ ಚುನಾವಣೆಗಳ ಸಂದರ್ಭಗಳಲ್ಲಿ ಮಂಗಳೂರಿಗೆ ಬಂದಾಗೆಲ್ಲಾ ಬಾಳಪ್ಪರನ್ನು ಎಂ.ಎಲ್.ಸಿ. ಮಾಡುವ ಕುರಿತಂತೆ ಮಾತನಾಡುತ್ತಿದ್ದರು. ಬಡ ನಿಷ್ಠಾವಂತ ಸಮಾಜವಾದಿಗೆ ಎಂ.ಎಲ್.ಸಿ. ಸ್ಥಾನ ಕೊಟ್ಟರೆ ಅದರಿಂದ ಯಾವ ರಾಜಕೀಯ ಲಾಭವೂ ಸಿಗಲಾರದು ಎಂಬ ವಾಸ್ತವವನ್ನು ಅರಿತ ಚಾಣಕ್ಯ ರಾಜಕಾರಣಿಯಲ್ಲವೇ ದೇವೇಗೌಡರು?

ಬಾಳಪ್ಪರಿಗೆ ಅವರ ಅಭಿಮಾನಿಗಳು ಸಮರ್ಪಿಸಿದ ಅಭಿನಂದನಾ ಗ್ರಂಥದಲ್ಲಿ ದಿವಂಗತ ಕಾಮ್ರೇಡ್ ಬೇವಿಂಜೆ ವಿಷ್ಣು ಕಕ್ಕಿಲ್ಲಾಯರು ಬಾಳಪ್ಪರ ನಿರ್ಮೋಹೀ ಮನಸ್ಸಿನ ಕುರಿತಂತೆ, ತತ್ವಾದಿಷ್ಟಿತ ಬದುಕಿನ ಕುರಿತಂತೆ ಹೀಗೆ ಬರೆದಿದ್ದಾರೆ: "ಲಾಲ್‌ಕೃಷ್ಣ ಅಡ್ವಾಣಿಯವರು ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿದ್ದಾಗೊಮ್ಮೆ ಮಂಗಳೂರಿಗೆ ಬರುವ ಕಾರ್ಯಕ್ರಮವಿತ್ತು, ಅದರಲ್ಲಿ ಅವರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರನ್ನು ಸಮ್ಮಾನಿಸಿ ಗೌರವಿಸುವ ಯೋಜನೆ ಹಾಕಿ ಉಭಯ ಜಿಲ್ಲೆಯ ಎಲ್ಲಾ ಸ್ವಾತಂತ್ರ ಹೋರಾಟಗಾರರಿಗೆ ಆಹ್ವಾನ ನೀಡಿದ್ದರು. ಅಂದು ಅಡ್ವಾಣಿಯವರ ಕೈಯಿಂದ ಸನ್ಮಾನ ಸ್ವೀಕರಿಸದವರು ನಾನು ಮತ್ತು ಬಾಳಪ್ಪರು ಮಾತ್ರ. ಹೋರಾಟದ ಕಾಲದಲ್ಲಿ ನಮ್ಮೊಂದಿಗೆ ಇರದಿದ್ದವರು ಅಧಿಕಾರದ ಗದ್ದುಗೆ ಏರಿದ ಕೂಡಲೇ ನಮ್ಮಂಥವರ ಗೌರವಕ್ಕೆ ಪಾತ್ರರಾಗುತ್ತಾರೆಂಬ ಕಲ್ಪನೆ ನಮಗೆ ಒಪ್ಪಿಗೆಯಾಗಲಿಲ್ಲ. ನಾವು ನಮ್ಮ ಜನರ ನಡುವೆ ನಮ್ಮ ಸ್ವತಂತ್ರ ಆಲೋಚನೆಗಳು, ನಮ್ಮದೇ ಆದಂತಹ ಕನಸುಗಳು, ಕಾರ್ಮಿಕರ ಮತ್ತು ರೈತರ ಹಿತಾಸಕ್ತಿಗಳಲ್ಲಿ ದೃಢವಾದ ನಿಷ್ಠೆ ಮುಂತಾದವುಗಳನ್ನು ಹೊಂದಿಕೊಂಡು ಕೊನೆಯುಸಿರಿನವರೆಗೆ ರಾಜಿರಹಿತವಾಗಿ ಬದುಕಲು ಉದ್ದೇಶಿಸಿದ್ದೆವು."

ಬಾಳಪ್ಪ ಅಪ್ಪಟ ದೇಶಭಕ್ತರಾಗಿದ್ದರೂ ಅವರು ಈಗಿನ ಸ್ವಘೋಷಿತ ದೇಶಭಕ್ತರಂತೆ ಭಾರತ ಎಂಬ ಭೌಗೋಳಿಕ ಪ್ರದೇಶವನ್ನು ಪ್ರೀತಿಸುವುದಕ್ಕೆ ತಮ್ಮ ದೇಶಪ್ರೇಮವನ್ನು ಸೀಮಿತಗೊಳಿಸಿದವರಲ್ಲ, ಸ್ವತಃ ಅವರೇ ಒಮ್ಮೆ ನನ್ನಲ್ಲಿ ಹೀಗಂದಿದ್ದರು: "ಈ ಬಲಪಂಥೀಯರ ದೇಶಪ್ರೇಮವು ಆಸ್ತಿಯ ಮೇಲಿನ ಮೋಹದಂತಿದೆ."

ಸ್ವಾತಂತ್ರ್ಯಪೂರ್ವದಲ್ಲಿ ಹುಸಿ ದೇಶಭಕ್ತರ ಆರೆಸ್ಸೆಸ್ಸಿಗೆ



ಪರ್ಯಾಯವಾಗಿ ಒಂದೊಮ್ಮೆ ಅಸ್ತಿತ್ವದಲ್ಲಿದ್ದ ರಾಷ್ಟ್ರ ಸೇವಾದಳದ ಜಿಲ್ಲೆಯ ಮುಂಚೂಣಿಯ ನಾಯಕರಾಗಿ ಬಾಳಪ್ಪ ಕರ್ತವ್ಯ ನಿರ್ವಹಿಸಿದ್ದರು. ಆರೆಸ್ಸೆಸ್ಸಿನ ಖಾಕಿ ಚೆಡ್ಡಿಗೆ ಪರ್ಯಾಯವಾಗಿ ಖಾದಿ ನೀಲಿ ಚೆಡ್ಡಿ, ಬಿಳಿ ಅಂಗಿ ಮತ್ತು ಆರೆಸ್ಸೆಸ್ಸಿನ ಕರಿ ಟೋಪಿಗೆ ಬದಲಾಗಿ ಖಾದಿ ಟೋಪಿ ಧರಿಸಿ ರಾಷ್ಟ್ರ ಸೇವಾ ದಳದ ಕಾರ್ಯಕರ್ತರು ಕವಾಯತು ನಡೆಸುತ್ತಿದ್ದರು. ಅದಕ್ಕೆಲ್ಲಾ ನೇತೃತ್ವ ನೀಡುತ್ತಿದ್ದವರು ಬಾಳಪ್ಪನವರು. ಆರೆಸ್ಸೆಸ್‌ನ ಬೌದ್ಧಿಕ್ ಶಿಬಿರಗಳಲ್ಲಿ ಮೂಲಭೂತವಾದವನ್ನು ಬೋಧಿಸಲಾಗುತ್ತಿದ್ದರೆ ರಾಷ್ಟ್ರ ಸೇವಾದಳದ ಬುದ್ಧಿದಾನ ಶಿಬಿರಗಳಲ್ಲಿ ಸಹಬಾಳ್ವೆ ಮತ್ತು ಜನಸೇವೆಗಳನ್ನು ಬೋಧಿಸಲಾಗುತ್ತಿತ್ತು. ಆರೆಸ್ಸೆಸ್ಸಿನ ಶಿಬಿರಗಳಲ್ಲಿ ಭಗವಾಧ್ವಜಗಳು ಹಾರುತ್ತಿದ್ದರೆ ರಾಷ್ಟ್ರ ಸೇವಾದಳದ ಶಿಬಿರಗಳಲ್ಲಿ ತ್ರಿವರ್ಣ ಧ್ವಜ ಹಾರುತ್ತಿತ್ತು.

ಆರೆಸ್ಸೆಸ್ಸಿನ ಶಿಬಿರಗಳಿಗೆ ನಮಸ್ತೇ ಸದಾ ವತ್ಸಲೇ ಧ್ಯೇಯಗೀತೆಯಾಗಿದ್ದರೆ ರಾಷ್ಟ್ರ ಸೇವಾದಳ ಶಿಬಿರಗಳಿಗೆ "ಝುಂಡಾ ಊಂಚಾ ರಹೇ ಹಮಾರ, ವಿಜಯೀ, ವಿಶ್ವ ತಿರಂಗಾ ಪ್ಯಾರಾ" ಧ್ಯೇಯಗೀತೆಯಾಗಿತ್ತು. ರಾಷ್ಟ್ರ ಸೇವಾದಳದಲ್ಲಿ ಬಾಳಪ್ಪರು ಎಷ್ಟೊಂದು ಸಕ್ರಿಯರಾಗಿ ದುಡಿದಿದ್ದರೆಂದರೆ ಸೂರ್ಯೋದಯಕ್ಕೆ ಮುನ್ನವೇ ಧ್ವಜ ಕಂಬವನ್ನು ಹೆಗಲ ಮೇಲೆ ಎತ್ತಿಕೊಂಡು ಶಿಬಿರ ಕೇಂದ್ರಗಳಿಗೆ ತೆರಳುತ್ತಿದ್ದರು. ತನ್ನ ಸಂಗಾತಿಗಳನ್ನು ಕರೆದುಕೊಂಡು ಹೋಗಿ ಹಳ್ಳಿಹಳ್ಳಿಗಳಲ್ಲಿ ನಿಯಮಿತವಾಗಿ ಶ್ರಮದಾನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು.

ಬಾಳಪ್ಪರು ಸ್ವಾತಂತ್ರ್ಯ ಹೋರಾಟದ ಕಣಕ್ಕೆ ಧುಮುಕಲು ಪ್ರೇರಣೆ ನೀಡಿದ ಘಟನೆ ವಿಶಿಷ್ಟವಾದುದು. ಅದನ್ನವರು ಯಾವುದೇ ರೀತಿಯಲ್ಲಿ ಆತ್ಮವಂಚನೆಯೆಸಗದೇ ಹೇಳುತ್ತಿದ್ದರು.

ಕಡುಬಡ ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ಬಾಳಪ್ಪರು ಮನೆಯ ಆರ್ಥಿಕ ಸಂಕಷ್ಟಗಳಿಂದಾಗಿ ನಾಲ್ಕನೇ ಇಯತ್ತೆಗೆ ಶಾಲೆ ತೊರೆಯಬೇಕಾಗಿ ಬಂತು. ಹಾಗೆ ಶಾಲೆ ತೊರೆದವರು ಮಂಗಳೂರಿನ ಹೋಟೆಲೊಂದರಲ್ಲಿ ಮಾಣಿಯಾಗಿ ಕೆಲಸಕ್ಕೆ ಸೇರಿದರು. ಅತೀವ ಜ್ಞಾನದಾಹಿಯಾಗಿದ್ದ ಬಾಳಪ್ಪರು ಹೋಟೆಲ್ ಮಾಣಿಯಾಗಿದ್ದೂ ಪತ್ರಿಕೆಗಳನ್ನು ಖರೀದಿಸಿ ಓದುತ್ತಿದ್ದರು. ಕರಾಚಿಯಲ್ಲಿ ನಡೆದ ಕಾಂಗ್ರೆಸ್‌ನ ಅಧಿವೇಶನವೊಂದರಲ್ಲಿ ಪಂಡಿತ್ ಜವಾಹರ್‌ಲಾಲ್ ನೆಹರೂ ಒಂದು ಘೋಷಣೆ ಮಾಡಿದರು: "ದೇಶಕ್ಕೆ ಸ್ವಾತಂತ್ರ್ಯ ದಕ್ಕಿದರೆ ಉಳುವ ಕೈಗಳಿಗೇ ಭೂಮಿಯ ಒಡೆತನ ನೀಡಲಾಗುವುದು." ಇದನ್ನು ಪತ್ರಿಕೆಯಲ್ಲಿ ಓದಿ ಬಾಳಪ್ಪ ಅತೀವ ಸಂತಸಗೊಂಡಿದ್ದರು. ಭೂಮಾಲೀಕನಿಗೆ ಗೇಣಿ ನೀಡುವ ರೈತನು ಉಣ್ಣಲು ಒಂದು ತುತ್ತು ಅನ್ನವಿಲ್ಲದೇ ಪರದಾಡುವ ಅನೇಕ ಸಂದರ್ಭಗಳನ್ನು ಬಾಳಪ್ಪ ಎಳೆವಯಸ್ಸಿನಲ್ಲೇ ಕಂಡಿದ್ದರು. ಬಾಳಪ್ಪರು ಸ್ವತಃ ಹುಟ್ಟಿ ಬೆಳೆದದ್ದು ಅಂತಹದ್ದೇ ಕುಟುಂಬವೊಂದರಲ್ಲಾಗಿತ್ತು. ಸ್ವಾತಂತ್ರ್ಯ ಬಂದರೆ ನಮ್ಮಂತವರಿಗೆ ಒಳ್ಳೆಯದಾಗುತ್ತದೆ ಎಂದು ಬಾಳಪ್ಪ ಸ್ವಾತಂತ್ರ್ಯ ಸಂಗ್ರಾಮದ ಕಣಕ್ಕೆ ಧುಮುಕಿ ಭೂಗತ ಹೋರಾಟಗಳಲ್ಲಿ ಸಕ್ರಿಯರಾದರು.

1942ರ ಆಗಸ್ಟ್‌ನಲ್ಲಿ ಕ್ವಿಟ್ ಇಂಡಿಯಾ ಚಳವಳಿಯು ಮುಂಬೈನಲ್ಲಿ ತೀವ್ರಗೊಂಡಿತು. ಗಾಂಧೀಜಿ ಮತ್ತಿತರ ರಾಷ್ಟ್ರ ನಾಯಕರ ಬಂಧನದ ಸುದ್ದಿ ಕಾಳ್ಗಿಚ್ಚಿನಂತೆ ಹರಡಿ ದೇಶದಾದ್ಯಂತ ಹೋರಾಟಗಾರರು ಆಕ್ರೋಶಗೊಂಡು ಬೀದಿಗಿಳಿದರು. 1942ರ ಸೆಪ್ಟೆಂಬರ್ 9 ರಂದು ಮಂಗಳೂರಿನ ಹೋರಾಟಗಾರರು ಎಂ.ಡಿ.ಅಧಿಕಾರಿಯವರ ನೇತೃತ್ವದಲ್ಲಿ ಬೀದಿಗಿಳಿದರು. ಮಂಗಳೂರು ಕೋರ್ಟ್ ಬಳಿ ಪಿಕೆಟಿಂಗ್ ನಡೆಸುತ್ತಿದ್ದ 50 ಮಂದಿಯನ್ನು ಪೊಲೀಸರು ಬಂಧಿಸಿದರು. ಅಧಿಕಾರಿಯವರ ನೇತೃತ್ವದಲ್ಲಿ ಸುಮಾರು 5,000 ಜನ ಸೆಂಟ್ರಲ್ ಮೈದಾನದಲ್ಲಿ (ನೆಹರೂ ಮೈದಾನ) ಸೇರಿ ಸಾರ್ವಜನಿಕ ಸಭೆ ನಡೆಸಿದರು. ಅಧಿಕಾರಿಯವರು ಭಾಷಣ ಮಾಡುತ್ತಿದ್ದಾಗ ವೇದಿಕೆಯೇರಿದ ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಅಧಿಕಾರಿಯವರ ತಲೆ ಒಡೆದು ರಕ್ತ ಸುರಿಯ ತೊಡಗಿದ್ದರಿಂದ ಕಾರ್ಯಕರ್ತರು ಮತ್ತಷ್ಟು ಆಕ್ರೋಶಿತಗೊಂಡು ತೀವ್ರ ಪ್ರತಿರೋಧ ತೋರಿದರು. ಪೈಲ್ವಾನ್ ಲೋಕಯ್ಯ ಶೆಟ್ಟರು ಅಧಿಕಾರಿಯವರನ್ನು ಹೆಗಲ ಮೇಲೆ ಹೊತ್ತುಕೊಂಡೇ ಕಾರ್‌ಸ್ಟ್ರೀಟ್‌ನಲ್ಲಿದ್ದ ಉಳ್ಳಾಲ ಶ್ರೀನಿವಾಸ ಮಲ್ಯರ ಸಹೋದರ ಡಾ. ಯು.ಪಿ. ಮಲ್ಯರ ರಾಮಕೃಷ್ಣ ಆಸ್ಪತ್ರೆಗೆ ಕೊಂಡೊಯ್ದರು. ಆಗ ಬಾಳಪ್ಪ ಸಹಿತ ಅನೇಕರ ಬಂಧನವಾಯಿತು. ಒಂದು ತಿಂಗಳ ಕಾಲ ಜೈಲಿನಲ್ಲಿದ್ದು ಬಿಡುಗಡೆಗೊಂಡರು. ಜೈಲುವಾಸ ಬಾಳಪ್ಪರಲ್ಲಿ ಹೋರಾಟದ ಕಿಚ್ಚನ್ನು ಇಮ್ಮಡಿಗೊಳಿಸಿತು. ಬ್ರಿಟಿಷರ ವಿರುದ್ಧ ಅಲ್ಲಲ್ಲಿ ಯುವಕರನ್ನು ಸೇರಿಸಿ ಘೋಷಣೆ ಕೂಗುವುದು, ಪೊಲೀಸರ ಲಾಠಿ ಏಟು ತಿನ್ನುವುದು ಮಾಮೂಲಿಯಾಗಿಬಿಟ್ಟಿತು.

ಒಮ್ಮೆ ಬಾಳಪ್ಪರು ಕೆಲವು ಯುವಕರನ್ನು ಸೇರಿಸಿ ಉಳ್ಳಾಲ ರೈಲ್ವೆ ಸೇತುವೆಯನ್ನು ಸ್ಫೋಟಿಸುವ ಸಂಚು ರೂಪಿಸಿದರು. ಯೋಜನೆಯಂತೆ ರಾತ್ರಿ ಹೊತ್ತು ದೋಣಿಯಲ್ಲಿ ಹೋಗಿ ಸೇತುವೆಯ ಕಂಬಕ್ಕೆ ಡೈನಮೈಟ್ ಇಡಲು ತೂತು ಕೊರೆಯುತ್ತಿದ್ದರು. ತೂತು ಕೊರೆಯುವ ಶಬ್ದ ಕೇಳಿಸದಿರಲು ಅಲ್ಲೇ ದೋಣಿ ದುರಸ್ತಿ ಮಾಡುವಂತೆ ದೋಣಿಗೆ ಜೋರಾಗಿ ಬಡಿಯುತ್ತಿದ್ದರು. ಒಂದು ರಾತ್ರಿಯಲ್ಲಿ ಸೇತುವೆಯ ಕಂಬಕ್ಕೆ ತೂತು ಕೊರೆಯುವ ಕೆಲಸ ಮುಗಿಸಿ ಖುಷಿಯಿಂದ ಬಾಳಪ್ಪ ಮತ್ತು ಸಂಗಡಿಗರು ಹಿಂದಿರುಗಿದರು. ಮರುದಿನ ರಾತ್ರಿ ಬಾಳಪ್ಪರ ನೇತೃತ್ವದ ತಂಡ ಡೈನಮೈಟ್‌ನೊಂದಿಗೆ ದೋಣಿಯಲ್ಲಿ ಹೋಗುತ್ತಿದ್ದಾಗ ಸೇತುವೆಯ ಮೇಲೆ ಸಶಸ್ತ್ರ ಪೊಲೀಸರು ಕಾವಲು ಕಾಯುತ್ತಿದ್ದುದರಿಂದ ಸೇತುವೆ ಸ್ಫೋಟದ ಸಂಚು ವಿಫಲಗೊಂಡಿತು.

ಆ ಬಳಿಕ ಬಾಳಪ್ಪ ಲೋಕಯ್ಯ ಶೆಟ್ಟಿ ಮುಂತಾದವರು ಮಂಗಳೂರು ಕೋರ್ಟಿಗೆ ಬೆಂಕಿ ಹಚ್ಚುವ ಯೋಜನೆ ಹಾಕಿದರು. 1942ರ ಡಿಸೆಂಬರ್ 4ರ ಮಧ್ಯರಾತ್ರಿ ಕೋರ್ಟ್ ಬಳಿಗೆ ಸೀಮೆಎಣ್ಣೆ ತುಂಬಿದ ಕ್ಯಾನ್‌ಗಳು, ಬೆಂಕಿ ಹೊತ್ತಿಸಲು ಚಿಂದಿ ಬಟ್ಟೆಗಳೊಂದಿಗೆ ಬಾಳಪ್ಪ, ಲೋಕಯ್ಯ ಶೆಟ್ಟಿ ಮುಂತಾದವರು ಹೋದರು. ಕುಳ್ಳಗಿನ ಮತ್ತು ಪೀಚಲು ಶರೀರದ ಬಾಳಪ್ಪರು ಪೈಲ್ವಾನ್ ಲೋಕಯ್ಯ ಶೆಟ್ಟರ ಹೆಗಲ ಮೇಲೇರಿ ನಿಂತು ಕೋರ್ಟಿನ ಆರು ಪಕ್ಕಾಸುಗಳಿಗೆ ಬೆಂಕಿ ಹಚ್ಚಿ ಅಲ್ಲಿಂದ ಪರಾರಿಯಾದರು. ಪೊಲೀಸರಿಗೆ ಬಾಳಪ್ಪ ಮತ್ತು ಲೋಕಯ್ಯ ಶೆಟ್ಟಿಯೇ ಪ್ರಕರಣದ ರೂವಾರಿಗಳೆಂಬ ಸುದ್ದಿ ತಿಳಿಯಿತು. ಡಿಸೆಂಬರ್ 5 ರಂದು ಬಾಳಪ್ಪರು ತನ್ನ ಬಾಡಿಗೆ ಕೊಠಡಿಯಿಂದ ಹೊರಬರಲಿಲ್ಲ, ಡಿಸೆಂಬರ್ 6 ರಂದು ಕೊಡಿಯಾಲ್‌ಬೈಲ್ ಬಳಿ ಸೈಕಲ್‌ನಲ್ಲಿ ಹೋಗುತ್ತಿದ್ದ ಬಾಳಪ್ಪರನ್ನು ಪೊಲೀಸರು ಬಂಧಿಸಿದರು. ಪೊಲೀಸರು ಅವರನ್ನು ಕ್ರೂರವಾಗಿ ಹಿಂಸಿಸಿದರು. ಈ ಬಾರಿ ಗುರುತರವಾದ ಆಪಾದನೆಗಳೊಂದಿಗೆ ಬಾಳಪ್ಪರು ತಮಿಳುನಾಡಿನ ವೆಲ್ಲೂರು ಜೈಲು ಸೇರಿದರು. ಆಗ ಬಾಳಪ್ಪರಿಗೆ 20 ರ ನವತಾರುಣ್ಯ. ಅಂದು ಜೈಲು ಸೇರಿದವರು ಮತ್ತೆ ಬಿಡುಗಡೆಗೊಂಡಿದ್ದು 1944ರ ಫೆಬ್ರವರಿ ತಿಂಗಳಲ್ಲಾಗಿತ್ತು. ಜೈಲಿನ ಬದುಕು ಬಾಳಪ್ಪರ ಬದುಕನ್ನೇ ಬದಲಿಸಿತು. ಜೈಲಿನಲ್ಲಿ ಬಾಳಪ್ಪರು ಬಹಳಷ್ಟು ಸಮಾಜವಾದಿ ಸಾಹಿತ್ಯವನ್ನು ಮತ್ತು ಕಾರ್ಲ್‌ಮಾರ್ಕ್ಸ್‌ನ ಬರಹಗಳನ್ನು ಅಭ್ಯಸಿಸಿದರು. ಜೈಲಿನಲ್ಲಿ ಕುಳಿತು ಇಂಗ್ಲಿಷ್ ಮತ್ತು ಉರ್ದು ಭಾಷೆ ಕಲಿತರು. ಜೈಲಿನಿಂದ ಬಿಡುಗಡೆಯಾಗಿ ಬರುವಾಗ ಬಾಳಪ್ಪ ಸೈದ್ಧಾಂತಿಕವಾಗಿ ಬಲಿಷ್ಠಗೊಂಡಿದ್ದರು.

ಜೈಲಿನಿಂದ ಬಿಡುಗಡೆಗೊಂಡು ಬಂದವರು ಮಂಗಳೂರು ಹಂಪನ್‌ಕಟ್ಟೆಯಲ್ಲಿದ್ದ ಕೆನರಾ ಮೆಡಿಕಲ್ಸ್‌ನಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸಕ್ಕೆ ಸೇರಿದರು. ಹಗಲು ಹೊತ್ತು ಹೊಟ್ಟೆಪಾಡಿನ ಕೆಲಸ ರಾತ್ರಿ ಹೊತ್ತು ಭೂಗತ ಚಟುವಟಿಕೆಗಳು, ವಿಧ್ವಂಸಕ ಕೃತ್ಯಗಳು ಬಾಳಪ್ಪರ ಬದುಕಿನ ದಿನಚರಿಯಾಯಿತು. ಅನೇಕ ವರ್ಷಗಳ ಕಾಲ ಔಷಧಾಲಯ, ಆಯುರ್ವೇದಿಕ್ ಕ್ಲಿನಿಕ್, ಫಾರ್ಮಸಿಗಳಲ್ಲಿ ದುಡಿದ ಬಾಳಪ್ಪರು ಆ ಕಾಲದಲ್ಲಿ ಅನುಭವದ ಆಧಾರದಲ್ಲಿ ವೈದ್ಯ ವೃತ್ತಿ ನಿರ್ವಹಿಸಲು ಪಡೆಯುತ್ತಿದ್ದ "Registered Medical Practitioner" ಲೈಸೆನ್ಸನ್ನು 1968ರಲ್ಲಿ ಪಡೆದು ಡಾ. ಅಮ್ಮೆಂಬಳ ಬಾಳಪ್ಪರಾದರು.

ಮಹಾತ್ಮ ಗಾಂಧಿ, ರಾಜಗೋಪಾಲಾಚಾರಿ ದೇಶದಾದ್ಯಂತ ಹಿಂದಿ ಭಾಷಾ ಚಳವಳಿಯನ್ನು ಹುಟ್ಟು ಹಾಕಿದ್ದರು. ಆಗಲೇ ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭಾ ಹುಟ್ಟಿಕೊಂಡಿತ್ತು. ಅದರಿಂದ ಪ್ರಭಾವಿತರಾದ ಎಂ.ಡಿ. ಅಧಿಕಾರಿಗಳು ತಮ್ಮ ಹುಟ್ಟೂರು ಕಾರ್ಕಳದ ಹೆಬ್ರಿ ಬಳಿಯ ಮುದ್ರಾಡಿಯಲ್ಲಿ ಕಸ್ತೂರ್ಬಾ ಗಾಂಧಿ ಸ್ಮಾರಕ ಪ್ರಾಥಮಿಕ ಶಾಲೆ ಪ್ರಾರಂಭಿಸಿದ್ದರು. ಹಿಂದಿ ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವವಿದ್ದ ತಮ್ಮ ಒಡನಾಡಿ ಬಾಳಪ್ಪರನ್ನು ಅಧಿಕಾರಿಯವರು ತಮ್ಮ ಶಾಲೆಗೆ ಹಿಂದಿ ಅಧ್ಯಾಪಕರಾಗಿ ಬರುವಂತೆ ಒತ್ತಾಯಿಸಿದ್ದ ಪರಿಣಾಮ ಕೆಲಕಾಲ ಬಾಳಪ್ಪ ಅಧ್ಯಾಪಕರಾಗಿಯೂ ವೃತ್ತಿ ನಿರ್ವಹಿಸಿದ್ದರು. ಮುದ್ರಾಡಿಯ ತಮ್ಮ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಸಾರ್ವಜನಿಕರಿಗೆ ಜಾತಿಪದ್ಧತಿ, ಅಸ್ಪೃಶ್ಯತೆ, ಕೋಮುವಾದ, ಆರ್ಥಿಕ ಅಸಮಾನತೆ ಮುಂತಾದವುಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಬಾಳಪ್ಪರು ಮಾಡಿದ್ದರು.

ಬಾಳಪ್ಪರು ತಮ್ಮ ಸಮಾಜವಾದಿ ಸಿದ್ಧಾಂತದ ಪ್ರಚಾರ, ಚಳವಳಿಯ ಕುರಿತಂತೆ ಜನರಲ್ಲಿ ಜಾಗೃತಿ, ರೈತರ ಕಾರ್ಮಿಕರ ನೋವುಗಳಿಗೆ ಧ್ವನಿ ನೀಡುವ ಸಲುವಾಗಿ ಕೆಲಕಾಲ 'ವಿ... ಎಂಬ ಕನ್ನಡ ವಾರಪತ್ರಿಕೆಯನ್ನು ನಡೆಸಿದ್ದರು. ತುಳು... ಮಗೆ (ತುಳುವಮ್ಮನ ಮಗ) ಬಾಳಪ್ಪ ತುಳು ಭಾಷೆ ಬಗ್ಗೆ ವಿಶೇಷ ಮಮಕಾರವನ್ನು ಹೊಂದಿದ್ದರು. 7

...ದಲ್ಲಿ ಆ ಕಾಲಕ್ಕೆ ಒಂದು ಹೊಸ ಪರಿಕಲ್ಪನೆಯಾದ ...ು ಮಾಸಿಕ 'ತುಳು ಸಿರಿ'ಯನ್ನು ಸ್ಥಾಪಿಸಿದ್ದರು.

ಹಿಂದುಳಿದ ವರ್ಗಗಳ ಏಳಿಗೆಯ ಬಗ್ಗೆ ಅಪಾರ ...ವೆ ಹೊಂದಿದ್ದ ಬಾಳಪ್ಪರು ಮಂಡಲ್ ಆಯೋಗದ ...ಯನ್ನು ಜಾರಿಗೆ ತರುವಂತೆ ಒತ್ತಾಯಿಸಿ ಧ್ವನಿಯೆತ್ತಿದ ...ಗಳೂರಿನ ಮೊದಲಿಗರಲ್ಲಿ ಒಬ್ಬರಾಗಿದ್ದರು. ರಾಮಕೃಷ್ಣ ...ತೆ ಸರಕಾರ ವೆಂಕಟಸ್ವಾಮಿಯವರ ನೇತೃತ್ವದಲ್ಲಿ ಸ್ಥಾಪಿಸಿದ್ದ ...ದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ...ಪರಿಯದೆ ಬಾಳಪ್ಪ ದುಡಿದಿದ್ದರು. ಅದಕ್ಕಾಗಿ ...ದ್ಯಂತ ಸಂಚರಿಸಿ ಹಿಂದುಳಿದ ವರ್ಗಗಳ ಸಾಮಾಜಿಕ, ...ಣಿಕ, ಆರ್ಥಿಕ ಸ್ಥಿತಿಗಳನ್ನು ಅಭ್ಯಸಿಸಿದ್ದರು. 1983 ...ದ ಪ್ರಾರಂಭಿಸಿ 1986 ರವರೆಗೆ ವೆಂಕಟಸ್ವಾಮಿ ...ೋಗವು ಮೂರು ಸಂಪುಟಗಳ 1022 ಪುಟಗಳ ...ದಿಯನ್ನು ಸರಕಾರಕ್ಕೆ ಸಲ್ಲಿಸಿತ್ತು. ಸದ್ರಿ ವರದಿ ...ಪಾರಿಕೆಯಲ್ಲಿ ಬಾಳಪ್ಪರ ಪಾತ್ರ ಅನನ್ಯವಾಗಿತ್ತು.

ಈಗಾಗಲೇ ಉಲ್ಲೇಖಿಸಿದಂತೆ ಬಾಳಪ್ಪರು ಸ್ವಾತಂತ್ರ್ಯ ...ಾಮದ ಕಣಕ್ಕೆ ಧುಮುಕಲು ಮುಖ್ಯ ಪ್ರೇರಣೆ ಉಳುವ ...ಗೆ ಭೂಮಿಯ ಒಡೆತನ ನೀಡುವ ನೆಹರೂರವರ ...ಗಾಮಿ ಯೋಚನೆ. 'ಉಳುವವನೇ ಹೊಲದೊಡೆಯ' ...ನು ಸ್ವಾತಂತ್ರ್ಯಪ್ರಾಪ್ತಿಯಾಗಿ ಎರಡು ದಶಕಗಳ ಬಳಿಕವೇ ...ಗೆ ಬಂತು. ಆಗ ಅತ್ಯಂತ ಆನಂದತುಂದಿಲರಾದ ...ಪ್ಪರು ಹಳ್ಳಿಹಳ್ಳಿಗಳಿಗೆ ತೆರಳಿ ಗೇಣಿದಾರ ರೈತರನ್ನು ...ದೆಬ್ಬಿಸಿ ಡಿಕ್ಲರೇಶನ್‌ಗೆ ಅರ್ಜಿ ಕೊಡುವಂತೆ ...ೇದಿಸಿದ್ದರು. ಇದರಿಂದಾಗಿ ಅವರು ಅನೇಕ ಶ್ರೀಮಂತ ...ಮಾಲೀಕರ ವಿರೋಧ ಕಟ್ಟಿಕೊಳ್ಳಬೇಕಾಗಿ ಬಂದಿತ್ತು. ...ಸ್ವಾಳ ತಾಲೂಕು ಭೂನ್ಯಾಯ ಮಂಡಳಿಯ ಸದಸ್ಯರಾಗಿ ...ಪ್ಪರು ಮಾಡಿದ ಕೆಲಸ ಅನುಪಮವಾದುದು. ಮಧ್ಯ ...ಯವರೆಗೆ ಪಂಚಾಯತಿ ಕಚೇರಿಗಳಲ್ಲಿ, ಮನೆಯಲ್ಲಿ ...ು ಬಾಳಪ್ಪರು ಗೇಣಿದಾರ ರೈತರ ಅರ್ಜಿಯನ್ನು ...ಮ ಕೊಡುತ್ತಿದ್ದರು. ಅನೇಕ ದಲಿತ ಗೇಣಿದಾರರನ್ನು ...ಮನೆಗೆ ಕರೆಸಿ ಅವರಿಗೆ ಅರ್ಜಿ ಬರೆದು ಕೊಡುವಂತಹ ...ವನ್ನು ಸ್ವಇಚ್ಛೆಯಿಂದ ಬಾಳಪ್ಪರು ಮಾಡುತ್ತಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭೂ ಒಕ್ಕಲುದಾರರು ...ತ್ತು ಭೂಮಾಲೀಕರ ನಡುವೆ ಆಗಾಗ ಘರ್ಷಣೆ ...ಯುತ್ತಿತ್ತು. ಕಮ್ಯೂನಿಸ್ಟರು ಮತ್ತು ಸಮಾಜವಾದಿಗಳು ...ದಾರ ರೈತರ ಪರವಾಗಿ ಹೋರಾಟ ನಡೆಸುತ್ತಿದ್ದರು. ...ಸಂದರ್ಭದಲ್ಲಿ ಕಮ್ಯೂನಿಸ್ಟ್ ಮತ್ತು ಸಮಾಜವಾದಿ ...ೇರಾಟಗಾರರನ್ನು ಹತ್ತಿಕ್ಕಲು ಭೂಮಾಲೀಕರು ...ಡಾಗಳನ್ನು ಸಾಕುತ್ತಿದ್ದರು.

...ಮಂಗಳೂರು ತಾಲೂಕಿನ ನೀರುಮಾರ್ಗದಲ್ಲಿ ...ಮಾಲಿಕರು ಮತ್ತು ಗೇಣಿದಾರರ ಮಧ್ಯೆ ಆಗಾಗ ...ರ್ಷ ನಡೆಯುತ್ತಿತ್ತು. ಭೂಮಾಲೀಕರ ದಬ್ಬಾಳಿಕೆಯ ...ದ್ಧ ಹೋರಾಡಲು ಭೂರಹಿತ ರೈತರು ...ಟಿತರಾಗಬೇಕೆಂದು ಬಾಳಪ್ಪರು ಆಗಾಗ ಕರೆ ...ುತ್ತಿದ್ದರು. ಒಮ್ಮೆ ಭೂರಹಿತರ ರೈತರ ಸಭೆಯಲ್ಲಿ ...ಪ್ಪರು ಭಾಷಣ ಮಾಡುತ್ತಿದ್ದಾಗ ಭೂಮಾಲಿಕರಿಂದ ...ೇಜಿತರಾದ ಗೂಂಡಾಗಳು ಬಾಳಪ್ಪರ ಮೇಲೆರಗಿ ... ಹಲ್ಲೆ ಮಾಡಿದರು. ಆಗ ಬಾಳಪ್ಪರ ತಲೆಗೆ ಏಟು ...ು ರಕ್ತಸ್ರಾವವಾಗಿತ್ತು. ಬಾಳಪ್ಪರ ಆಪ್ತ ಸಂಗಾತಿ ಐತಪ್ಪ ...ಲ್ಯಾನ್ ಮತ್ತಿತರರು ಗೂಂಡಾಗಳ ಕೈಯಿಂದ ಬಾಳಪ್ಪರನ್ನು ...ದರು. ಐತಪ್ಪ ಸಾಲ್ಯಾನ್ ಬಾಳಪ್ಪರ ತಲೆಗೆ ಹೊಡೆದು ...ಡಾನೊಂದಿಗೆ ಹೊಡೆದಾಡಿ ಆತನ ಕೈಯ ಹೆಬ್ಬೆರಳನ್ನು ...ದು ಹಾಕಿದರು. ವಿಷಯ ತಿಳಿದ ಬಾಳಪ್ಪರ ...ಯಾಯಿಗಳಾಗಿದ್ದ ಬೋಳೂರಿನ ಮೊಗವೀರ ...ವಕರು ಆಕ್ರೋಶಿತರಾಗಿ ಮರುದಿನ ನೀರುಮಾರ್ಗಕ್ಕೆ ...ಲು ಲಾರಿಯೊಂದನ್ನು ಗೊತ್ತುಪಡಿಸಿದರು. ಅಪ್ಪಟ ...ಸಾವಾದಿ ಬಾಳಪ್ಪರಿಗೆ ವಿಷಯ ತಿಳಿಯಿತು. ಬಾಳಪ್ಪರು ...ವಕರು ಹಿಂಸಾಚಾರಕ್ಕಿಳಿಯದಂತೆ ತಡೆದರು. ಆದರೆ ...ೆ ಸಾಲ್ಯಾನ್ ಬಾಳಪ್ಪರಿಗೆ ತಿಳಿಯದಂತೆ ಗುಂಪು ...ಹೋಗಿ ಪ್ರತೀಕಾರ ತೀರಿಸಿಯೇ ಬಿಟ್ಟರು.

...ಮಂಗಳೂರಿನಲ್ಲಿ ಹೋಟೆಲ್ ನೌಕರರ ಪರ ...ರಾಟಗಳಲ್ಲಿ ಭಾಗಿಯಾದಾಗಲು ಬಾಳಪ್ಪರ ಮೇಲೆ ...ಕರ ಪರ ಗೂಂಡಾಗಳು ಹಲ್ಲೆ ಮಾಡಿದ್ದರು. ಕಾರ್ಮಿಕರ ...ವಿನ ಶೋಷಣೆಯನ್ನು ಎಂದೆಂದೂ ಸಹಿಸದ ಬಾಳಪ್ಪ ...ಪಂತರ ಗೂಂಡಾಗಳಿಂದ ಅನೇಕ ಬಾರಿ ...ೊಳಗಾದರೂ ಕಾರ್ಮಿಕರ ಪರ ತನ್ನ ಬದ್ಧತೆಯಿಂದ ...ಮುಖ್ಯಸಲ್ಲೂ ಹಿಂಜರಿಯಲಿಲ್ಲ.

...ಂತಹ ಅಪೂರ್ವ ಸಮಾಜವಾದಿ ಹೋರಾಟಗಾರನಿಗೆ ...ಗಿಯೂ ಸಲ್ಲಬೇಕಾದ ಶ್ರದ್ಧಾಂಜಲಿ ಸಲ್ಲಲೇ ಇಲ್ಲ. ...ರ ಹೋರಾಟಕ್ಕಾಗಿಯೇ ತನ್ನ ಬದುಕನ್ನು ...ಪಾಗಿಟ್ಟಿದ್ದ ಬಾಳಪ್ಪರಿಗೆ ಬಾಳಪ್ಪರೇ ಸರಿಸಾಟಿ. ...ಸ್ತುಸಿಂದ ತೋಯ್ದು ಹೋಗಿರುವ ತುಳುವಪ್ಪರು ...ಂದ ಇನ್ನೊರ್ವ ಬಾಳಪ್ಪ ಜನ್ಮ ತಾಳಲಾರರು. ...ವಾದಿ ಹೋರಾಟಗಾರ ಬಾಳಪ್ಪರಿಗೆ ಕಂಬನಿ ...ದ ಲಾಲ್ ಸಲಾಂ...

● ಇಸ್ಮತ್ ಪಜೀರ್

ಚುನಾವಣೆ ಎಂಬ ಮ್ಯಾಚ್ ಫಿಕ್ಸಿಂಗ್

ಮೊನ್ನೆ ಚುನಾವಣೆಯ ಫಲಿತಾಂಶದ ಸುದ್ದಿ ಪ್ರಸಾರವನ್ನು ತಮ್ಮ ಟೀವಿಯಲ್ಲಿ ನೋಡುತ್ತಿದ್ದವರಿಗೆ ವಿವಿಧ ಚಾನೆಲ್ಲುಗಳ ಆ್ಯಂಕರ್‌ಗಳು ಬಿಜೆಪಿ ಗೆಲುವಿನ ಬಗ್ಗೆ ಹೇಗೆ ಸಂಭ್ರಮ ಪಟ್ಟರು ಎಂಬುದು ಗೊತ್ತಿದೆ. ಬಹುಶಃ ಅದರಿಂದ ಯಾರಿಗೂ ಆಶ್ಚರ್ಯವಾಗಿರಲಿಕ್ಕಿಲ್ಲ. ಕಳೆದ ಹಲವು ತಿಂಗಳುಗಳಿಂದ ಈ ದೇಶದ ಮಾಧ್ಯಮ ಅದರಲ್ಲೂ ಮುಖ್ಯವಾಗಿ ದೃಶ್ಯ ಮಾಧ್ಯಮ ಬಿಜೆಪಿಯ ಪೇಯ್ಡ್‌ನ್ಯೂಸ್ ಪ್ರಸಾರಕರಂತೆ ಕಾರ್ಯ ನಿರ್ವಹಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಮೊನ್ನೆ ಸಿಎನ್‌ಎನ್ ಐಬಿಎನ್‌ನವರ ಸುದ್ದಿ ಪ್ರಸಾರದ ವೇಳೆ ಕಂಡದ್ದು ಮಾತ್ರ ಲಜ್ಜೆಗೇಡಿತನದಲ್ಲಿ ಒಂದು ಹೊಸ ದಾಖಲೆಯನ್ನೇ



ನಿರ್ಮಿಸಿತು. ಉದಾಹರಣೆಗೆ, ಅಂದು ಬೆಳಗ್ಗೆ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ನ ಸೋಲನ್ನು ನಿರೂಪಿಸುತ್ತ "ರಾಜ್ಯದಲ್ಲಿ ಆ ಪಕ್ಷದ ಇಬ್ಬರು ಮಾತ್ರ ಗೆದ್ದಿದ್ದಾರೆ; ಅವರಲ್ಲಿ ಒಬ್ಬರು ಆದರ್ಶ ಹೌಸಿಂಗ್ ಸೊಸೈಟಿ ಹಗರಣ ಕುಖ್ಯಾತಿಯ ಅಶೋಕ್ ಚವಾಣ್" ಎಂದು ಚಾನೆಲ್‌ನ ಪ್ರಸಾರಕ ಬಿತ್ತರಿಸಿದರು. ಆದರೆ ಆ ಬಗೆಯ 'ಪಾತ್ರ ಪರಿಚಯ' ಅದೇ ರಾಜ್ಯದಲ್ಲಿ ಗೆದ್ದಿದ್ದ ಹಾಗೂ ಭ್ರಷ್ಟಾಚಾರದಲ್ಲಿ ಅಶೋಕ್ ಚವಾಣ್‌ರನ್ನೂ ಮೀರಿಸುವ ಬಿಜೆಪಿಯ ನಿತಿನ್ ಗಡ್ಕರಿ ಮತ್ತು ಕರ್ನಾಟಕದ ಯಡಿಯೂರಪ್ಪ, ಶ್ರೀರಾಮುಲು ಇತ್ಯಾದಿಗಳ ಬಗ್ಗೆ ಇರಲೇ ಇಲ್ಲ! ಆ ದಿನ ಸಂಜೆ ಸಿಎನ್‌ಎನ್ ಐಬಿಎನ್‌ನ ಸುದ್ದಿ ಪ್ರಸಾರದ ಇನ್ನೊಂದು ತುಣುಕಂತೂ ಹೇಸಿಗೆ ಅನ್ನಿಸುವಷ್ಟು ಅಸಹ್ಯವಾಗಿತ್ತು. ಫಲಿತಾಂಶವನ್ನು ವಿಶ್ಲೇಷಿಸುತ್ತಿದ್ದ ಚಾನೆಲ್‌ನ ಮಹಿಳಾಮಣಿ ಅಲ್ಲಿ ಹಾಜರಿದ್ದ ಬಿಜೆಪಿ ವಕ್ತಾರರೊಬ್ಬರಿಂದ ಸಿಹಿತಿಂಡಿಯನ್ನು ಬೇಡಿ ಪಡೆದುಕೊಂಡರು ಮಾತ್ರವಲ್ಲ, "ಆಹಾ! ಈ ಲಡ್ಡು ಎಂದಿಗಿಂತ ಹೆಚ್ಚು ಸಿಹಿಯಾಗಿದೆ" ಎನ್ನುತ್ತ ಚಪ್ಪರಿಸಿ ತಿಂದರು- ನೋಡುಗರ ಕಣ್ಣೆದುರಿಗೇ! ಕ್ರಿಕೆಟ್ ಮ್ಯಾಚ್‌ನಲ್ಲಿ ಗೆದ್ದ ಟೀಮಿನೊಡನೆ ಅಂಪೈರ್ ಕೂಡ ಕುಣಿದು ಕುಪ್ಪಳಿಸಿದರೆ ಹೇಗಿರುತ್ತದೆ? ಸಿಎನ್‌ಎನ್ ಐಬಿಎನ್ ಮಾತ್ರವಲ್ಲ ಬಹುತೇಕ ಚಾನೆಲ್ಲುಗಳ ಸುದ್ದಿ ಪ್ರಸಾರದ ವೈಖರಿ ಅದೇ ಬಗೆಯದಾಗಿತ್ತು.

ಭಾರತ ಮಾತ್ರವಲ್ಲ, ಪ್ರಜಾಪ್ರಭುತ್ವದ ಮಾದರಿ ಎನಿಸಿಕೊಂಡಿರುವ ಇಂಗ್ಲೆಂಡ್ ಅಮೆರಿಕಗಳಲ್ಲೂ ಬಂಡವಾಳಶಾಹಿ ಮತ್ತು ರಾಜಕೀಯ ಪಕ್ಷಗಳ ನಡುವೆ ಗಾಢವಾದ ಕೊಳು ಕೊಡುಗೆಯ ಸಂಬಂಧ ಲಾಗಾಯ್ತಿನಿಂದಲೂ ನಡೆದುಕೊಂಡು ಬಂದಿದೆ. ರಾಜಕೀಯ ಪಕ್ಷಗಳು ಚುನಾವಣೆಯ ಖರ್ಚು ವೆಚ್ಚಗಳನ್ನು ನಿಭಾಯಿಸುವುದು ಬಂಡವಾಳಶಾಹಿಗಳಿಂದ ಪಡೆದ ದುಡ್ಡಿನಿಂದಲೇ. ಆದಾಗ್ಯೂ ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬಂಡವಾಳಶಾಹಿಗಳಿಂದ ದೇಣಿಗೆ ಸಂಗ್ರಹಿಸುವುದರ ಜೊತೆಗೆ ಈ ಬಂಡವಾಳಶಾಹಿಗಳ ಒಡೆತನದಲ್ಲಿರುವ ಮಾಧ್ಯಮಗಳಿಂದ ಅತಿಹೆಚ್ಚು ಪ್ರಚಾರವನ್ನೂ ಪಡೆದುಕೊಂಡಿತು. ಸಿ.ಎಂ.ಎಸ್. ಮೀಡಿಯಾ ಲ್ಯಾಬ್ ಎಂಬ ಮಾಧ್ಯಮ ಸಂಶೋಧನಾ ಸಂಸ್ಥೆ ನಡೆಸಿದ ಸಮೀಕ್ಷೆ ಪ್ರಕಾರ, ಈ ಮಾರ್ಚ್ ಮತ್ತು ಏಪ್ರಿಲ್‌ನ ಎರಡು ತಿಂಗಳುಗಳಲ್ಲಿ ದೇಶದ ಐದು ಪ್ರಮುಖ ಟೀವಿ ಚಾನೆಲುಗಳಾದ ಆಜ್‌ತಕ್, ಝೀ ಟೀವಿ (ಹಿಂದಿ), ಎನ್‌ಡಿಟಿವಿ, ಸಿಎನ್‌ಎನ್ ಐಬಿಎನ್ ಮತ್ತು ಎಬಿಪಿಗಳು ತಮ್ಮ ಪ್ರೈಮ್‌ಟೈಮ್ (ರಾತ್ರಿ 8 ರಿಂದ 10 ಗಂಟೆಯವರೆಗಿನ ಅವಧಿ) ಸುದ್ದಿ ಪ್ರಸಾರದಲ್ಲಿ ಒಟ್ಟು 2575 ನಿಮಿಷಗಳನ್ನು (33%) ಮೋದಿ ಮತ್ತು ಬಿಜೆಪಿಗೆ ಕೊಟ್ಟಿದ್ದವು. ಈ ಸುದ್ದಿ ಪ್ರಸಾರದಲ್ಲಿ ಬಿಜೆಪಿ ನಂತರದ ಸ್ಥಾನ ಪಡೆದಿದ್ದ ಆಮ್‌ಆದ್ಮಿ ಪಕ್ಷಕ್ಕೆ 10.3% ಮತ್ತು ಕಾಂಗ್ರೆಸ್ ಪಕ್ಷಕ್ಕೆ ಕೇವಲ 4.33% ರಷ್ಟು ಮಾತ್ರ ದಕ್ಕಿತ್ತು. ಮೋದಿಯ ಪರವಾಗಿ ವಿವಿಧ ಚಾನೆಲ್ಲುಗಳು ಎಬ್ಬಿಸಿದ ಗದ್ದಲದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯನ್ನು ಸಹ ಕೇಳುವವರಿಲ್ಲದಾಯಿತು. ಚುನಾವಣೆಯಲ್ಲಿ ಮೋದಿಯನ್ನು ಗೆಲ್ಲಿಸಲು ದೇಶದ ಮತದಾರರಿಗಿಂತ ಮೊದಲೇ ಅಂಬಾನಿ, ಅದಾನಿ ಮುಂತಾದ ಬಂಡವಾಳಶಾಹಿಗಳು ತೀರ್ಮಾನಿಸಿ ಬಿಟ್ಟಿದ್ದರು!

ಈ ಬಂಡವಾಳಶಾಹಿಗಳ ಹಿಡಿತದಲ್ಲಿರುವ ಮಾಧ್ಯಮಗಳು ಮೋದಿಯನ್ನು ಒಂದು ಬ್ರಾಂಡ್ ಆಗಿ ಪರಿವರ್ತಿಸಿ ಮತದಾರರನ್ನು ಒಲಿಸಿಕೊಳ್ಳುವುದರಲ್ಲಿ ಸಫಲವಾದವು. ಮೋದಿಗೆ ಅಂಟಿಕೊಂಡಿದ್ದ ಗುಜರಾತ್ 2002ರ ಕಳಂಕವನ್ನು ಮರೆಮಾಚಿ, ರಾಜ್ಯದಲ್ಲಿ ಆತ ಸಾಧಿಸಿರುವ ಆರ್ಥಿಕ ಅಭಿವೃದ್ಧಿಯನ್ನು ಅದೇ ಒಂದು ಮಾದರಿ ಎಂಬಂತೆ ಮಾಧ್ಯಮಗಳು ಬಿಂಬಿಸಿದವು. ಆದರೆ ವಾಸ್ತವವಾಗಿ ಈ 'ಗುಜರಾತ್ ಮಾದರಿ' ಎಂದರೆ ಏನು? ಆ ರಾಜ್ಯದ ವ್ಯಾಪಕ ಅನಕ್ಷರತೆ, ದಲಿತರ ಮತ್ತು ಆದಿವಾಸಿಗಳ ಹೀನಾಯ ಸ್ಥಿತಿ, ಮಕ್ಕಳ ಅಪೌಷ್ಟಿಕತೆ, ಗಾಬರಿ ಹುಟ್ಟಿಸುವ ಗಂಡು ಹೆಣ್ಣುಗಳ ದಾಮಾಶಯ ಮತ್ತು ಅದಕ್ಕೆ ಕಾರಣವಾಗಿ ಹೆಣ್ಣು ಮಕ್ಕಳ ಭ್ರೂಣ ಹತ್ಯೆ, ತೀವ್ರ ಆರ್ಥಿಕ ಅಸಮಾನತೆ ಮುಂತಾದವುಗಳನ್ನೆಲ್ಲ ಬದಿಗೆ ಸರಿಸಿ ಥಳುಕಿನ ಮಾಲ್‌ಗಳು, ರೈತರಿಂದ ಕಸಿದ ಭೂಮಿಯಲ್ಲಿ ತಲೆ ಎತ್ತಿರುವ ಉದ್ಯಮಗಳು, ಆರು ಎಂಟು ಸಾಲುಗಳಲ್ಲಿ ವಾಹನಗಳು ಸಾಗುವ ಹೆದ್ದಾರಿಗಳು- ಇವನ್ನು ಮಾತ್ರ ವೈಭವೀಕರಿಸುವುದೇ ಆರ್ಥಿಕ ಅಭಿವೃದ್ಧಿಯ ಗುಜರಾತ್ ಮಾದರಿ. ಬಿಜೆಪಿ ಎತ್ತಿ ಹಿಡಿಯುವ ಆರ್ಥಿಕ ಅಭಿವೃದ್ಧಿಯ ಈ ಮಾದರಿ ಅದರ ರಕ್ತದಲ್ಲೇ ಸೇರಿಹೋಗಿರುವ ಆರ್‌ಎಸ್‌ಎಸ್‌ನ ರಾಜಕೀಯ ಸಿದ್ಧಾಂತದಷ್ಟೇ ಹಿಂಸಾತ್ಮಕವಾಗಿದೆ. ಮತದಾರರಿಗೆ ಈ ಚುನಾವಣೆಯಲ್ಲಿ ಬಿ.ಜೆ.ಪಿ. ನೀಡಿರುವ ಆಶ್ವಾಸನೆಗಳಲ್ಲಿ ನಗರೀಕರಣಕ್ಕೆ ಉತ್ತೇಜನವೂ ಸೇರಿದೆ. ಆ ಪಕ್ಷದ ಅಭಿವೃದ್ಧಿ ಮಾದರಿಗೆ ಇದು ಪೂರಕವಾಗಿಯೂ ಇದೆ. ಆದರೆ ಜಗತ್ತಿನಲ್ಲಿ ಎಲ್ಲೂ ಜನರ ವ್ಯಾಪಕ ಒಕ್ಕಲೆಬ್ಬಿಸುವಿಕೆ, ಪರಿಸರ ನಾಶ, ಪಾರಂಪರಿಕ ಉದ್ಯೋಗಗಳ ಅವಸಾನ ಮತ್ತು ಬಲಾತ್ಕಾರದ ಸಾಮೂಹಿಕ ವಲಸೆಗಳಿಲ್ಲದೆ ನಗರೀಕರಣ ನಡೆದಿಲ್ಲ. ಬಿಜೆಪಿ ಪ್ರತಿಪಾದಿಸುವ ಈ ನಗರೀಕರಣ ಮತ್ತು ಅದಕ್ಕೆ ಒತ್ತಾಸೆಯಾಗಿ ನಿಲ್ಲುವ ಅಭಿವೃದ್ಧಿ ಮಾದರಿ ಕೇವಲ ಬಿಜೆಪಿಗೆ ಮಾತ್ರ ಸೀಮಿತವಾಗಿಲ್ಲ, ವಾಸ್ತವವಾಗಿ ದೇಶದ ಎಲ್ಲ ರಾಜಕೀಯ ಪಕ್ಷಗಳು ಮತ್ತು ನಮ್ಮ ಒಟ್ಟು ವ್ಯವಸ್ಥೆಯೇ ಒಪ್ಪಿಕೊಂಡಿರುವ ಮಾದರಿ ಇದು. ನರಹತ್ಯೆ ಮತ್ತು ಪರಿಸರ ನಾಶಗಳಲ್ಲದೆ ಈ ಮಾದರಿಯ ಅಭಿವೃದ್ಧಿ ಸಾಧಿಸುವುದು ಅಸಾಧ್ಯ.

ಇಂತಹ ಅಭಿವೃದ್ಧಿಯಲ್ಲಿ ಅನಿವಾರ್ಯವಾಗಿರುವ ಹಿಂಸೆಯ ವಿರುದ್ಧ ಇದುವರೆಗೆ ದೇಶದ ಹಲವೆಡೆ ಸಾಂಕೇತಿಕ ಮಟ್ಟದ ಪ್ರತಿಭಟನೆಗಳಾದರೂ ನಡೆದಿವೆ. ಮೇಧಾ ಪಾಟ್ಕರ್, ದಯಾಮಣಿ ಬಾರ್ಲ ಮುಂತಾದವರ ಸತತ ಹೋರಾಟಗಳಿಂದಾಗಿ ಈ ಅಭಿವೃದ್ಧಿ ಮಾದರಿ ಆದಿವಾಸಿಗಳು ಮತ್ತು ಬಡರೈತರ ಪಾಲಿಗೆ ಮರಣದಂಡನೆಯೇ ಆಗಿರುವ ವಾಸ್ತವ ಕೆಲವರಿಗಾದರೂ ಮನದಟ್ಟಾಗಿದೆ. ಆದರೆ ಪ್ರಭುತ್ವ ಇದುವರೆಗೆ ಈ ಬಗೆಯ ಪ್ರಜಾಸತ್ತಾತ್ಮಕ ಪ್ರತಿರೋಧಗಳನ್ನು ಹಿಂಸೆಯಿಂದಲೇ ಹತ್ತಿಕ್ಕಿದೆ. ಇನ್ನು ಮುಂದೆ, ಮೋದಿ ನೇತೃತ್ವದ ಸರಕಾರದಲ್ಲಿ ಪ್ರಭುತ್ವದ ಹಿಂಸೆಯ ಹತ್ಯಾರಗಳು ಇನ್ನಷ್ಟು ಚೂಪಾಗಲಿವೆ. ಈಗಾಗಲೇ ಬಿಜೆಪಿ ಮಾಧ್ಯಮಗಳ ಮುಖಾಂತರ ರಾಜಕೀಯ ಭಿನ್ನಮತವನ್ನು ಹೇಗೆ ಹತ್ತಿಕ್ಕಿದೆ ಎಂಬುದನ್ನು ನೋಡಿದ್ದೇವೆ. ನರೇಂದ್ರ ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ಈ 14 ವರ್ಷಗಳ ಅವಧಿಯಲ್ಲಿ ಸಂವಿಧಾನಕ್ಕೆ ನಿಷ್ಠರಾಗಿ ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಿದ ಪೊಲೀಸು ಅಧಿಕಾರಿಗಳನ್ನು ಹೇಗೆ ನಡೆಸಿಕೊಂಡ ಎಂಬುದನ್ನು ನೋಡಿದ್ದೇವೆ. 2002ರ ನರಮೇಧ ಮತ್ತು ನಂತರದ ದಿನಗಳಲ್ಲಿ ನೆಲದ ಕಾನೂನು, ನ್ಯಾಯ ಮತ್ತು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಿದ ಸಂಜೀವ್ ಭಟ್, ರಾಹುಲ್ ಶರ್ಮ, ವಿವೇಕ್ ಶ್ರೀವಾಸ್ತವ, ಶ್ರೀಕುಮಾರ್ ಮುಂತಾದ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಮೋದಿ ಬಗೆಬಗೆಯ ವಿಧಾನಗಳಲ್ಲಿ ಹಿಂಸೆ ನೀಡಿದ. ಮೇಧಾ ಪಾಟ್ಕರ್‌ಗೆ ಅವನ ರಾಜ್ಯದೊಳಗೆ ಪ್ರವೇಶ ಕೂಡ ನಿಷಿದ್ಧವಾಗಿತ್ತು. ಗುಜರಾತ್ 2002ರ ಸಂತ್ರಸ್ತರಿಗೆ ಕಾನೂನಿನ ಹೋರಾಟದ ಮುಖಾಂತರ ನ್ಯಾಯ ಒದಗಿಸಲು ಹೆಣಗಾಡುತ್ತಿರುವ ತೀಸ್ತಾ ಸೆಟಲ್‌ವಾಡ್ ಅವರಿಗೆ ಮೋದಿ ಸರಕಾರ ಕೊಡುತ್ತಿರುವ ಕಿರುಕುಳ ಇನ್ನು ಮುಂದೆ ಅವನ ಸರಕಾರ ಇಡೀ ರಾಷ್ಟ್ರದಲ್ಲಿ ಮಾನವ ಹಕ್ಕು ಹೋರಾಟ ಗಾರರನ್ನು ಹೇಗೆ ಬೇಟೆಯಾಡಬಹುದು ಎಂಬುದಕ್ಕೆ ಒಂದು ಸೂಚನೆ ಅಷ್ಟೆ. ತನ್ನ ಒಂದೆರಡು ಚುನಾವಣಾ ಭಾಷಣಗಳಲ್ಲಿ ಮೋದಿ ಅಸ್ಸಾಂನ ಬಾಂಗ್ಲಾ ಭಾಷಿಕ ಮುಸ್ಲಿಮರಿಗೆ ಗಂಟುಮೂಟೆ ಕಟ್ಟಲು ಕೊಟ್ಟ ಕರೆ ಆ ರಾಜ್ಯದಲ್ಲಿ ಮುಸ್ಲಿಮರ ಸಾಮೂಹಿಕ ಹತ್ಯೆಗೆ ಕಾರಣವಾಯಿತು; ಅಲ್ಲಿ ಲಕ್ಷಕ್ಕೂ ಮೀರಿ ಮುಸ್ಲಿಮರು ನಿರಾಶ್ರಿತರಾದರು. ಮೋದಿ ಮುಸ್ಲಿಮರನ್ನು ಸಾರಾಸಗಟಾಗಿ ಗೋಹತ್ಯೆಯ ಜೊತೆ ಥಳಕು ಹಾಕಿ, ದೇಶದಲ್ಲಿ ನಡೆದ ಪಿಂಕ್ ಕ್ರಾಂತಿಯ ಬಗ್ಗೆ ಮಾತಾಡುತ್ತಿದ್ದಾಗ, ವಿಹಿಂಪದ ಪ್ರವೀಣ ತೊಗಾಡಿಯಾ ಮುಸ್ಲಿಮರನ್ನು, ಅವರ ಊರುಕೇರಿಗಳಿಂದ ಮಾತ್ರವಲ್ಲ, ಅವರ ಮನೆಗಳಿಂದಲೂ ಹೊರದಬ್ಬುವ 'ಅಹಿಂಸಾತ್ಮಕ' ವಿಧಾನಗಳ ಬಗ್ಗೆ ಅಳುಕಿಲ್ಲದೆ ಮಾತನಾಡಿದ. ಉತ್ತರ ಪ್ರದೇಶದಲ್ಲಿ ಬಿಜೆಪಿಯ ಲೋಕಸಭಾ ಅಭ್ಯರ್ಥಿ (ಈಗ ಅವನು ಆಯ್ಕೆಯೂ ಆಗಿದ್ದಾನೆ) ಗಿರಿರಾಜ ಸಿಂಗ್ ಮೋದಿಯನ್ನು ವಿರೋಧಿಸುವವರು, ಪಾಕಿಸ್ತಾನಕ್ಕೆ ಹೋಗಲಿ ಎಂದು ಸಲಹೆ ನೀಡಿದ. ಇದೆಲ್ಲ ಮುಂದೆ ಪ್ರಜೆಗಳಿಗೆ ಏನು ಕಾದಿದೆ ಎಂಬುದರ ಮುನ್ಸೂಚನೆಗಳು. ನಾವು ಭಯಪಟ್ಟುಕೊಂಡರೆ ಅವರು ನಮ್ಮನ್ನು ಇನ್ನಷ್ಟು ಹೆದರಿಸುತ್ತಾರೆ; ನಿರ್ಭಯವಾಗಿರುವುದೇ, ಅವರನ್ನು ಎದುರಿಸುವ ಏಕಮಾತ್ರ ವಿಧಾನ.

● ಜಿ.ರಾಜಶೇಖರ್

ನೆನಪು

ಅನುಭವದ ಇರುಳೊಂದು
ಒಳಗೊಳಗೆ ಮಿನುಗಿ
ಬೆಳದಿಂಗಳ ಬೆಳಕಲಿ
ನೆನಪಾಗಿ ನನಗೆ
ಆ ನೆನಪು ಗುಡುಗಿ
ಕಂಪಿಸಿತು ನಿನ್ನೊಳಗೆ
ಮರೆಯದಾ ಹಾಡಾಗಿ

ನೆನಪೊಂದು ಮಿಂಚಾಗಿ
ಕಾರ್ಮೋಡದೊಳ್ ಹೊಕ್ಕು
ಕಾತರದಿ ಇಳಿದಿತ್ತು
ಮಳೆಯಾಗಿ ಇಳೆಗೆ

ಮಳೆ ಬಿದ್ದ ನೆಲದಿಂದ
ಹದವಾದ ಸಂಬಂಧ
ಬಿತ್ತಿದ್ದು ಬೆಳೆಯಾಗಿ
ಬೆಳೆ ಬಳುಕಿ ತುಳುಕಿ
ಹಸಿದವರ ಉಸಿರಾಗಿ
ಮನದೊಳಗೆ ಇಣುಕಿತ್ತು ನೆನಪು

● ಡಾ. ಡಿ.ಸಿ. ರಾಜಪ್ಪ



ಲಂಕೇಶ್

ನಮೋ ಬ್ರಿಗೇಡ್‌ನ ರಾಜ್ಯ ಸಂಚಾಲಕ ನರೇಶ್ ಶೆಣೈನನ್ನು ಯಾಕೆ ಸರಕಾರ ಬಂಧಿಸುತ್ತಿಲ್ಲ?

ಒಂದು ಪತ್ರ

"ನ[illegible] ಮೋದಿಯವರ ಪ್ರಧಾನಿಯಾಗಿ ಆಯ್ಕೆ [illegible] ಭಾರತ ನನ್ನ ಕನಸಿನ ಭಾರತವಲ್ಲ" ಎಂದು [illegible] ಮೂರ್ತಿ ಹೇಳಿಕೆ ನೀಡಿದ್ದರು. [illegible] ಪತ್ರಿಕೆಗಳು ಮತ್ತು ಮಾಧ್ಯಮಗಳು ತಿರುಚಿ [illegible] ಪದಗಳಿಗಿಂತ ಅದರ ಧ್ವನಿ, ಅದರ [illegible] ನಮಗಂತೂ ಅರ್ಥವಾಗಿತ್ತು [illegible] ಆತಂಕವೂ ಆಗಿತ್ತು [illegible] ಸಂಘಪರಿವಾರದ [illegible]

[illegible]



[illegible]

• ಶ್ರೀಧರ್ ಹಮ್ಮಾಡಿ

ಇಂಡಿಯಾದ ಇನ್ನೊಸೆಂಟ್ ಮತದಾರ ಮೋಸ ಹೋಗ್ಯವುನೆ

ಥೂತ್ತೇರಿ

ಯಾಹೂ

ಇದ್ದಕ್ಕಿದ್ದಂತೆ ಕಟ್ಟೆ ಪುರಾಣದ ವಾಟಿಸ್ನೆ ಮಾತನಾಡಿಸಬೇಕೆನಿಸಿತಲ್ಲಾ. ಫೋನ್ ಮಾಡಿದರೆ "ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ" ಎಂಬ ಮಾಹಿತಿ ಬಂತು. ಮತ್ತೆ ಯತ್ನಿಸಿದಾಗ "ಬೇರೆ ಕರೆಯಲ್ಲಿ ನಿರತರಾಗಿದ್ದಾರೆ" ಎಂದಿತು. ಮರಳಿ ಪ್ರಯತ್ನಪಟ್ಟಾಗ ರಿಂಗಾಯ್ತು.

ರಿಂಗ್ ಟೋನ್: "ಬಂದದ್ದೆಲ್ಲಾ ಬರಲೀ... ಗೋವಿಂದನ ದಯೆ ಇರಲೀ... ಬಂದ....

"ಹಲೋ? ಯಾರ್ ಸಾರ್ ತಾವು?"

"ನಾನು ವಾಟಿಸ್ನೆ, ಪತ್ರಕರ್ತ ಯಾಹು."

"ಹೌದಾ ಸಾರ್? ಏನ್ ಸಾರ್ ಸಮಾಚಾರ?"

"ಯಾಕೆ ವಾಟಿಸ್ನೆ ಡಲ್ಲಾಗಿದ್ದಿಯಲ್ಲಾ?"



"ನಾನಷ್ಟೆ ಅಲ್ಲ ಸಾರ್, ಈ ದೇಶದಲ್ಲಿರೊ ನನ್ನಂಥೋರೆಲ್ಲ ಡಲ್ಲಾಗಿದ್ದಿವಿ ಸಾರ್. ಅದ್ಕೆ ಒಂದು ವಾರದಿಂದ ಪೇಪರ್ನೂ ನೋಡಿಲ್ಲ, ಟಿವಿನೂ ನೋಡಿಲ್ಲ."

"ಹೌದಾ?"

"ಪೇಪರ್ ವಿಷಯ ಬಿಡಿ. ನೂರ ಎಂಬತ್ತು ಮನೆ ಇರೊ ನಮ್ಮೂರಿಗೆ ಒಂದೇ ಒಂದು ಪೇಪರು ಬರಲ್ಲ ಆದ್ರೆ ಎಲ್ಲರ ಮನೇಲೂ ಟಿವಿ ಅವೆ. ಜನಗಳಂತೂ ಆ ಸರ್ಕಾರ ಹೋಯ್ತು ಇನ್ನೊಂದು ಸರ್ಕಾರ ಬತ್ತು ಅಂತ ಆರಾಮಾಗಿ ಧಾರಾವಾಹಿ ನೋಡ್ತಾ ಅವುರೆ. ಅದಿರ್ಲಿ, ಒಂದು ಫಿಫ್ಟಿ ರುಪೀಸ್ ಕರೆನ್ಸಿ ಹಾಕುಸ್ತಿರಾ?"

"ಹಾಕುಸ್ತಿನಿ. ಏನೀತರ ಮಾಡಿದರಲ್ಲಾ?"

"ನಾವೇನು ಮಾಡಿದೊ ಸಾರ್?"

"ರಮ್ಯನ್ನ ಸೋಲಿಸಿದರಲ್ರೀ?"

"ಆ ಎಸ್ಸೆಂ ಕೃಷ್ಣನೂ, ಅಂಬರೀಷನೂ ಸೇರಿಕೊಂಡು ಆ ಹುಡುಗಿಯ ಬಲಿ ಕೊಟ್ರು ಸಾರ್, ರಿಯಲಿ. ಬೇಕಾದ್ರೆ ಈ ಮಾತ ಸಂಬಂಧಪಟ್ಟೋರಿಗೆ ಫೋನ್ ಮಾಡಿ ಹೇಳಿ. ಕೃಷ್ಣ ಮನೇಲಿರಬೇಕು, ಇಲ್ಲ ಸಕ್ರಿಯ ರಾಜಕಾರಣದಲ್ಲಿರಬೇಕು. ಅಂಬರೀಸೂ ಅಷ್ಟೆ. ಚಾಡಿ ಮಾತ ಕೇಳಿಕೊಂಡು ರಾಜಕಾರಣ ಮಾಡಬಾರ್ದು. ನಾನು ಮದ್ಲೇ ಹೇಳಿರಲಿಲ್ವಾ ಸಾರ್ ರಮ್ಯ ಟ್ರಬಲ್ಲಲವುಳೆ ಅಂತೆ. ಪಾಪ ಆ ಹುಡುಗಿ ಹಳ್ಳಿ ತಿರುಗಿ ಎಲ್ಲಾರ್ನು ಮಾತಾಡುಸ್ತು, ಆದ್ರೆ ರಾಜಕಾರಣದ ಮಾತು ಗೊತ್ತಿರಲಿಲ್ಲ, ಇರೋದ ಇರಂಗೆ ಮಾತಾಡ್ತಿದ್ಲು, ಅದ್ನೆ ಸಯಿಸಲಿಲ್ಲ ನಮ್ಮ ಜನ. ನಿಜ ಹೇಳ್ತಿನಿ ಸಾರ್. ನಮ್ಮ ಜನವೇ ಸಣ್ಣ ಜನ. ಅವುರ ಸಣ್ಣತನಕ್ಕೆ ಕಾರಣನೆ ಬೇಕಾಗಿಲ್ಲ, ನಾನು ಇವತ್ತಿನವರೆಗೂ ಯೋಚನೆ ಮಾಡ್ತಯಿದ್ದಿನಿ ಸಾರ್."

"ಏನು ಯೋಚನೆ ಮಾಡ್ತಯಿದ್ದೆ?"

"ಏನಂದ್ರೆ, ಈ ಜನಗಳೇ ಸರಿಲ್ಲವೊ ಅಥವಾ ನಾನು ಸರಿಲ್ವೊ ಅಂತ. ಕಡಿಗೂ ನಾನು ಸರಿ, ಜನಗಳೇ ಈಡಿಯಟ್ ಜನ ಅಂತ ಪ್ರೂ ಆಯ್ತು ಸಾರ್."

"ಉದಾಹರಣೆ ಕೊಡ್ತಿಯಾ?"

"ನೋಡಿ ಸಾ, ಇಪ್ಪತ್ತೆಂಟು ಕಾನ್ಸುಟಿಯನ್ಸಿಲಿ ಚಿಕ್ಕಮಗಳೂರಲ್ಲಿ ನಿಂತಿದ್ನಲ್ಲ ಜಯಪ್ರಕಾಶ್ ಹೆಗ್ಡೆ ಅಂತ, ಅವುನು ಜಂಟ್ಲುಮನ್. ಈ ರಾಜಕಾರಣದಲ್ಲಿ ಹಿಂಗೂ ಇರಬಹುದು ಅಂತ ತೋರಿಸಿದ್ರು."

"ನಿಜ ವಾಟಿಸ್ನೆ, ಯಾರ ಕರುದ್ರು ಬತ್ತಿದ್ರು, ನಯವಿನಯದಲ್ಲಿ ಅವುನಂಗ್ಯಾರೂ ಇಲ್ಲ, ಅದರಲ್ಲೂ ಎಂಪಿ ಫಂಡನ್ನ ಎಷ್ಟು ಒಳ್ಳೆ ಕೆಲಸಕ್ಕೆ ಕೊಟ್ಟಿದ್ದಾರೆ ಗೊತ್ತಾ?"

"ನೋಡಿ ಸಾರ್, ಅಂತ ಮನುಷ್ಯನ್ನ ಸೋಲಿಸಿ ಶೋಭಕ್ಕನ್ನ ಗೆಲ್ಲಿಸಿ ಡೆಲ್ಲಿಲಿ ಯಡಿಯೂರಪ್ಪಾಗೆ ಕಂಪನಿ ಕೊಡಂಗೆ ಮಾಡಿದ್ರಲ್ಲಾ.. ಅಕ್ಚುವಲಿ ಶೋಭಕ್ಕನ್ನ ಗೆಲ್ಸಿದೋರ್ಯಲ್ಲ ಯಡಿಯೂರಪ್ಪನ ಕಡಿಯವರಂತೆ. ನಿಜವಾ ಸಾರ್?"

"ಏನೊಪ್ಪ, ನಿನ್ನಂಥೋರೆ ಹೇಳಬೇಕು."

"ಹೇಳದೇನು ಸಾರ್, ಸಕ್ಲೇಗ್ತಿ ಜನಗಳ ಮುಖ ನೋಡಿದೇಟಿಗೆ ಹೇಳ್ತಿನಿ. ಜಯಪ್ರಕಾಶ್ ಹೆಗಡೆ ಮಾಡಿರೊ ತಪ್ಪೇನು ಅಂತ ಅವುರೂ ಹೇಳಲಿ."

"ಈಗಾಯ್ತಲ್ಲ ಬುಡು. ಆಗ ಇಂದಿರಾಗಾಂಧಿ ಎದುರಿಗೆ ವೀರೇಂದ್ರ ಪಾಟೀಲ್ ಸೋತಿದ್ರು. ಈಗ ಹೆಗಡೆ ಸೋತವುರೆ ಅಷ್ಟೆ."

"ಅದು ಇಂದಿರಾಗಾಂಧಿ ಕಾಲ ಸಾರ್. ಈಗೇಳಿ, ಜಯಪ್ರಕಾಶ್ ಹೆಗಡೆ ತರ ನಿಜ[illegible] ಹೇಳಿಕೊಂಡು ಪ್ರಾಮಾಣಿಕವಾದ ರಾಜಕಾರಣ ಮಾಡೋರನ್ನ ಸೋಲುಸ್ತೀವಿ ಅನ್ನಂಗಾಯ್ತು."

"ಯಡಿಯೂರಪ್ಪ ಗೆದ್ನಲ್ಲ, ಅದಕೇನೇಳ್ತಿ?"

"ಸರಕಾರದ ಹಣ ಕೊಳ್ಳೆ ಹೊಡದು, ತಾನರ್ಧ[illegible] ಮಡಿಕ್ಕಂಡು, ಜನಕ್ಕೂ ಅರ್ಧ ಕೊಟ್ಟು ಜೈಲಿಗೂ ಹೋಗಿ[illegible] ಬಂದೋರನ್ನ ಕರ್ನಾಟಕದಲ್ಲೇ ಹೆಚ್ಚು ಮತ ಕೊಟ್ಟು ಗೆಲ್ಲುಸ್ತಿವಿ ಅನ್ನದಾದ್ರೆ, ಜನ ಭ್ರಷ್ಟತೆ ಒಪ್ಪಿಕೊಂಡು ಸಂತೋಷವಾಗ್ಯವುರೆ ಅನ್ನಂಗಾಯ್ತಲ್ಲ ಸಾರ್."

"ಅಂಗಲ್ಲಾ, ಬಂಗಾರಪ್ಪನ ಮನೆ ಜಗಳನೂ ಬೇಡ[illegible] ಗ್ಯಾಸ್ ಮಾರೊ ಏಜೆಂಟೂ ಬ್ಯಾಡ, ಕಳ್ಳರ ಲೀಡ್ರು ವಾ[illegible] ಅಂದಿರಬಹುದಲ್ಲಾ?"

"ಅದ್ನ ನಾನೇಳಿದ್ದು ಸಾರ್."

"ನಿಮ್ಮ ಕುಮಾರಣ್ಣ ಮೂರನೆ ಪ್ಲೇಸಿಗೊದ್ನಲ್ಲ, ಅದಕ್ಯೇನೇಳ್ತಿ?"

"ಪಾಪ ಅವುನು ದ್ಯಾವೇಗೌಡ್ರ ಹೊಟ್ಟೇಲಿ ಹುಟ್ಟುಬಾರದಿತ್ತು ಸಾರ್[illegible] ಗೌಡ್ರ ರಾಜಕಾರಣದ ಕತೆ ಮುಗದದೆ ಸಾರ್. ಇನ್ನೇನಿದ್ರು ಹಳೆ ಸೇಡಿ[illegible] ಲೆಕ್ಕಾಚಾರಗಳದೆ ಕತೆ. ಅದ್ಕೆ ಕುಮಾರಣ್ಣ ಬಲಿಯಾದ, ಪೂಲಿಷ್ ಫೆಲೊ."

"ಅಂಗಂತಿಯಾ?"

"ಊ ಮತ್ತೆ. ಅಲ್ಲ ಸಾರ್, ಆ ಅಹಿಂದ ಅನ್ನೊ ಸಂಘ ಹುಟ್ಟಿದ್ದೆ[illegible] ಚಿಕ್ಕಬಳ್ಳಾಪುರದಲ್ಲಿ, ಅಲ್ಲಿಂದ ಇಲ್ಲಿವರೆಗೂ ಬಂದಿರೊ ರಿಜಲ್ಟನಾದ್ರು ನೋಡಿ ಸುಮ್ಮನಿರಬಾರದೆ. ಸುಮ್ಮನಿರಕ್ಯಾಗಲ್ಲ, ಯಾಕಂದ್ರೆ ದೇವೇಗೌಡ್ರ[illegible] ಮೊಯ್ಲಿನೋ ಅಥವಾ ಬಚ್ಚೇಗೌಡನೋ ಸೋಲಬೇಕು. ಕುಮಾರಣ್ಣ[illegible] ಗೆಲ್ಲೊದು ಎರಡ್ನೆ ಮಾತು. ಆದ್ರೆ ಜನ ಮೂರನೆ ಪ್ಲೇಸ್ ತೋರಿಸಿದ್ರು[illegible] ಇದನ್ನೇ ರಾಜಕಾರಣ ಅನ್ನದು ತುಂಬಾ ಕಷ್ಟ."

"ನಾವೆಲ್ಲಾ ದಾವಣಗೆರೆಲಿ ಮಲ್ಲಿಕಾರ್ಜುನ ಗೆಲ್ತನೆ ಅನ್ನಕಂಡಿದ್ದೆ[illegible] ವಾಟಿಸ್ನೆ."

"ಅದ್ಯಂಗೆ ಸಾರ್ ಗೆಲ್ತನೆ? ಸಿದ್ದೇಶನಷ್ಟು ಸುಲಭವಾಗಿ ಮಲ್ಲಿಕಾರ್ಜು[illegible] ಜನಗಳ ಕೈಗೆ ಸಿಗದಿಲ್ಲ ಅನ್ನದು ಒಂದು ಕಾರಣ. ಅದಕ್ಕಿಂತ್ಲೂ ಮತೀಯವಾ[illegible] ಕಾರಣ ಯಾವುದಪ್ಪಾ ಅಂದ್ರೇ, ಈ ಸಿದ್ದರಾಮಯ್ಯನ ಸರ್ಕಾರ ಲಿಂಗಾಯ[illegible] ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನ ಕಡೆಗಣಿಸಿದೆ. ಇದಕ್ಕೆ [illegible] ಚುನಾವಣೆಲಿ ತಕ್ಕ ಉತ್ತರ ಕೊಡಿ ಅನ್ನೊ ಮೆಸ್ಸೇಜು ವೀರಶೈವ ಮಹಾ[illegible] ಸಭಾದಿಂದ್ಲೇ, ಹೊಂಟತ್ತಂತೆ. ಅದ ಓದಿ ಕಂಡ ಲಿಂಗಾಯಿತ್ರು ಸಿದ್ದೇಶನಿ[illegible] ವಡುದ್ರು. ಅಹಿಂದ ಓಟು ಮಾತ್ರ ತಗಂಡ ಮಲ್ಲಿಕಾರ್ಜುನ ಮಕ್ಕ[illegible] ಮನಿಕಂಡ. ಇದಕ್ಕೆ ಮಹಿಮಾ ಪಟೇಲ್‌ನೂ ಕೈ ಜೋಡಿಸಿದ ಅಷ್ಟೆ."

"ಮೈಸೂರದೇನೇಳ್ತಿ?"

"ವಿಶ್ವನಾಥ ಮಾತಿನಿಂದ್ಲೆ ಮನೆ ಹಾಳು ಮಾಡಿಕಂಡ ಸಾರ್. ದೇವೇಗೌಡ್ರ ಟ[illegible] ಮಾಡೊ ಯಾವ ಅವಕಾಶನೂ ಕಳಕೊಂಡಿಲ್ಲ, ಅಂದಮ್ಯಾಲೆ ದ್ಯಾವೇಗೌಡ್ರು ಬುಡತ[illegible] ತುಂಬಾ ಫೀಲಾಗದ್ಯಾಕೆ ಅಂದ್ರೆ ಅಂಥೋನೆದ್ರಿಗೆ ಸೋತನಲ್ಲ ಅಂತ."

"ಎಂಥೋನೆದ್ರಿಗೆ ಸೋತ?"

"ಸೋಲಬಾರದೋನೆದ್ರಿಗೆ ಸೋತ ಸಾರ್. ಒಂದು ಜುಜುಬಿ ಸೈಟಿಗಾಗಿ ಹೆಂಡತಿ[illegible] ಹ್ಯಾಂಡಿಕ್ಯಾಪ್ ತಂಗಿ ಅಂತ ಸುಳ್ಳು ಹೇಳಿದ್ನಂತೆ. ಇಂಡಿಯಾದ ಚರಿತ್ರೆಲಿ ಇಂಥೋನ್ಯಾರ[illegible] ಎಂಪಿಯಾಗಿಲ್ಲ, ಜೆಡಿಎಸ್ ಮನಸು ಮಾಡಿದ್ರೆ ಏನ್ನಾದ್ರೂ ಮಾಡ್ತದೆ ಅನ್ನ[illegible] ಪರೇಗ್‌ಜಾಂಪಲ್ಲದು. ಜೀವಿಜಯನಿಗೇ ಟಿಕೆಟ್ ಕೊಡಕ್ಕೆ ಏನಾಗಿತ್ತು ಸಾರ್?"

"ಇಂತ ಟೈಮಲ್ಲಿ ಪ್ರಾದೇಶಿಕ ಪಕ್ಷ ಚೌಕಾಸಿ ಮಾಡ್ತವಂತೆ. ಪಾಪ, ಜೆಡಿಎಸ್[illegible] ಅಂಗೆ ಮಾಡಿರಬಹುದು."

"ಅದ್ಕೆ ಅಲ್ಲವಾ ಸಾರ್ ಹದಿನೆಂಟು ಜನ ಗೆಲ್ತಿದ್ದ ಜೆಡಿಎಸ್ ಇವತ್ತು ಎರ[illegible] ಸೀಟಿಗೆ ಬಂದು ನಿಂತಗಂಡದೆ. ಯಾಕೆ ಅಂದ್ರೆ ಈಚೆಗೆ ನಮ್ಮ ದೇವೇಗೌಡ್ರು ನಿಲ್ಲಬೇಕಾ[illegible] ನ್ಯಡಿಬೇಕಾದ್ರೆ ನನ್ನಂಥವರ ಭುಜ ಹಿಡಕತ್ತರೆ. ಪಾಪ ಪುಟ್ಟರಾಜನಿಗೆ ಅಂತ ಜವಾಬ್ದಾ[illegible] ಬತ್ತೀಗ. ಆದ್ರು ನಮ್ಮ ಗೌಡ್ರಿಗೆ ಪಾರ್ಲಿಮೆಂಟಗಿಂತ ಪಂಚಾಯ್ತಿ ಆವರಣನೇ ಇ[illegible] ಜನಗಳು ಮಾಜಿ ಪ್ರಧಾನಿ ಬಂದ ಅಂತ ಓಡಾಡ್ತರೆ, ಮುದ್ದೆ ತತ್ತರೆ, ಸಾರು ಸೊ[illegible] ತತ್ತರೆ. ಇಂತ ರಾಜಕಾರಣಕ್ಕೆ ಒಗ್ಗಿದೋರು ಯಾರೂ ಮಾತಾಡಸದಂತ ಡೆಲ್ಲಿಗೋಗ[illegible] ಕಷ್ಟ."

"ಬಿಜೆಪಿ ಬಗ್ಗೆ ಏನೇಳ್ತಿ ವಾಟಿಸ್ನೆ?"

"ಏನೇಳದು ಸಾರ್. ನಮ್ಮ ಇಂಡಿಯಾದ ಇನ್ನೊಸೆಂಟ್ ಓಟರ್ ಮೋಸ ಹೋಗ್ಯವ[illegible] ಅದೂ ಅಡವಿಟೇಜ್‌ಗೆ. ಆದ್ರಿಂದ ಇದು ನಿಜವಾದ ಗೆಲುವಲ್ಲ ಸಾರ್."


"ಇದರಲ್ಲಿ ಕಾಂಗ್ರೆಸ್‌ದೇನು ತಪ್ಪಿಲ್ಲವೆ?"

"ಬಿಜೆಪಿ ಬೆಳಿಯದಕ್ಕೆ ಅವಕಾಶ ಮಾಡಿಕೊಟ್ಟಿದ್ದೇ ಅದರ ತಪ್ಪು, ಇವತ್ತಿ[illegible] ಗುಜರಾತಲ್ಲಿ ಮೋದಿ ಎದುರಿಗೆ ಒಬ್ಬ ನಾಯಕನನ್ನೂ ಸೃಷ್ಟಿ ಮಾಡಿಲ್ಲ, ಇನ್ನ ಇಂಡಿ[illegible] ದೇಶ ತಗಂಡ್ರೆ ಆ ರಾಹುಲ್ ಗಾಂಧಿ ಅನ್ನೊ ಹುಡುಗನಿಗೆ ಮದುವೆ ಆಗಕ್ಕೂ [illegible] ಇಲ್ಲ, ಮಂತ್ರಿಯಾಗಕ್ಕೂ ಇಷ್ಟಯಿಲ್ಲ. ಅದೇ ಮುಖ್ಯ ಉದ್ದೇಶ ಅಲ್ಲ ಅಂತನೆ. [illegible] ಮನಮೋಹನ್ ಸಿಂಗ್‌ನಿಗೆ ಅವುನಾಯ್ತು ಅವನ ಫೈಲಾಯ್ತು ಬುಕ್ಕಾಯ್ತು. ಸೋನಿ[illegible] ಗಾಂಧಿಗೆ ಹಿಂದಿನಂತೆ ಜನ ನನ್ನ ವಿಡೋ ಅಂತ ಇಷ್ಟ ಪಡ್ತರೆ ಅನ್ನೋ ಭ್ರಮೆ. ತ[illegible] ಫುಂಟಿನೋರ್ಯಲ್ಲ ಏಜ್ಡ್ ಪರಸನ್ನಗಳು. ಇವುರ್ಯಲ್ಲಾರ ದ್ಯಸಿಂದ ಇಂಡಿಯಾ ದೇಶ[illegible] ಒಂದು ಮತಾಂಧ ದೇಶ ಅನ್ನದು ಜಗತ್ತಿಗೆ ಗೊತ್ತಾಗಂಗಾಯ್ತು ಸಾರ್. ಮುಂದೆ [illegible] ಕೆಟ್ಟ ದಿನ ಅವೆ ಸಾರ್. ಎಲ್ಲ ರೆಡಿಯಾಗಬೇಕು."

"ಆಗ್ಲೆ ಅನಂತಮೂರ್ತಿಯ ಪಾಕಿಸ್ತಾನಕ್ಕೆ ಕಳುಸ್ತೀನಿ ಅಂತರಲ್ಲಾ ವಾಟಿಸ್ನೆ?"

"ಅಂಗನ್ನೊ ನನ್ನ ಮಗನ್ನ ತಾಲೀಬಾನಿಗೆ ಕಳುಸ್ತಿನಿ!"

"ಥೂತ್ತೇರಿ!!!"



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭವಾನಿ ಭಾವನಾಗಮ್ಯ

ತಮ್ಮ ತಮ್ಮ ಕಾರ್ಯಸಿದ್ಧಿಗಳಿಗಾಗಿ ಪ್ರಾಚೀನಕಾಲದಿಂದಲೂ ನಾನಾ ರೀತಿಗಳಲ್ಲಿ ಮನುಷ್ಯ ಪ್ರಯತ್ನಗಳು ಹೊರಗಿನ ಶಕ್ತಿಯನ್ನು ಅವಲಂಬಿಸಿಕೊಂಡು ಬಂದಿರುವಂತಹ ಉದಾಹರಣೆಗಳು ಮತ್ತು ಆಧಾರಗಳು ನಮಗೆ ಧಾರಾಳವೆನ್ನುವಷ್ಟು ವಿಫುಲವಾಗಿ ದೊರಕುತ್ತವೆ. ಇವೆಷ್ಟೇ ಬುದ್ಧತೆಯಿಲ್ಲದ ಕಾಲಘಟ್ಟಗಳಲ್ಲಿ ಹುಟ್ಟಿದರೂ ನಾನಾರೀತಿಗಳಲ್ಲಿ ರೂಪಾಂತರಗೊಳ್ಳುತ್ತಾ ತನ್ನ ಸ್ವರೂಪಗಳನ್ನು ಬದಲಿಸಿಕೊಳ್ಳುತ್ತಾ ಇಂದಿಗೂ ಚಾಲ್ತಿಯಲ್ಲಿವೆ.

ಈ ಮನುಷ್ಯ ಪ್ರಯತ್ನಕ್ಕೆ ಅತೀತವಾದ ಅವಲಂಬನೆಗಳು ದೇಶದಿಂದ ದೇಶಕ್ಕೆ, ಕಾಲದಿಂದ ಕಾಲಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನವಾಗಿಯೂ, ವೈವಿಧ್ಯಮಯವಾಗಿಯೂ ಇವೆ. ಇವುಗಳಲ್ಲಿ ಸರ್ವೇಸಾಧಾರಣವಾಗಿ ಮತ್ತು ವ್ಯಾಪಕವಾಗಿ ಕಾಣುವುದೆಂದರೆ 'ಪ್ರಾರ್ಥನೆ'. ಇದರ ನಂತರ ಕಾಣುವವೆಂದರೆ ಆರಾಧನೆ, ಆಹ್ವಾನನೆ, ನಿವೇದನೆ ಇತ್ಯಾದಿಗಳೊಡನೆ ಇತರ ಮಾಂತ್ರಿಕ ತಂತ್ರಗಳೂ ಇವೆ.

ಲಲಿತೆಯೆಂಬ ಪರಿಕಲ್ಪನೆಯನ್ನು ಅಥವಾ ದ ಪವರ್ ಆಫ್ ಸಬ್ ಕಾನ್ಷಸ್ ಮೈಂಡ್‌ನ ಕಾರ್ಯವೈಖರಿಯನ್ನು ತಿಳಿದುಕೊಳ್ಳುವ ಮುನ್ನ ಈ ಅವಲಂಬನೆಗಳ ಸ್ವರೂಪವನ್ನು ತಿಳಿದುಕೊಳ್ಳುವ ಅಗತ್ಯವಿದೆ.


ಪ್ರಾರ್ಥನೆ


ಬಹಳ ವ್ಯಾಪಕವಾಗಿರುವ ಈ ತಂತ್ರವು ನಾನಾರೀತಿಗಳಲ್ಲಿ ಅಭಿವ್ಯಕ್ತವಾದರೂ ದೈನ್ಯತೆಯಿಂದ ಕೂಡಿರುವುದೇ ಆಗಿದೆ. ಪ್ರಾರ್ಥಿಸುವವನು ತನ್ನನ್ನು ತಾನು ವಿನೀತನಾಗಿಸಿಕೊಂಡು, ತನಗಿಂತ ಮಿಗಿಲಾದ ವ್ಯಕ್ತಿ ಅಥವಾ ಶಕ್ತಿಯನ್ನು ತನ್ನ ಕಾರ್ಯಸಾಧನೆಗೆ ಸಹಕರಿಸಲು ಅಥವಾ ಅನುಗ್ರಹಿಸಲು ಬೇಡುವುದಾಗಿದೆ. ಪ್ರಾರ್ಥನೆಗಳನ್ನು ಒಮ್ಮೊಮ್ಮೆ ಕೆಲವು ಉದ್ದೇಶಗಳಿಗೆ ಜೋಡಿಸಿಕೊಂಡರೂ, ಕೆಲವು ಪ್ರಾರ್ಥನೆಗಳು ತನ್ನಲ್ಲೇ ಉದ್ದೇಶವನ್ನು ಒಳಗೊಂಡಿರುತ್ತದೆ. ಶಾಂತಿಮಂತ್ರದ ಅನೇಕ ಶ್ಲೋಕಗಳು, ಕ್ರಿಸ್ತರ "ಪರಲೋಕದಲ್ಲಿರುವ ತಂದೆಯೇ" ಅಥವಾ ಮುಸಲ್ಮಾನರ "ಅಲಹಂದುಲ್ಲಿಲ್ಲಾಹಿ ರಬ್ಬಿಲ್ಲ ಅಲ್-ಅಮೀನ್" ಪ್ರಾರ್ಥನೆಗಳು ನೇರವಾದ ಮತ್ತು ಸ್ಪಷ್ಟವಾದ ಉದ್ದೇಶಗಳನ್ನು ಒಳಗೊಂಡಿವೆ.

ಈ ಪ್ರಾರ್ಥನೆಗೆ ಸಂಬಂಧಪಟ್ಟಂತೆ ನಾನಾ ವ್ಯಾಖ್ಯಾನಗಳಿದ್ದರೂ, ತಾತ್ವಿಕವಾಗಿ ಮತ್ತು ಬೌದ್ಧಿಕವಾಗಿ ನನಗೆ ಸ್ವೀಕರಿಸಲು ಇಷ್ಟವಾಗುವ ವ್ಯಾಖ್ಯಾನವೆಂದರೆ ಅದು ಸಂತ ಫ್ರಾನ್ಸಿಸ್ ಡಿ ಸೇಲ್ಸ್‌ರವರದು. "ನಮ್ಮ ಅರಿವನ್ನು ದೇವರ ಬೆಳಕಿಗೆ ಮತ್ತು ಆವನ ಪ್ರೇಮದ ಮುದಕ್ಕೆ ತೆರೆದುಕೊಳ್ಳುವುದೇ ಪ್ರಾರ್ಥನೆ" (The prayer is opening our understanding to the brightness of God and warmth of his love) ಈ ವಾಕ್ಯದಲ್ಲಿ ಬೆಳಕು ಎನ್ನುವ ಶಬ್ದವನ್ನು ಅನುಗ್ರಹ ಅಥವಾ ಪ್ರಭಾವಕ್ಕೊಳಗಾಗುವಂತಹ ಪ್ರಭಾವಳಿ ಎಂದು ಅರ್ಥೈಸಿಕೊಂಡರೆ, ಪ್ರೇಮ ಎಂದರೆ ನಿರಪೇಕ್ಷ ಮತ್ತು ನಿಷ್ಪಕ್ಷಪಾತವಾಗಿ ಔದಾರ್ಯ ಮತ್ತು ಮಮತೆಯಿಂದ ನೀಡುವುದು. ಪ್ರೇಮದ ಕಾರ್ಯ ಸ್ವರೂಪವೇ ಮುಕ್ತ ಔದಾರ್ಯದಿಂದ ನಿಷ್ಕಾಮವಾಗಿ ಕೊಡುವುದು. ಇದೊಂದು ಬೌದ್ಧಿಕ ವಿಶ್ಲೇಷಣೆ. ಇರಲಿ, ಭಾರತಕ್ಕೆ ಈ ಪ್ರಾರ್ಥನೆ ಎಂಬುದು ಆರ್ಯರ ಕೊಡುಗೆ. ಆರ್ಯರು ತಮ್ಮ ಲೌಕಿಕ ಅಪೇಕ್ಷೆಯಿಂದ ಪ್ರಕೃತಿಯ ಮತ್ತು ಇತರ ಅಗೋಚರ ಶಕ್ತಿಗಳಿಗೆ ಅಹವಾಲನ್ನು ಮುಂದಿಡುತ್ತಿದ್ದರು. ಅದನ್ನು ನೆರವೇರಿಸು ಎಂದು ಪ್ರಾರ್ಥಿಸುತ್ತಿದ್ದರು. ನೆರವೇರಲಿ ಎಂಬ ಅಭಿಲಾಷೆಯೂ ತೀವ್ರವಾಗಿ ಅದರಲ್ಲಿ ವ್ಯಕ್ತವಾಗುತ್ತಿತ್ತು. ಪ್ರಾರ್ಥನೆ ವಿನಮ್ರವಾಗಿ ಬೇಡಿಕೊಳ್ಳುವ ಕ್ರಮವಾದರೆ, ಆರಾಧನೆಯು ಶಕ್ತಿಯ ಪರಿಕಲ್ಪನೆಯ ಪ್ರತಿಮೆಗಳನ್ನು ಆರಾಧಿಸುವುದಾಗುತ್ತದೆ. ಹಾಡಿ ಹೊಗಳುವುದು, ಆ ಶಕ್ತಿಯ ಗುಣ ಸ್ವರೂಪಗಳನ್ನು ಮೇಲಿಂದ ಮೇಲೆ ಹೇಳುತ್ತಾ (ಓಲೈಸುವ ಹಾಗೆ) ತಮ್ಮ ಕಾರ್ಯ ನೆರವೇರಿಸುವಂತೆ ಕೇಳಿಕೊಳ್ಳುವುದು. ಇದರಲ್ಲಿ ಹೂವು, ಹಣ್ಣು, ದೀಪ, ಧೂಪ, ಆಹಾರ ಇತ್ಯಾದಿಗಳನ್ನು ಸಮರ್ಪಿಸುವುದು ಸೇರುತ್ತದೆ. ತಮ್ಮ ಭಕ್ತಿ ಮತ್ತು ಪ್ರೀತಿಯ ಕುರುಹಾಗಿ ಹೂಗಳನ್ನು ಅರ್ಪಿಸುವುದು. ಪೂಜೆ ಎಂಬುದು ದ್ರಾವಿಡ ಮೂಲದ್ದಾಗಿದ್ದು, ಪೂ ಎಂದರೆ ಹೂ, ಅದನ್ನು ಅರ್ಪಿಸುವುದರ ಮೂಲಕ ತಮ್ಮ ಗೌರವವನ್ನು ಸೂಚಿಸುವುದು. ಅದರಲ್ಲೂ ಯಾವ ಶಕ್ತಿಯಿಂದ ತಮಗೆ ಲಭ್ಯವಾಗಿರುವುದೋ ಆ ಫಲವನ್ನು ಸಾಂಕೇತಿಕವಾಗಿ ಇದು ನಿನ್ನಿಂದಲೇ ಬಂದಿದ್ದು, ನಿನಗಾಗಿಯೇ ಎಂದು ತಮ್ಮ ಪ್ರತಿಮೆಗೆ ಅರ್ಪಿಸುವುದಾಗಿದೆ.

ಆಹ್ವಾನನೆ

ಆಹ್ವಾನನೆಯು ಬಹಳಷ್ಟು ಬುಡಕಟ್ಟುಗಳ ನೇರ ಆಚರಣೆಯಾಗಿದೆ. ಈ ವಿಧಾನದಲ್ಲಿ ಸಮುದಾಯದವರೆಲ್ಲರೂ ಒಟ್ಟಾಗಿ ತಮಗೆ ಅಗತ್ಯವಿರುವ ಪ್ರಕೃತಿಯ ವಿದ್ಯಮಾನವನ್ನು ಫಲಿಸಲಿ ಅಥವಾ ಸಂಭವಿಸಲಿ ಎಂದು ತೀವ್ರ ಭಾವದಿಂದ ಆಹ್ವಾನಿಸುತ್ತಾರೆ. ಈ ತಂತ್ರಗಾರಿಕೆಯು ಮತ್ತೊಂದು ರೀತಿಯ ಮಾಂತ್ರಿಕತೆ. ಮಾಂತ್ರಿಕತೆ ಎಂದರೆ ಕೆಲವು ರೀತಿಯ ಶಬ್ಧ ಅಥವಾ ಅಕ್ಷರಗಳ ಸಂಯೋಜನೆಯಿಂದ ಶಕ್ತಿ ಉಂಟಾಗುವುದು ಎಂದು ಅದನ್ನು ಕೆಲವು ಆಚರಣೆಗಳ ಸಮೇತ ಪ್ರಯೋಗಿಸಿದರೆ ಕಾರ್ಯಸಿದ್ಧಿಯಾಗುತ್ತದೆ ಎಂದು ನಂಬುಗೆ. ಮಾಂತ್ರಿಕತೆಯ ಮೂಲಮಂತ್ರ. ತಾಂತ್ರಿಕತೆಯ ಮೂಲ ತಂತ್ರ. ಮಂತ್ರವೂ ಕೂಡ ಒಂದು ತಂತ್ರವೇ. ಮಂತ್ರ ಮತ್ತು ತಂತ್ರಗಳು ಸೀಮಿತ ಅರ್ಥವ್ಯಾಪ್ತಿಯಲ್ಲಿರದೇ ಬಹು ವಿಸ್ತಾರವಾದ ವಿವರಣೆಗಳನ್ನು ಒಳಗೊಂಡಿದೆ. ತಂತ್ರ ಎಂದರೆ ಟೆಕ್ನಿಕ್ ಎಂಬ ಸರಳ ಅರ್ಥದಲ್ಲಿ ಎಲ್ಲದಕ್ಕಿಂತ ಅಥವಾ ಇವುಗಳೆಲ್ಲವನ್ನೂ ಕ್ರೋಢೀಕರಿಸುವಂತಹ ವಿಧಾನವನ್ನು ಲಲಿತೆಯ ಉಪಾಸನೆಯಲ್ಲಿ ಕಾಣುತ್ತೇವೆ. ಉಪಾಸನೆ ಎಂದರೆ ಪ್ರಾರ್ಥನೆ, ಆರಾಧನೆ, ಪೂಜೆ ಇವೆಲ್ಲದಕ್ಕಿಂತ ಮಿಗಿಲಾಗಿ ಕ್ರಿಯಾತ್ಮಕವಾಗಿಯೂ, ಭಾವನಾತ್ಮಕವಾಗಿಯೂ, ಸೈದ್ಧಾಂತಿಕವಾಗಿರುವ ತಾವು ಒಪ್ಪಿರುವ ಶಕ್ತಿಯೊಡನೆ ಅಥವಾ ಪರಿಕಲ್ಪನೆಯೊಡನೆ ಅವಿನಾಭಾವ ಸಂಬಂಧವನ್ನು ಕಾಯ್ದುಕೊಳ್ಳುವುದು. ಅದರಿಂದ ಉಂಟಾಗುವ ಉತ್ಪತ್ತಿ







ಅಥವಾ ಫಲಗಳನ್ನು ನಿಷ್ಕಾಮವಾಗಿ ಸ್ವೀಕರಿಸುತ್ತಾ ಹೋಗುವುದು. ಇಲ್ಲಿ ಕಾರ್ಯಸಿದ್ಧಿಯ ಅನುಗ್ರಹವಾಗಲಿ, ತೀವ್ರ ಸ್ವರೂಪದ ಬಯಕೆಗಳಾಗಲಿ ಇಲ್ಲದೇ ಪ್ರೇಮಭಾವದಲ್ಲಿ ಪರವಸ್ತುವಿನೊಂದಿಗೆ ತಾದ್ಯಾತ್ಮತೆಯನ್ನು ಹೊಂದುವುದು. ಪ್ರಾರ್ಥನೆ, ಆರಾಧನೆ, ಉಪಾಸನೆ, ಪೂಜೆ ಇತ್ಯಾದಿಗಳನ್ನು ಸಮಾನಾರ್ಥಕವಾಗಿ ಉಪಯೋಗಿಸುವ ವಾಡಿಕೆಯಿದ್ದರೂ ಆಚರಣೆಗಳಲ್ಲಿ ಗುರುತರವಾದ ವ್ಯತ್ಯಾಸಗಳಿವೆ. ಆದರೆ ಈ ಎಲ್ಲಾ ಪರಾವಲಂಬನೆ ಆಚರಣೆಗಳಲ್ಲಿ ಅಥವಾ ವಿಧಾನಗಳಲ್ಲಿರುವ ಸಾಮಾನ್ಯ ಅಂಶವೆಂದರೆ ಕರ್ತೃ ಕೇಂದ್ರಿತ, ಮಾಡುವ ವ್ಯಕ್ತಿಯ ಅಭಿಲಾಷೆ ಅದನ್ನು ನೆರವೇರಿಸಿಕೊಳ್ಳಬೇಕೆನ್ನುವ ಸಂಕಲ್ಪ, ಈ ಎಲ್ಲಾ ಬಗೆಯ ಕ್ರಿಯೆಗಳು ಆಧಾರಿತವಾಗಿರುತ್ತದೆ. ಇಷ್ಟು ತಿಳಿವಳಿಕೆಗಳ ಹಿನ್ನೆಲೆಯಲ್ಲಿ ದ ಪವರ್ ಆಫ್ ಸಬ್ ಕಾನ್ಷಸ್ ಮೈಂಡ್ ಅಥವಾ ಲಲಿತೆಯ ಮೂಲಕ ಕಾರ್ಯವನ್ನು ಸಿದ್ಧಿಸಿಕೊಳ್ಳುವಂತಹ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡಬಹುದು. ಇದರ ಪೂರ್ವಭಾವಿಯಾಗಿ ಕೆಲವು ಜೀವಂತ ನಿದರ್ಶನಗಳನ್ನು ಗಮನಿಸೋಣ.

ಸ್ವಾಮಿ ಸತ್ಯಾನಂದ ಸರಸ್ವತಿಯ ಪ್ರಯೋಗ

ಬಿಹಾರ್ ಸ್ಕೂಲ್ ಆಫ್ ಯೋಗ ಕೇಂದ್ರದ ರೂವಾರಿಗಳಾದ ಸ್ವಾಮಿ ಸತ್ಯಾನಂದ ಸರಸ್ವತಿಯವರು ಹೃಷಿಕೇಶದ ಸ್ವಾಮಿ ಶಿವಾನಂದ ಸರಸ್ವತಿಯವರ ಶಿಷ್ಯರು. ಅಧ್ಯಾತ್ಮ ಮತ್ತು ಯೋಗ ಸಾಧನೆಗಳಲ್ಲಿ ಅವರದು ಬಹು ವಿಫುಲವಾದ ಪ್ರಯೋಗ. ಅವರು ತಮ್ಮ ಯೋಗನಿದ್ರೆ ಎಂಬ ಕೃತಿಯಲ್ಲಿ ಕೆಲವು ಮನೋವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಪ್ರಯೋಗಗಳನ್ನು ಮಾಡಿದ್ದು, ಅವುಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಈ ನಮ್ಮ ಲೇಖನದ ವ್ಯಾಪ್ತಿಗೆ ಬರುವಂತಹ ಘಟನೆಗಳು ಎರಡು. ಒಂದು, ಅವರು ಒಮ್ಮೆ ಅವರ ಶಿಷ್ಯ ಸಮೂಹವು ಯಾವುದೋ ಸಣ್ಣ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದು, ಅವರು ಅತಿಥಿಗಳಾಗಿ ಕುಳಿತಾಗ ಕೆಲವು ಸೂಕ್ತಗಳನ್ನು ಹೊಸ ವಿದ್ಯಾರ್ಥಿಗಳು ಪಠಿಸಿದರು. ಆ ಕೃತಿಯು ಈ ಹಿಂದೆ ಅವರು ಎಂದೂ ಅಧ್ಯಯನ ಮಾಡಿರದಿದ್ದರೂ, ವಿದ್ಯಾರ್ಥಿಗಳು ಪಠಿಸುತ್ತಿದ್ದ ಋಕ್ಕುಗಳು ಅವರಿಗೆ ಆಶ್ಚರ್ಯ ಎನಿಸುವಷ್ಟು ಪರಿಚಿತವಾಗಿದ್ದವು. ಅದೂಅಲ್ಲದೇ ಮುಂದಿನ ಸಾಲುಗಳು ಕೂಡ ಅವರಿಗೆ ನೆನಪಿಗೆ ಬರುತ್ತಿದ್ದವು. ಬಾಹ್ಯ ಆಲೋಚನೆಯ ಪ್ರಕಾರ ಅವರು ಇದನ್ನು ಎಂದಿಗೂ ಕಲಿತಿರದಿದ್ದರೂ ಇದು ಹೇಗೆ ಸಾಧ್ಯವಾಯಿತು ಎಂದು ಸ್ವಾಮಿ ಸತ್ಯಾನಂದರು ತೀರಾ ತಲೆ ಕೆಡಿಸಿಕೊಂಡರು. ಸ್ವಲ್ಪ ಪೂರ್ವಾಪರ ವಿಚಾರಿಸಿಕೊಂಡ ಮೇಲೆ, ಸತ್ಯಾನಂದರು ಮಲಗುವ ಕೊಠಡಿಯ ಸಮೀಪದಲ್ಲಿ ಆ ವಿದ್ಯಾರ್ಥಿಗಳ ಅಧ್ಯಯನದ ಕೊಠಡಿಯಿದ್ದು, ಆ ವಿದ್ಯಾರ್ಥಿಗಳು ಬೆಳಗಿನ ಜಾವದಲ್ಲಿ ಎದ್ದು ಆ ಋಕ್ಕುಗಳನ್ನು ಪಠಿಸುತ್ತಿದ್ದರು. ಬೆಳಗಿನ ಜಾವ ಗಾಢ ನಿದ್ರೆಯಲ್ಲಿರುತ್ತಿದ್ದ ಸತ್ಯಾನಂದರ ಕಿವಿಗಳನ್ನು ಋತ್ವಿಕ್ಕುಗಳು ಹಾಡುತ್ತಿದ್ದ ಋಕ್ಕುಗಳು ಮುಟ್ಟುತ್ತಿದ್ದವು. ಜಾಗೃತಾವಸ್ಥೆಯಲ್ಲಿ ಸಂಪೂರ್ಣವಾಗಿ ನಿದ್ರಾವಶವಾಗಿದ್ದರೂ, ಸುಪ್ತಾವಸ್ಥೆಯಲ್ಲಿದ್ದ ಸುಪ್ತ ಚೇತನವು ಸದಾ ಜಾಗೃತವಾಗಿದ್ದು ಅದಕ್ಕೆ ವಿದ್ಯಾರ್ಥಿಗಳು ಮಾಡುತ್ತಿದ್ದ ಋಕ್ಕುಗಳ ಅಭ್ಯಾಸವಾಗಿತ್ತು. ಇದಾದನಂತರ ಸ್ವಾಮಿ ಸತ್ಯಾನಂದರು ಈ ಪ್ರಯೋಗವನ್ನು ಉದ್ದೇಶಪೂರ್ವಕವಾಗಿ ನಡೆಸಲು ನಿಶ್ಚಯಿಸುವ ಸಂಕಲ್ಪವನ್ನು ಮಾಡಿದರು.

ಅವರ ಆಶ್ರಮದಲ್ಲಿ ಒಬ್ಬ ಬಾಲಕನಿದ್ದು, ದಿನವಿಡೀ ಇಡೀ ಆಶ್ರಮದಲ್ಲಿ ದಾಂಧಲೆ ಎಬ್ಬಿಸುವುದೇ ಅವನ ಕೆಲಸವಾಗಿತ್ತು. ಅಕ್ಷರಶಃ ಕೋತಿಯಂತಿದ್ದ ಆ ಹುಡುಗನನ್ನು ದಾರಿಗೆ ತರುವುದು ಆಶ್ರಮವಾಸಿಗಳಿಗೆ ಅತ್ಯಂತ ದುಸ್ಸಾಹಸದ ವಿಚಾರವಾಗಿತ್ತು. ಸ್ವಾಮಿ ಸತ್ಯಾನಂದರು ಅವನು ಮಲಗಿದ ಮೇಲೆ ಮತ್ತು ಬೆಳಗಿನ ಹೊತ್ತು ಅವನು ಏಳುವ ಮುನ್ನ ಅವನು ನಿದ್ರಾವಸ್ಥೆಯಲ್ಲಿದ್ದಂತೆ ಪಾಠ ಮಾಡತೊಡಗಿದರು. ಸಂಸ್ಕೃತ, ಇಂಗ್ಲಿಷ್ ಮೊದಲಾದ ಭಾಷೆಗಳು, ವ್ಯಾಕರಣ, ಗಣಿತ ಇತ್ಯಾದಿ ವಿಷಯಗಳನ್ನು ಅವನಿಗೆ ಬೋಧಿಸಿದರು. ಫಲವಾಗಿ ಆ ಹುಡುಗ ಮುಂದೊಂದು ದಿನ ಅಮೆರಿಕೆಯ ಬಹುದೊಡ್ಡ ಯೂನಿವರ್ಸಿಟಿಯಲ್ಲಿ ಪ್ರೊಫೆಸರ್ ಆದನು. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಅವರು ಬೋಧಿಸಿದ್ದು ಎಚ್ಚರವಾಗಿದ್ದಂತಹ ಜಾಗೃತ ಮನಸ್ಸಿಗಲ್ಲ, ಆದರೆ ಸುಪ್ತಾವಸ್ಥೆಯಲ್ಲಿದ್ದಂತಹ ಮನಸ್ಸಿಗೆ. ಇದೊಂದು ಅಭೂತಪೂರ್ವ ಪ್ರಯೋಗ. ಅವರು ಯಶಸ್ವಿಯಾದರು. ಇದನ್ನು ಅವರು ಯೋಗನಿದ್ರೆ ಎಂದು ಕರೆದರು. ಇದೇ ಯೋಗವಿಜ್ಞಾನವನ್ನು ಧ್ಯಾನಕ್ಕೂ ಮತ್ತೂ ವ್ಯಕ್ತಿತ್ವ ನಿರ್ವಹಣೆಯಲ್ಲಿ ಬಹುಮುಖ್ಯವಾದ ತಂತ್ರವನ್ನಾಗಿ ಅನೇಕರು ಬಳಸುತ್ತಿದ್ದಾರೆ. ನಾನೂ ಕೂಡ ಇದೇ ತಂತ್ರವನ್ನು ಇನ್ನೂ ಗಂಭೀರವಾದಂತಹ ವಿಷಯಗಳಿಗೆ ಪ್ರಯೋಗಿಸಿದೆ ಮತ್ತು ಯಶಸ್ಸನ್ನೂ ಕಂಡಿದ್ದೇನೆ.

ವ್ಯಕ್ತಿಯು ನಿದ್ರಾವಸ್ಥೆಯಲ್ಲಿದ್ದಾಗ ಈ ಪ್ರಯೋಗವನ್ನು ಮಾಡುವ ಅಗತ್ಯವೇನು?

ಇದು ಬಹಳ ಮುಖ್ಯ ಪ್ರಶ್ನೆ. ವ್ಯಕ್ತಿಯು ಎಚ್ಚರವಾಗಿದ್ದ ಸಮಯದಲ್ಲಿ ಯಾವುದೇ ಸಂದೇಶವನ್ನು ಪಡೆದರೂ ಅದನ್ನು ತನ್ನ ಸುಪ್ತಚೇತನಕ್ಕೆ ಹೋಗಲು ಬಿಡದೇ ತನ್ನದೇ ಆದಂತಹ ಸಿದ್ಧ ಆಲೋಚನೆಗಳಿಂದ ಅವನ್ನು ತಡೆಯುತ್ತಾನೆ. ಅವನಿಗಿರುವ ಪೂರ್ವಾಗ್ರಹಗಳಿಂದ ಅಥವಾ ಸಿದ್ಧ ಮಾದರಿಯ ತನ್ನ ವ್ಯಕ್ತಿತ್ವದ ಪರಿಕಲ್ಪನೆಗಳಿಂದ ಸಂದೇಶ ಅಥವಾ ವಿಷಯಗಳನ್ನು ಎದುರಿಸುತ್ತಾನೆ. ಭಂಡತನದಿಂದ ವಿಷಯವನ್ನು ಸ್ವೀಕರಿಸದೇ ಮೊಂಡಾಟ ಮಾಡುತ್ತಾನೆ. ಹಾಗಾಗಿ ಸುಪ್ತಚೇತನಕ್ಕೆ ವಿಷಯಗಳು ಮುಟ್ಟುವುದಿಲ್ಲ, ಹಾಗೊಂದು ವೇಳೆ ಮುಟ್ಟಿದರೂ ಕೂಡ ಅದು ಅವನ ಸಾಧಾರಣವಾದ ಧೋರಣೆ ಮತ್ತು ಒಲವು-ನಿಲುವುಗಳನ್ನಷ್ಟೇ ಅವಲಂಬಿಸಿರುತ್ತದೆ. ಹಾಗಾದಾಗ ಅವನಿಗೆ ಅವನಲ್ಲಿ ನಿಜವಾದ ಸುಪ್ತಚೇತನದ ಶಕ್ತಿಯ ಬಳಕೆ ಆಗುವುದಿಲ್ಲ. ಯಾವುದನ್ನು ಸ್ವಾಮಿ ಸತ್ಯಾನಂದರು ಯೋಗನಿದ್ರೆ ಎಂದು ಕರೆದರೋ, ಅದನ್ನೇ ಜೋಸೆಫ್ ಮರ್ಫಿ ಆಟೋ ಸಜೆಷನ್ಸ್ ಎಂದು ಕರೆಯುತ್ತಾರೆ.

ಈ ಅಗತ್ಯವಿರುವ ಸಂದೇಶಗಳನ್ನು ಬೇರೆ ಯಾರೋ ಕೊಡುವುದಲ್ಲ, ಬದಲಾಗಿ ಉದ್ದೇಶಿತ, ವಾಂಛಿತ ಗುಣ ನಿರ್ವಹಣೆಯನ್ನು ತಾನೇ ಮಾಡಿಕೊಳ್ಳುವುದು. ತನಗೆ ಬೇಕಾದ ಚೈತನ್ಯವನ್ನು ತಾನೇ ಒದಗಿಸಿಕೊಳ್ಳುವುದು. ಅವರು ಹೇಳುವ ಪ್ರಕಾರ ಆ ಸುಪ್ತಚೇತನವು ಮಹಾಫಲವತ್ತಾದದ್ದು, ಹದವಾಗಿರುವಂತಹದ್ದು. ಅದರಲ್ಲಿ ಎಂತಹ ಬೀಜಗಳನ್ನು ಬಿತ್ತುತ್ತೇವೆಯೋ ಅದು ಅಂತಹ ಫಸಲನ್ನು ಯಥೇಚ್ಛವಾಗಿ ಬೆಳೆದು ನೀಡುತ್ತದೆ. ಬಿತ್ತಿದಂತೆ ಬೆಳೆ. ಸರಿಯಾಗಿರುವುದನ್ನೇ, ಅವಶ್ಯವಾಗಿರುವುದನ್ನೇ, ಸಕಾರಾತ್ಮಕವಾಗಿರುವುದನ್ನೇ ಬಿತ್ತಿ ಎನ್ನುವರು.

ಈ ಅಪೇಕ್ಷಿತ ಫಲಕ್ಕಾಗಿ, ಜೋಸೆಫ್ ಮರ್ಫಿ ಬಲು ಸೊಗಸಾಗಿ ಕೆಲವು ಪದಗುಚ್ಛಗಳನ್ನು ಕಟ್ಟಿಕೊಡುತ್ತಾರೆ. ಎಲ್ಲರೂ ಸಕಾರಾತ್ಮಕವಾಗಿರುವಂತಹವು. ಅವುಗಳನ್ನು ಪದೇ ಪದೇ ಹೇಳುವುದರಿಂದ ಅಥವಾ ಹೇಳಿಕೊಳ್ಳುವುದರಿಂದ ಆ ಪದಗಳು ಜಾಗೃತ ಮನಸ್ಸಿನಿಂದ ಆ ಸುಪ್ತಚೇತನಕ್ಕೆ ಇಳಿದು, ಅದು ತನ್ನಲ್ಲಿ ಬಿತ್ತಿರುವಂತಹ ಪದ ಬೀಜದ ಪ್ರಕಾರ ಬೆಳೆಯನ್ನು ಕೊಡುತ್ತದೆ.

ಈಗಾಗಲೇ ನಕಾರಾತ್ಮಕವಾದಂತಹ ಬಿತ್ತನೆಯಾಗಿರುವ ಪಕ್ಷದಲ್ಲಿ ಅದಕ್ಕೂ ಒಂದು ಸುಲಭ ಪರಿಹಾರ ನೀಡುತ್ತಾರೆ. ಪತಂಜಲಿಯ ಯೋಗಸೂತ್ರದ ತಂತ್ರವೊಂದರಂತೆ ವಿತರ್ಕಭಾವನೇ ಪ್ರತಿಪಕ್ಷಭಾವನಂ, ನಕಾರಾತ್ಮಕವಾದ ಚಿಂತನೆಯ ಎಡೆಯಲ್ಲಿ ಸಕಾರಾತ್ಮಕವಾದ ಚಿಂತನೆಯನ್ನು ಮರುಸ್ಥಾಪಿಸು, ರಿಪ್ಲೇಸ್ ಮಾಡು ಎನ್ನುವರು. ಇದೊಂದು ಸ್ವಪ್ರಯೋಗಕ್ಕೆ ಒಂದು ಅದ್ಭುತವಾದ ಅನುಭವ. ಸಂಪೂರ್ಣ ಮನೋವೈಜ್ಞಾನಿಕ ಪ್ರಯೋಗ.

ಇದನ್ನು ಸಾಧಿಸಲು ಜೋಸೆಫ್ ಮರ್ಫಿ ಹೇಳಿಕೊಡುವುದನ್ನು ಗಮನಿಸಿ: ನಿಮಗೆ ಯಾವ ಫಲಿತಾಂಶ ಬೇಕಾಗಿದೆ? ಆನಂದ ಮತ್ತು ತೃಪ್ತಿ. ಹಾಗಿದ್ದರೆ, ಯಾವುದೋ ಒಂದು ಕಾರ್ಯ ಸಾಧನೆಯ ಅಂತಿಮ ಫಲಿತಾಂಶ ಆನಂದ ಮತ್ತು ತೃಪ್ತಿಯಾಗಿರುವುದರಿಂದ, ನಿಮ್ಮ ಮನಸ್ಸಿನ ಪಟಲದಲ್ಲಿ ಆ ಕಾರ್ಯವು ಈಗಾಗಲೇ ನೆರವೇರಿರುವ ಹಾಗೇ ಭಾವಿಸಿಕೊಳ್ಳಿ. ಆ ಭಾವವು ನಿಮ್ಮಲ್ಲಿ ಆನಂದವನ್ನು ಉಂಟುಮಾಡುವುದು. ನೀವು ಕಲ್ಪಿಸಿಕೊಳ್ಳುವ ಅಥವಾ ಪದೇಪದೇ ಹೇಳಿಕೊಳ್ಳುವ ಕಾರ್ಯಸಾಧನೆಯನ್ನು ಭಾವುಕತೆಯ ಸಮೇತ ಚಿತ್ರಿಸಿಕೊಳ್ಳಿ. ಭಂಡತನದಿಂದ, ಪೂರ್ವಾಗ್ರಹಗಳಿಂದ ನಿಮ್ಮದೇ ಮನಸ್ಥಿತಿಯೊಡನೆ ಮೊಂಡಾಟ ಮಾಡುವ ಜಾಗೃತ ಮನಸ್ಸನ್ನು ಹಾದು ನಿಮ್ಮ ಗುರಿಯನ್ನು ತಲುಪಲು ಅದು ಸಾಧ್ಯ ಮಾಡುವುದು.

ನೀವೇ ನೀಡುವ ಭಾವನೆಯ ಗಮ್ಯವನ್ನು ಅದು ಸಾಧಿಸುವುದು. ನಕಾರಾತ್ಮಕ ಚಿಂತನೆಗೆ ಅಭ್ಯಾಸಬಲದಂತೆ ಒಯ್ಯುವ ಜಾಗೃತಚೇತನದ ಭಂಡತನವನ್ನು ಮೆಟ್ಟಿ. ಇದೇ ಜೋಸೆಫ್ ಮರ್ಫಿಯ ದ ಪವರ್ ಆಫ್ ಸಬ್ ಕಾನ್ಷಸ್ ಮೈಂಡ್‌ನ ಸಾರಾಂಶ ಮತ್ತು ಲಲಿತೆ ಮತ್ತು ಭಂಡಾಸುರನ ಯುದ್ಧದ ಕಥೆ.

ಭವಾನಿ ಭಾವನಾಗಮ್ಯ ಭವಾರಣ್ಯ ಕುಠಾರಿಕ

ಭದ್ರಪ್ರಿಯ ಭದ್ರಮೂರ್ತಿ ಭಕ್ತಸೌಭಾಗ್ಯದಾಯಿನಿ

ಜೋಸೆಫ್ ಮರ್ಫಿಯೂ ಇದನ್ನೇ ಹೇಳುವರು. ದ ಪವರ್ ಆಫ್ ಸಬ್ ಕಾನ್ಷಸ್ ಮೈಂಡ್ ಒಂದು ಜೇನುಮುಖಿ. ಆದರ ಸಹಜ ಸ್ವಭಾವಕ್ಕೆ ನಮ್ಮ ಆಲೋಚನಾ ಕ್ರಮವನ್ನು ಹೊಂದಿಸಿಕೊಂಡರೆ ಅದು ಸಹಜವಾಗಿಯೇ ಮೇಲ್ಮುಖವಾಗಿರುವುದು. ಪೂರ್ವಾಗ್ರಹಪೀಡಿತ ಆಲೋಚನೆಗಳೇ ನಮ್ಮನ್ನು ಕೆಳಮುಖವಾಗಿ ತಳ್ಳುವವು. ಅವೇ ಮೊಂಡಾಟ ಮಾಡುವುದು. ಈ ಜಾಗೃತ ಮನಸ್ಸನ್ನು ಸುಲಲಿತಗೊಳಿಸಿಕೊಂಡರೆ ಜೀವನೋತ್ಸಾಹ. ಇವಿಷ್ಟೇ ಲಲಿತೆಯ ಕಥೆಯ ಹೂರಣ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಲಲಿತಾ ಸಹಸ್ರನಾಮದ ಅರ್ಥಗಳನ್ನೂ, ಲಲಿತೋಪಖ್ಯಾನದ ಕಥೆಯನ್ನೂ ಗಮನಿಸಿದರೆ ಅರ್ಥ ಸ್ಪಷ್ಟ. ಇನ್ನೂ ಹೇಳತೊಡಗಿದರೆ ಅದು ಪುರಾಣದ ವಿಸ್ತರಣ. ●

ಗುಜರಾತ್ ಮಾದರಿ ಅಂದರೆ ಇದೇನಾ?

ಚುನಾವಣಾ ಪ್ರಚಾರದ ಆರಂಭದಲ್ಲಿ ನರೇಂದ್ರ ಮೋದಿಯ ಅಭಿವೃದ್ಧಿಯ ಮಾತುಗಳಿಗೆ ಮರುಳಾದ ಜನರಿಗೀಗ ಸತ್ಯದರ್ಶನ ಆಗಿರುವಂತಿದೆ. ಅದಕ್ಕೋಸ್ಕರವೇ ಆತನೀಗ ಅಭಿವೃದ್ಧಿಯ



ಮುಖವಾಡ ಕಳಚಿಟ್ಟು ಮತ್ತೆ ಅದೇ ಹಳೇ ಹಿಂದೂತ್ವ ರಾಗಕ್ಕೆ ಮರಳಿದ್ದಾನೆ. ಮೋದಿಯ ಢೋಂಗಿ 'ಅಭಿವೃದ್ಧಿ'ಯ ಒಂದು ಇಣುಕು ನೋಟ ಇಲ್ಲಿದೆ.

ಶಿಶುಮರಣ: ಅಭಿವೃದ್ಧಿಯ ಒಂದು ಮಾನದಂಡವೆಂದರೆ ಶಿಶುಮರಣಗಳ ಸಂಖ್ಯೆಯಲ್ಲಿ ಇಳಿಕೆ. ಆ ನಿಟ್ಟಿನಲ್ಲಿ ಗುಜರಾತಿನ ಸಾಧನೆ ಕಳಪೆ. ಅಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಶಿಶುಮರಣಗಳ ಪ್ರಮಾಣ ಜಾಸ್ತಿ ಇದೆ. ಪಟ್ಟಿಯಲ್ಲಿ ಗುಜರಾತಿಗೆ 14ನೆ ಸ್ಥಾನ. ನಗರ ಪ್ರದೇಶಗಳಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವಿದೆಯಾದರೂ ದೇಶದಲ್ಲಿ 10ನೆ ಸ್ಥಾನದಲ್ಲಿದೆ.

ಲಘು ಉದ್ದಿಮೆ: ಕಳೆದ 10 ವರ್ಷಗಳ ಅವಧಿಯಲ್ಲಿ 60,000 ಲಘು ಉದ್ದಿಮೆಗಳು ನೆಲಕಚ್ಚಿವೆ.

ಸಾಲದ ಹೊರೆ: 2001-02ರಲ್ಲಿ ರೂ. 45,301 ಕೋಟಿಗಳಷ್ಟಿದ್ದ ರಾಜ್ಯದ ಸಾಲ 2012ರ ಅಂತ್ಯಕ್ಕಾಗುವಾಗ ರೂ. 1,38,978 ಕೋಟಿಗಳಿಗೇರಿದೆ.

ಕೃಷಿ: 2005-06ರಿಂದ 2010-11 ವರೆಗಿನ ಅವಧಿಯಲ್ಲಿ ಕೃಷಿಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆ ಕೇವಲ 3.44%. ಆದರೆ ಶೇಕಡಾ 10ರಷ್ಟು ಬೆಳವಣಿಗೆ ಆಗಿದೆಯೆಂದು ಎಂದು ಅಪಪ್ರಚಾರ ಮಾಡಲಾಗುತ್ತಿದೆ.

ಗುಜರಾತಿನಲ್ಲಿ ರಸಗೊಬ್ಬರದ ಮೇಲೆ 5% ವ್ಯಾಟ್ ವಿಧಿಸಲಾಗುತ್ತಿದೆ. ಇಷ್ಟೊಂದು ಜಾಸ್ತಿ ದರ ಇನ್ಯಾವ ರಾಜ್ಯದಲ್ಲೂ ಇಲ್ಲ.

ಕೃಷಿಕಾರ್ಯಗಳಿಗೆ ವಿದ್ಯುತ್ ಸಂಪರ್ಕ ಕೋರಿ 4,55,885 ಅರ್ಜಿಗಳು ವಿಲೇವಾರಿಗಾಗಿ ಕಾಯುತ್ತಿವೆ (ಮಾರ್ಚ್ 2011ರ ವರೆಗೆ)

ಮಕ್ಕಳು: ಐದು ವರ್ಷ ವಯಸ್ಸಿಗಿಂತ ಕೆಳಗಿನ ಮಕ್ಕಳಲ್ಲಿ ಶೇಕಡಾ 44.6ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿವೆ. ಇವರ ಪೈಕಿ ಶೇಕಡಾ 70ರಲ್ಲಿ ರಕ್ತಹೀನತೆ ಇದ್ದರೆ ಶೇಕಡಾ 40ರಷ್ಟು ಮಕ್ಕಳ ತೂಕ ಇರಬೇಕಾದುದಕ್ಕಿಂತ ಕಡಮೆ ಇದೆ.

ಮಕ್ಕಳ ಅಪೌಷ್ಟಿಕತೆ ವಿಷಯದಲ್ಲಿ ಗುಜರಾತ್ ರಾಜ್ಯ ದೇಶದಲ್ಲಿ 15ನೇ ಸ್ಥಾನದಲ್ಲಿದೆ; ರಕ್ತಹೀನತೆ ವಿಷಯದಲ್ಲಿ 16ನೇ ಸ್ಥಾನದಲ್ಲಿದೆ.

ಮಹಿಳೆಯರು: ಅತ್ಯಧಿಕ ಸಂಖ್ಯೆಯ ಮಹಿಳೆಯರು ತೀವ್ರ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಈ ವಿಷಯದಲ್ಲಿ ಗುಜರಾತ್‌ಗೆ ದೇಶದಲ್ಲಿ ಕೊನೆಯ ಸ್ಥಾನ.

ಮಹಿಳೆಯರ ಮೇಲೆ ಸರಾಸರಿ ಪ್ರತಿ ಮೂರು ದಿನಕ್ಕೊಂದರಂತೆ ಅತ್ಯಾಚಾರ ನಡೆಯುತ್ತದೆ.

ಶಿಕ್ಷಣ: ಎಂಟು ಜಿಲ್ಲೆಗಳು ಮತ್ತು ಮೂರು ತಾಲೂಕುಗಳಲ್ಲಿ ಬರೋಬ್ಬರಿ 2494 ಶಿಕ್ಷಕರ ಕೊರತೆ ಇದೆ.

ಇನ್ನು ನಾಲ್ಕು ಜಿಲ್ಲೆಗಳಲ್ಲಿ ಕೇವಲ ಒಬ್ಬರು ಅಥವಾ ಇಬ್ಬರು ಶಿಕ್ಷಕರಿರುವಂತಹ 978 ಶಾಲೆಗಳಿವೆ.

ಶೌಚಾಲಯ: ಗ್ರಾಮೀಣ ಪ್ರದೇಶಗಳ ಶೇಕಡಾ 67ರಷ್ಟು ಮನೆಗಳಲ್ಲಿ ಶೌಚಾಲಯಗಳಿಲ್ಲ.

ಆರೋಗ್ಯ: 1990-95ರ ಅವಧಿಯಲ್ಲಿ ಆರೋಗ್ಯಕ್ಷೇತ್ರದಲ್ಲಿ ಸರ್ಕಾರದ ಹೂಡಿಕೆ 4.25% ಇದ್ದರೆ 2005-10ರ ಅವಧಿಯಲ್ಲಿ ಆಗಿರುವ ಹೂಡಿಕೆ ಬರೀ 0.77%.

ಬಡತನ: 2001ರಲ್ಲಿ ಶೇಕಡಾ 32ರಷ್ಟಿದ್ದ ಬಡವರ ಸಂಖ್ಯೆ ಈಗ (20) ಶೇಕಡಾ 40ಕ್ಕೇರಿದೆ.

ನಿರುದ್ಯೋಗ: ರಾಜ್ಯದಲ್ಲಿ ಒಟ್ಟು 30 ಲಕ್ಷ ನಿರುದ್ಯೋಗಿಗಳಿದ್ದಾರೆ. ಇನ್ನು ಸುಶಿಕ್ಷಿತ ನಿರುದ್ಯೋಗಿ ಯುವಕರ ಸಂಖ್ಯೆ 10 ಲಕ್ಷದಷ್ಟಿದೆ. ಕಳೆದ 12 ವರ್ಷಗಳ ಅವಧಿಯಲ್ಲಿ ಹೊಸ ನೇಮಕಾತಿಗಳು ಇಲ್ಲವೇ ಇಲ್ಲವೆನ್ನುವಷ್ಟು ಕಮ್ಮಿ.

ದಲಿತರು: ಮಲಹೊರುವ ಪದ್ಧತಿ, ಅಸ್ಪೃಶ್ಯತೆ ಇತ್ಯಾದಿಗಳು ವ್ಯಾಪಕವಾಗಿವೆ. ದಲಿತ ದೌರ್ಜನ್ಯ ಪ್ರಕರಣಗಳನ್ನು ದಾಖಲಿಸಬಾರದೆಂದು ಪೊಲೀಸರಿಗೆ ಸೂಚನೆ ನೀಡಲಾಗಿದೆ.

ಅಲ್ಪಸಂಖ್ಯಾತರು: ಕೇಂದ್ರಕ್ಕೆ ಪ್ರಸ್ತಾಪವನ್ನೆ ಸಲ್ಲಿಸದಿರುವ ಕಾರಣ 52,260 ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸಿಕ್ಕಿಲ್ಲ.

ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ 12ರಷ್ಟಿರುವ ಮುಸ್ಲಿಮರಲ್ಲಿ ಅತ್ಯಧಿಕ ಜನ ಬಡವರು. 2002ರ ನಂತರ ಹೆಚ್ಚಿನವರು ಪ್ರತ್ಯೇಕ ಸ್ಲಂಗಳಲ್ಲಿ ವಾಸಿಸುತ್ತಿದ್ದಾರೆ. ಹೆಚ... ಅಲ್ಪಸಂಖ್ಯಾತರು ಬ್ಯಾಂಕ್ ಸಾಲದ ಸೌಲಭ್ಯದಿಂ... ವಂಚಿತರಾಗಿದ್ದಾರೆ.

2002ರ ಹತ್ಯಾಕಾಂಡ: 2002ರ ನರಮೇಧ... ಸಂಬಂಧಪಟ್ಟ 1958 ಪ್ರಕರಣಗಳ ಮರುವಿಚಾರ... ನಡೆಸಬೇಕೆಂದು ಸುಪ್ರೀಂಕೋರ್ಟ್ ಆದೇಶ ನೀಡಿ... ಯಾದರೂ ಕೇವಲ 117 ಪ್ರಕರಣಗಳ ಆರೋಪಿಗಳನ್ನ... ಬಂಧಿಸಲಾಗಿದೆ.

ಪ್ರಜಾತಾಂತ್ರಿಕ ಸಂಸ್ಥೆಗಳು: ಕಳೆದ 10 ವರ್ಷಗಳಿಂ... ವಿಧಾನಸಭಾ ಉಪಸ್ಪೀಕರ್ ಹುದ್ದೆ ಖಾಲಿ ಬಿದ್ದಿದೆಯೆಂ... ಗುಜರಾತಿನಲ್ಲಿ ಪ್ರಜಾಪ್ರಭುತ್ವಕ್ಕೆ ಕೊಡುವ ಬೆಲೆ ಎಷ್ಟೆಂ... ನೀವೇ ಊಹಿಸಿ.


ಸದನ ಕಲಾಪಗಳು ವರ್ಷಕ್ಕೆ ಕೇವಲ 30-32 ... ನಡೆಯುತ್ತವೆ.

ಭ್ರಷ್ಟಾಚಾರ: 10 ವರ್ಷಗಳ ಕಾಲ ಲೋಕಾಯುಕ್ತರ... ನೇಮಕ ಮಾಡಲಾಗಿಲ್ಲವೆಂದರೆ ಅದರರ್ಥ ವ್ಯಾ... ಭ್ರಷ್ಟಾಚಾರಕ್ಕೆ ಹಸಿರು ನಿಶಾನೆ ತೋರಿಸಿದಂತಲ್ಲವೇ?

(JAVAB, ಜನವಾದಿ ವಿಚಾರ ಆಂದೋಳನ ಭಾ... ನವದೆಹಲಿ)

ಬೂಸಿ ಬಸ್ಯ... ಮೋಡಿ!

25



ಪೂಜಾರಿಯನ್ನು ಸೋಲಿಸಿದ್ದು ರಾಜೀವ್ ಗಾಂಧಿ


ಕರಾವಳಿ ಕಾಂಗ್ರೆಸ್‌ನ ಹಳೆ ಹುಲಿ ಜನಾರ್ದನ ಪೂಜಾರಿಗೆ ಈ ಬಾರಿ ಚುನಾವಣೆ ಗೆಲ್ಲುವ ಪ್ರಬಲ ವಿಶ್ವಾಸವಿತ್ತು, ಜೊತೆಗೆ ಗೆಲ್ಲಲೇಬೇಕಾದ ಅನಿವಾರ್ಯತೆಯೂ ಇತ್ತು (ಇಲ್ಲವಾದಲ್ಲಿ, ಈಗಾಗಲೇ ಔಟ್ ಡೇಟೆಡ್ ಎನಿಸಿಕೊಂಡು ಈಗ ಅದು ಪಕ್ಕಾ ಎನಿಸಿಕೊಳ್ಳುವ ಭಯ). ಈ ಕಾರಣಕ್ಕೆ ಸಾಂದರ್ಭಿಕವಾಗಿ ಮುಖಾಮುಖಿಯಾದ ವೀರೇಂದ್ರ ಹೆಗ್ಗಡೆ ಹಾಗು ಕಲ್ಲಡ್ಕ ಭಟ್ಟರನ್ನು ಎದುರುಹಾಕಿಕೊಳ್ಳದೇ ನಾಜೂಕಾಗೇ ಪೂಜಾರಿ ಅವರೊಡನೆ ವ್ಯವಹರಿಸಿದ್ದರು. ಹಳೇ ಕಾಲದ ಪಾರ್ಟಿಯಾಗಿರುವ ಕಾಂಗ್ರೆಸ್‌ನಲ್ಲಿ ಕಚ್ಚಾಟ, ಕಾಲೆಳೆಯುವುದೆಲ್ಲ ಮಾಮೂಲು. ಆದರೆ ಪೂಜಾರಿಯ ವಿರೋಧಿ ಪಾರ್ಟಿಯಲ್ಲೇ ಈ ಕಾಲೆಳೆದಾಟ (ಪಿಪಿ ಹೆಗ್ಡೆ, ಪ್ರಭು, ನಳಿನ್ ಕುಮಾರ್ ಇತ್ಯಾದಿ) ತೀರಾ ಅತಿ ರೇಕಕ್ಕೆ ಹೋಗಿದ್ದರಿಂದ ಅದು ಪೂಜಾರಿಗೆ ಒಂದು ಅನಿರೀಕ್ಷಿತ ವರದಾನವಾಗಿ ಗೋಚರಿಸಿತ್ತು. ಇಷ್ಟೆಲ್ಲಾ ಅನುಕೂಲತೆ ಇದ್ದೂ ಪೂಜಾರಿ ಗೆಲ್ಲುವುದು ಬಿಡಿ, ಇದ್ದಬದ್ದ ಸಮೀಕ್ಷೆಗಳನ್ನೆಲ್ಲಾ ತಲೆಕೆಳಗುಮಾಡಿ ಭಾರೀ ಅಂತರದ ಸೋಲನ್ನ ಅನುಭವಿಸಬೇಕಾಗಿ ಬಂತು.

ಮಂಗಳೂರು ಕ್ಷೇತ್ರದಲ್ಲಿ ಪೂಜಾರಿಗೆ ಸಿಕ್ಕ ಓಟುಗಳನ್ನು ಲೆಕ್ಕ ಹಾಕಿದರೆ ಅವರ ಜಾತಿಯ ಜನರೇ ಅವರಿಗೆ ಓಟು ಹಾಕದೇ ಹೆಸರು ಕೆಡಿಸಿಕೊಂಡ ನಳಿನ್‌ಗೆ ಓಟು ಹಾಕಿರುವುದು ಸ್ಪಷ್ಟವಾಗುತ್ತದೆ. ಹಾಗಾದರೆ ಇಲ್ಲಿ ಲೆಕ್ಕಾಚಾರಗಳನ್ನು ಉಲ್ಟಾ ಮಾಡಿದಂತಹ ಅಂಶವಾದರೂ ಏನು? ಸಂಸದನಾಗಿದ್ದುಕೊಂಡು ಬರೀ ಜೀರ್ಣೋದ್ಧಾರ, ಬ್ರಹ್ಮ ಕಲಶ, ಅದೂ ಇದೂ ಎಂದೆಲ್ಲ ಸುತ್ತಾಡುತ್ತಿದ್ದ, ಮಾಡಬೇಕಿದ್ದ ಕೆಲಸವನ್ನು ಮಾಡದೆ ಸ್ಥಳೀಯವಾಗಿ ತನ್ನ ಪಕ್ಷೀಯರಿಂದಲೇ ಹೆಸರನ್ನು ಕೆಡಿಸಿಕೊಂಡಿದ್ದ ನಳಿನ್ ಕುಮಾರ್‌ಗೆ ಪಾಸ್ (ಅಲ್ಲ ಡಿಸ್ಟಿಂಕ್ಷನ್) ನೀಡಿದವರಾದರೂ ಯಾರು? ಅದು ಬೇರ್‍ಯಾರೂ ಅಲ್ಲ, ಹೊಸ ಉಮೇದಿನ ಕಾಲೇಜು ವಿದ್ಯಾರ್ಥಿವಿದ್ಯಾರ್ಥಿನಿಯರು.

ಅವರಷ್ಟೇ ಅಲ್ಲ, ಹದಿನೆಂಟರಿಂದ ಆರಂಭಿಸಿ ಇಪ್ಪತ್ತೈದು ವರ್ಷ ವಯಸ್ಸಿನ ಬಹುತೇಕ ಸಂಖ್ಯೆಯ ಯುವಜನತೆ ಮತ ಒತ್ತಿದ್ದು ನಳಿನ್ ಕುಮಾರ್‌ಗೇ ವಿನಹ ಪೂಜಾರಿಗಲ್ಲ. ಇದಕ್ಕೆ ಕಾರಣವೂ ಇದೆ. ನಿಜ ಹೇಳಬೇಕೆಂದರೆ ಕರಾವಳಿಯಲ್ಲಿ ಹೇಳಿಕೊಳ್ಳುವಂತಹ ಮೋದಿ ಪರ ಯಾವ ಅಲೆಯೂ ಇದ್ದಿರಲಿಲ್ಲ, ವರ್ಷದ ಹಿಂದೆ ವಿಧಾನಸಭಾ ಚುನಾವಣೆಯಲ್ಲಿ ಮೋದಿ ಮಂಗಳೂರಿಗೆ ಬಂದ ಕಾರಣಕ್ಕೆ ಬಿಜೆಪಿಯ ಭದ್ರಕೋಟೆಯೇ ಇಲ್ಲಿ ಚೂರುಚೂರಾಗಿತ್ತು, ಆಗ ಜಿಂತಂತಹ ನಾಯಕರೂ ಸ್ಥಳೀಯವಾಗಿ ಎಲ್ಲರಿಗೂ ಸಲ್ಲುವಂತಹ ನಾಯಕರಾಗಿದ್ದರು. ಆದರೆ ಪೂಜಾರಿ ಎಂಥಾ ಶುದ್ಧಾತಿಶುದ್ಧ ವ್ಯಕ್ತಿಯೇ ಆಗಿದ್ದರೂ ಕೂಡ ಇಂದಿನ ಪೀಳಿಗೆಯ ಯುವ ಜನತೆಗೆ ಅವರೊಬ್ಬ ಆಂಟಿಕ್ ಪೀಸ್‌ನಂತೆ ತೋರಿದರು.

ದುರದೃಷ್ಟವಶಾತ್ ಸಜ್ಜನ ಪೂಜಾರಿಯ ವಿರುದ್ಧ ವ್ಯವಸ್ಥಿತ ಅಪಪ್ರಚಾರವನ್ನು ನಡೆಸಲಾಯಿತಲ್ಲದೆ, ಯುವಜನತೆ ಹೆಚ್ಚಾಗಿ ಬಳಸುವ ಇಂಟರ್‌ನೆಟ್ ಮಾಧ್ಯಮದಲ್ಲಿ ಮೋದಿಯನ್ನು ಇನ್ನಿಲ್ಲದಂತೆ ಬಿಂಬಿಸುತ್ತಾ ಯುವಜನತೆಯನ್ನು ಆರೆಸ್ಸೆಸ್ ಪಡೆ ಖೆಡ್ಡಕ್ಕೆ ತಳ್ಳಿತು. ಇವೆಲ್ಲದರ ಪರಿಣಾಮ ಪೂಜಾರಿಯವರ ಮೇಲಾದದ್ದು ಸ್ಪಷ್ಟ.

ಸಾಮಾಜಿಕ ಅನುಭವದ ಸಹಜ ಕೊರತೆಯಿರುವ ಯುವಜನತೆ ಸುಲಭದಲ್ಲಿ ಬಣ್ಣನೆಯ ಮಾತುಗಳಿಗೆ, ಛಮಕ್ಕಿನ ಪ್ರಚಾರಕ್ಕೆ, ದುರುದ್ದೇಶದ ಅಪಪ್ರಚಾರಗಳಿಗೆ ಬಲಿ ಬೀಳುತ್ತಾರೆ. ಇಂತವರಿಗೆ ಬಡವರ ಕಾಳಜಿಯ ಪೂಜಾರಿಗಿಂತ "ಕಣ್ಕಟ್ಟಿನ ಜಾದೂಗಾರ" ಮೋದಿಯೇ ಹೆಚ್ಚು ಆಕರ್ಷಕವಾಗಿ ಕಂಡಿದ್ದು ಅಚ್ಚರಿಯೇನಲ್ಲ.



ಅಂದಹಾಗೆ, 21 ವಯಸ್ಸಿನ ಮತದಾನದ ಹಕ್ಕನ್ನು 18ಕ್ಕೆ ಇಳಿಸಿದ್ದು ಇದೇ ಕಾಂಗ್ರೆಸ್‌ನ ರಾಜೀವ್ ಗಾಂಧಿ ತಾನೆ? ಅದರ ಫಲವನ್ನು ಮಂಗಳೂರಿನ ಪೂಜಾರಿ ಇವತ್ತು ಉಂಡರು ಅಷ್ಟೆ.

-ಅವಿನಾಶ್ ಎಂ.ಎಸ್. ನೆಲ್ಲಿಕಾರ್

ಕೃಷ್ಣ ಮಠದ ಸಂಚು

ಕಳೆದ ವಾರದ ಸಂಚಿಕೆಯಲ್ಲಿ ಅವಿನಾಶ್ ಎಮ್.ಎಸ್ ಅವರು 'ವೈದಿಕರ ಖೆಡ್ಡದಲ್ಲಿ ಬಂಟ ಜಾತಿಯವರು' ಎಂದು ಬರೆದದ್ದು ಸರಿಯಾದದ್ದೇ ಆಗಿದೆ. ಬಂಟ ಜಾತಿಯವರಿಂದ ತಮಗೆ ಬರುತ್ತಿರುವ ಕೋಟ್ಯಾಂತರ ಕಾಣಿಕೆ ಹಣ ಎಲ್ಲಿ ನಿಂತು ಹೋಗುತ್ತದೋ ಎಂಬ ಭಯದಿಂದ ಒಂದೆಡೆ ಉಡುಪಿ ಸ್ವಾಮೀಜಿಗಳು ಬಂಟರ ತುಷ್ಟೀಕರಣಕ್ಕೆ ಇಳಿದಿದ್ದರೆ, ಇನ್ನೊಂದೆಡೆ ಬಂಟ ಜಾತಿಯವರ ಹೆಸರು ಕೆಡಿಸಿ ಇತರ ಶೂದ್ರ ಜಾತಿಗಳ ಸಹಾನುಭೂತಿ ಗಳಿಸಲು ಹುನ್ನಾರು ನಡೆಸುತ್ತಿದ್ದಾರೆ.

ಈ ಹುನ್ನಾರಿನ ಭಾಗವಾಗಿ ಮೇ 15 ರ 'ಕನ್ನಡ ಪ್ರಭ' ಎಂಬ ಪಕ್ಕಾ ವೈದಿಕ ಪತ್ರಿಕೆಯಲ್ಲಿ 'ಕೃಷ್ಣ ಮಠಕ್ಕೆ ಭೂಗತ ದೊರೆ ವಿಶ್ವನಾಥ ಕೊರಗ ಶೆಟ್ಟಿಯಿಂದ ಬೆದರಿಕೆ ಕರೆ' ಎಂಬ ಸುಳ್ಳು ಸುದ್ದಿ ಪ್ರಕಟವಾಗಿದೆ. ಆಧಾರರಹಿತವಾದ ಈ ಸುದ್ದಿಯನ್ನು ಕೃಷ್ಣ ಮಠದೊಳಗಿನ ಸ್ಥಾಪಿತ ಹಿತಾಸಕ್ತಿಗಳು ಆ ಪತ್ರಿಕೆಯಲ್ಲಿ ಹಾಕಿಸಿದೆ ಎಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ವನಿತಾ ಶೆಟ್ಟಿಯ ಪ್ರಕರಣದ ನಂತರ ಕೃಷ್ಣ ದೇವಸ್ಥಾನದೊಳಗಿನ ಪಂಕ್ತಿ ಭೇದಕ್ಕೆ ಎಲ್ಲಾ ಕಡೆಯಿಂದ ಟೀಕೆಗಳ ಮಹಾಪೂರವೇ ಹರಿದುಬರುತ್ತಿರುವುದರಿಂದ ಸಾಮಾನ್ಯ ಜನರ ಸಹಾನುಭೂತಿ ಗಳಿಸಲು ಕೃಷ್ಣ ಮಠದವರು ಈ ತಂತ್ರ ಹೂಡಿರುವುದು ಸ್ಪಷ್ಟ.

ನಿಜವಾಗಿ ಇಂತಹದೊಂದು ಭೂಗತ ಬೆದರಿಕೆ ಕರೆ ಬಂದಿದ್ದರೆ ಮಂಗಳೂರಿನ ಮರುದಿನದ ಸಂಜೆ ಪತ್ರಿಕೆಗಳು ಈ ಬಗ್ಗೆ ದೊಡ್ಡ ದೊಡ್ಡ ತಲೆಬರಹದಿಂದ ಚೀರಾಡುತ್ತಿದ್ದವು. ಆದರೆ ಅಂದಿನ ಯಾವುದೇ ಸಂಜೆ ಪತ್ರಿಕೆಯಲ್ಲೂ ಈ ಬಗ್ಗೆ ಒಂದು ಅಕ್ಷರವೂ ಇಲ್ಲ. ಅಂದರೆ ವಿ.ಭಟ್ಟರ ಈ ಸುದ್ದಿ ಶುದ್ಧ ಸುಳ್ಳು ಎಂದು ಸಾಬೀತಾಗುತ್ತದೆ.

ನಿಜವಾಗಿಯೂ ಭೂಗತ ದೊರೆಯೊಬ್ಬನಿಂದ ಬೆದರಿಕೆ ಕರೆ ಬಂದಿದ್ದರೆ ಕೃಷ್ಣ ಮಠದವರೇ ತಕ್ಷಣ ಪೊಲೀಸರಿಗೆ ದೂರು ಕೊಟ್ಟು, ಅದರ ವಿವರಗಳನ್ನು ಪೊಲೀಸರೇ ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಿದ್ದರು.

ಆ ಭೂಗತದೊರೆ ವಿಶ್ವನಾಥ ಕೊರಗ ಶೆಟ್ಟಿ... ಯಾವುದೇ ಜಾತಿಮತ ಭೇದ ನೋಡದೇ ಎಲ್ಲ... ಸುಲಿಯುತ್ತಾನೆ, ಎಲ್ಲರನ್ನು ಕೊಲೆ ಮಾಡಿಸುತ್ತಾನೆ. ಅ... ತನ್ನದೇ ಬಂಟರ ಜಾತಿಯ ಎಷ್ಟೋ ಜನರ ಕೊ... ಮಾಡಿಸಿದ್ದಾನೆ. ಭೂಗತ ದೊರೆಗಳಿಗೆ ಜಾತಿ ಧ... ಎಂಬುದೇ ಇರುವುದಿಲ್ಲ, ಅವನ ಗ್ಯಾಂಗಿನಲ್ಲಿ ಬ್ರಾ... ಜೈನರ ಸಹಿತ ಎಲ್ಲಾ ಜಾತಿಯ ಕ್ರಿಮಿನಲ್ಲುಗಳಿ... ಜೈನ ವಕೀಲನೊಬ್ಬ ಈ ಭೂಗತ ದೊರೆಯ ಪಂಟರ... ಶಾಶ್ವತ ವಕೀಲ. ಅಂತಹ ಮನುಷ್ಯತ್ವವೇ ಇಲ್ಲದ ಶತ... ಭೂಗತ ವ್ಯಕ್ತಿ ಕೇವಲ ತನ್ನ ಜಾತಿಯ ಅಭಿಮಾನ... ಕೃಷ್ಣ ಮಠದ ಸಿಬ್ಬಂದಿಗೆ ಬೆದರಿಕೆ ಕರೆ ಮಾಡು... ಎಂಬ ಕಲ್ಪನೆಯೇ ಶುದ್ಧ ಮೂರ್ಖತನದ್ದು.

ಉಡುಪಿ ಕೃಷ್ಣ ಮಠದವರು ಇತರ ಜಾತಿಯವ... ಬಂಟರ ವಿರುದ್ಧ ಎತ್ತಿ ಕಟ್ಟುವ ಸಲುವಾಗಿ ಈ ಭೂ... ದೊರೆಯ ಹೆಸರು ಉಪಯೋಗಿಸಿದ್ದಾರೆ ಹಾಗೂ ವ... ಶೆಟ್ಟಿ ಎಂಬ ಬಂಟ ಮಹಿಳೆಯಿಂದಾಗಿ ಈಗ ಇಕ್ಕ... ಸಿಕ್ಕಿ ಬಿದ್ದಿರುವ ಕೃಷ್ಣ ಮಠದವರು ಆ ಇಕ್ಕಟ್ಟಿನಿಂದ ... ಬರಲು ಮತ್ತು ಇತರ ಶೂದ್ರ ಜಾತಿಗಳ ಸಹಾನು... ಗಳಿಸಲು ಬಂಟರ ಜಾತಿಯ ಡಾನ್‌ನಿಂದ ಕೃಷ್ಣ ಮಠದ... ಭೂಗತ ಬೆದರಿಕೆ ಕರೆ ಬಂದಿರುವ ಖೋಟಾ ... ಕನ್ನಡ ಪ್ರಭದಂತಹಾ ವೈದಿಕ ಪತ್ರಿಕೆಯಲ್ಲಿ ಹಾಕಿ... - ಎಂದು ಎಲ್ಲರಿಗೂ ಸುಲಭವಾಗಿ ಅರ್ಥವಾಗು...

ದ.ಕ ಮತ್ತು ಉಡುಪಿ ಜಿಲ್ಲೆಗಳಲ್ಲಿ ತುಂಬಾ ಕ... ಪ್ರಸಾರವಿರುವ ಕನ್ನಡ ಪ್ರಭ ಪತ್ರಿಕೆಯಲ್ಲಿ... ದುರುದ್ದೇಶಪೂರಿತ ಸುದ್ದಿ ಬಂದಿರುವುದರಿಂದ ಬ... ಹೆಚ್ಚು ತಲೆ ಕೆಡಿಸಿಕೊಂಡಿಲ್ಲ ಎಂಬುದು ಬೇರೆ ವಿ...


- ರವಿ ಬಿ. ಶೆಣೈ, ಮಂಗಳ...

ಜನಪರವಾದ ಲಂಕೇಶ್ ತಂಡ

'ಲಂಕೇಶ್ ತಂಡ'ವು ತನ್ನ ಚುನಾವಣಾ ಸ... ತಪ್ಪಾಗಿರುವುದನ್ನು ಒಪ್ಪಿಕೊಂಡಿದೆ. ಆದರೆ ನಿಮ್ಮ ... ಸದಾ ಸತ್ಯ ಮತ್ತು ನ್ಯಾಯದ ಪರವಾಗಿರುವುದು ಹೆ... ಸಂಗತಿ. ಪ್ರಜಾಪ್ರಭುತ್ವದಲ್ಲಿ ನೂರರಲ್ಲಿ ಐವತ್ತೊಂದು... ಹೇಳಿದ್ದೇ - ಅದು ಜನರಿಗೆ ಅನ್ಯಾಯವಾಗುವ... ಹೇಳಿಕೆಯಾಗಿದ್ದರೂ -ಗೆಲ್ಲುತ್ತದೆ. ಆ ಕಾರಣಕ್ಕೇ ಈ ಬ... ಸಂಸತ್ತಿನಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ ಕಡಿಮೆಯ...

ಹ್ಯಾಪಿ ಬರ್ತ್ ಡೇ ಟು ಕರಣ್ ಜೋಹರ್

'ಕುಚ್ ಕುಚ್ ಹೋತಾ ಹೈ', 'ಕಭಿ ಖುಷಿ ಕಭಿ ಘಮ್', 'ಮೈ ನೇಮ್ ಇಸ್ ಖಾನ್', 'ಕಭಿ ಅಲ್ವಿದ ನ ಕೆಹನ' ತರಹದ ಚಿತ್ರಗಳನ್ನು ನಿರ್ದೇಶಿಸಿ, 'ಕಲ್ ಹೋ ನ ಹೋ', 'ದೋಸ್ತಾನ', 'ಏ ಜವಾನಿ ಹೈ ದಿವಾನಿ' ತರಹದ ಚಿತ್ರಗಳನ್ನು ನಿರ್ಮಾಣ ಮಾಡಿರುವ ಕರಣ್ ಜೋಹರ್ ಮೇ 25ರಂದು ತಮ್ಮ 42ನೇ ವಯಸ್ಸಿಗೆ ಕಾಲಿಡುತ್ತಿದ್ದಾರೆ. ಆ ನೆಪದಲ್ಲಿ ಹೀಗೊಂದು ಬರಹ...



ಕರಣ್ ಜೋಹರ್ ಯಾಕೆ ನಮಗಿಷ್ಟವಾಗುತ್ತಾರೆ ಎಂದು ಕಾರಣಗಳನ್ನು ಹುಡುಕಹೊರಟರೆ ತತ್‌ಕ್ಷಣಕ್ಕೆ 'ಕುಚ್ ಕುಚ್ ಹೋತಾ ಹೈ', 'ಕಭಿ ಖುಷಿ ಕಭಿ ಘಮ್', 'ಕಲ್ ಹೋ ನ ಹೋ', 'ಅಗ್ನಿಪತ್', 'ಏ ಜವಾನಿ ಹೈ ದಿವಾನಿ', 'ಕಭಿ ಅಲ್ವಿದ ನ ಕೆಹನ', 'ದೋಸ್ತಾನ', 'ಮೈ ನೇಮ್ ಇಸ್ ಖಾನ್', 'ಟು ಸ್ಟೇಟ್ಸ್'- ಸೇರಿದಂತೆ ಒಂದಿಷ್ಟು ಸಿನಿಮಾಗಳು ನೆನಪಾಗುತ್ತವೆ. ಇವುಗಳ ಪೈಕಿ 'ಕುಚ್ ಕುಚ್ ಹೋತಾ ಹೈ', 'ಕಭಿ ಖುಷಿ ಕಭಿ ಘಮ್', 'ಮೈ ನೇಮ್ ಇಸ್ ಖಾನ್' ಹಾಗೂ 'ಕಭಿ ಅಲ್ವಿದ ನ ಕೆಹನ' ಚಿತ್ರಗಳನ್ನು ಇವರೇ ನಿರ್ದೇಶಿಸಿದ್ದರೆ ಉಳಿದ ಚಿತ್ರಗಳ ನಿರ್ಮಾಪಕರಿವರು. ಈ ಚಿತ್ರಗಳ ಬಗ್ಗೆ ಒಂದು ನೋಟ ಹಾಯಿಸಿದರೆ ಕರಣ್ ಜೋಹರ್ ಭಾರತೀಯ ಸಿನಿಮಾದ ಪುಟ್ಟಿಗಳಲ್ಲಿ ಒಂದಾಗಿ ಕಾಣಸಿಗುತ್ತಾರೆ. ಈ ನೆಪದಲ್ಲಿ ಅವರ ಬದುಕು, ಅದರೊಳಗಿನ ಕುತೂಹಲಗಳು ಎದುರಿಗೆ ತೆರೆಯುತ್ತವೆ.

ಕೇವಲ ನಲವತ್ತೊಂದು ವರ್ಷದ ಈತ ನಿಜಕ್ಕೂ ಬೆರಗು ಮೂಡಿಸುವ ವ್ಯಕ್ತಿ. ಈ ಲವಲವಿಕೆ, ಉತ್ಸಾಹ ಹೀಗೆ ಕಾಪಾಡಿಕೊಂಡರೆ ಇನ್ನೂ ಎರಡ್ಮೂರು ದಶಕಗಳ ಕಾಲ ಈತನಿಂದ ಇನ್ನಷ್ಟು ನಿರೀಕ್ಷಿಸಬಹುದು. ನಿಮಗೆಲ್ಲ ಈ ಕರಣ್ ಜೋಹರ್ ಬಗ್ಗೆ ಗೊತ್ತು. ಈತನ ಸಿನಿಮಾಗಳಿಗೆ ಈತನೇ ಆತ್ಮ. ಕರಣ್ ತಾನೇ ರೂಪಿಸಿದ ಚಿತ್ರಕಥೆಯನ್ನು, ಆ ಪಾತ್ರಗಳ ಆಂತರಿಕ ಮಿಡಿತಗಳನ್ನು ವಿಶೇಷವಾಗಿ ಯುವಜನಕ್ಕೆ ತಲುಪಿಸಲು ತವಕಿಸುವ ವ್ಯಕ್ತಿ; ಫ್ರೇಮ್ ಟು ಫ್ರೇಮ್ ಕಲರ್ ಫುಲ್ ಆಗಿ ಸಿನಿಮಾವನ್ನು ತೋರಿಸಬಲ್ಲ ಕರಣ್‌ಗೆ ಸವಾಲಾಗಿದ್ದ ಅಂಶಗಳೆಂದರೆ, ಆದಷ್ಟೂ ವಿಭಿನ್ನ ಬಗೆಯ ಪಾತ್ರಗಳನ್ನು ರೂಪಿಸುತ್ತಾ ಮಾನವೀಯ ಸಂಬಂಧಗಳ ಪಲ್ಸನ್ನು ಗಟ್ಟಿಯಾಗಿ ಹಿಡಿಯುವುದು. ಈತ 'ಕುಚ್ ಕುಚ್ ಹೋತಾ ಹೈ' ಮಾಡುವುದಕ್ಕಿಂತ ಮುಂಚೆ ಆದಿತ್ಯ ಚೋಪ್ರ ನಿರ್ದೇಶನದ 'ದಿಲ್ವಾಲೇ ದುಲ್ಹನಿಯಾ ಲೇ ಜಾಯೇಂಗೆ' ಚಿತ್ರದಲ್ಲಿ ಶಾರುಖ್ ಖಾನ್ ಸ್ನೇಹಿತನಾಗಿ ನಟಿಸುವುದರ ಜೊತೆಗೆ ಆ ಚಿತ್ರಕ್ಕೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೂಡ ಕೆಲಸ ಮಾಡಿದಾತ. ಜೊತೆಗೆ ಆ ಚಿತ್ರದ ಚಿತ್ರಕಥೆ ರಚನೆಯಲ್ಲೂ ಆದಿತ್ಯ ಚೋಪ್ರ ಅವರಿಗೆ ಸಹಾಯ ಮಾಡಿದ್ದೂ ಉಂಟು.

ತನ್ನ ಇಪ್ಪತ್ತೈದನೇ ವಯಸ್ಸಿಗೆ ತಾನೇ ಸ್ಕ್ರಿಪ್ಟ್ ಬರೆದು 'ಕುಚ್ ಕುಚ್ ಹೋತಾ ಹೈ' ಎಂಬ ಚಿತ್ರ ನಿರ್ದೇಶಿಸಿದ ಕರಣ್ ಜೋಹರ್ ಮೊದಲಿಗೆ ಬರೆದಿದ್ದು, ಇಬ್ಬರು ಹುಡುಗರು ಮತ್ತು ಸುಂದರಿಯೊಬ್ಬಳ ಸುತ್ತ ಸುತ್ತುವ ತ್ರಿಕೋನ ಪ್ರೇಮಕಥೆಯನ್ನು. ಆದರೆ ಆ ಕಥೆ ಆತನಿಗೇ ಇಷ್ಟವಾಗಲಿಲ್ಲ. ನಂತರ, ಹೆಂಡತಿ ಕಳೆದುಕೊಂಡ ಒಬ್ಬ ವ್ಯಕ್ತಿ ಹಾಗೂ ಆತನ ಮಗುವಿನ ಸುತ್ತ ಸಾಗುವ ಇನ್ನೊಂದು ಕಥೆ ಬರೆದರು. ಕಡೆಗೆ ಇವೆರಡೂ ಕಥೆಗಳನ್ನು ಮರ್ಜ್ ಮಾಡಿ ಒಂದೇ ಕಥೆಯಾಗಿಸಿ ಶಾರುಖ್ ಖಾನ್, ಕಾಜೋಲ್ ಹಾಗೂ ರಾಣಿ ಮುಖರ್ಜಿ ಹಾಕಿಕೊಂಡು 'ಕುಚ್ ಕುಚ್ ಹೋತಾ ಹೈ' ಅನ್ನುವ ಆಲ್ ಟೈಮ್ ಬ್ಲಾಕ್ ಬಸ್ಟರ್ ಸಿನಿಮಾ ಕೊಟ್ಟಿದ್ದು ಈಗ ಇತಿಹಾಸ. ಆ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ, ಎಂಟು ಫಿಲಂಫೇರ್ ಅವಾರ್ಡ್‌ಗಳು ಬಂತಲ್ಲದೆ, ದೇಶದಾದ್ಯಂತ ಯುವಜನರ ಮನಸಿನಲ್ಲಿ ಸಂಚಲನ ಉಂಟುಮಾಡಿದ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಆಮೇಲೆ 'ಕಭಿ ಖುಷಿ ಕಭಿ ಘಮ್' ತರಹದ ಸಿನಿಮಾಗಳಲ್ಲಿ ಪಕ್ಕಾ ಫ್ಯಾಮಿಲಿ ಡ್ರಾಮ ತೆರೆದಿಡುವಲ್ಲಿ ಕರಣ್ ಯಶಸ್ವಿಯಾದರು. ಅಮಿತಾಬ್ ಬಚ್ಚನ್, ಜಯಾ ಬಚ್ಚನ್, ಶಾರುಖ್ ಖಾನ್, ಕಾಜೋಲ್, ಹೃತಿಕ್ ರೋಶನ್, ಕರೀನಾ ಕಪೂರ್ ತರಹದ ಭವ್ಯ ತಾರಾಗಣದೊಂದಿಗೆ ಇವತ್ತಿನ ಕಾಲಕ್ಕೆ ಹತ್ತಾರು ಟಿವಿ ಸೀರಿಯಲ್‌ಗಳಿಗಾಗುವಷ್ಟು ಕಥೆಯುಳ್ಳ ಅಂಥದೊಂದು ಸಿನಿಮಾ ಮಾಡಿದರು. ಕರಣ್ ಜೋಹರ್ ತಮ್ಮ ಕಥಾವಸ್ತುವನ್ನು ಫೋಕಸ್ ಮಾಡಲು ಹಾಡುಗಳನ್ನು ಬಳಸಿಕೊಂಡ ರೀತಿ ಅದ್ಭುತ. ಚಿತ್ರಗಳನ್ನು ಇದ್ದಕ್ಕಿದ್ದಂತೆ ದೃಶ್ಯಶ್ರೀಮಂತಿಕೆಯ ತುತ್ತತುದಿಗೆ ಕೊಂಡೊಯ್ಯುವ ಕರಣ್ ತಮ್ಮ ಚಿತ್ರಗಳಲ್ಲಿ ಮನಮೋಹಕ ಲೊಕೇಶನ್ಸ್, ನಯನ ಮನೋಹರ ಕಾಸ್ಟ್ಯೂಮ್ಸ್ ಬಳಸಿ ಯುವಜನತೆಯನ್ನು ರಂಜಿಸಲು ಪ್ರಯತ್ನಿಸುತ್ತಾರೆ.

ಇಲ್ಲಿ ಇನ್ನೊಂದು ವಿಷಯ ಹೇಳುವುದಾದರೆ, ಕರಣ್ ಜೋಹರ್ ಹಾಗೂ ಶಾರುಖ್ ಖಾನ್ ನಡುವಿನ ಸ್ನೇಹ ಅಪೂರ್ವವಾದದ್ದು. ಕರಣ್-ಶಾರುಖ್ ಕಾಂಬಿನೇಶನ್ನಿನಲ್ಲಿ ಮೂಡಿಬಂದ ಚಿತ್ರಗಳು ಇವತ್ತಿಗೂ ಬಾಲಿವುಡ್ ಇತಿಹಾಸದಲ್ಲೇ ಅದ್ಭುತ ಚಿತ್ರಗಳೆನಿಸಿವೆ. ಅವುಗಳ ಪೈಕಿ 'ಕುಚ್ ಕುಚ್ ಹೋತಾ ಹೈ', 'ಕಭಿ ಕುಶಿ ಕಭಿ ಘಮ್', 'ಕಭಿ ಅಲ್ವಿದ ನಾ ಕೆಹನ', 'ಮೈ ನೇಮ್ ಇಸ್ ಖಾನ್' ಚಿತ್ರಗಳು ಕರಣ್ ಜೋಹರ್ ನಿರ್ದೇಶನ-ಶಾರುಖ್ ಅಭಿನಯದಲ್ಲಿ ಮೂಡಿಬಂದಿದ್ದರೆ, ಶಾರುಖ್ ಅಭಿನಯದ 'ಕಲ್ ಹೋ ನ ಹೋ' ಚಿತ್ರವನ್ನು ಕರಣ್ ಜೋಹರ್ ನಿರ್ಮಿಸಿದ್ದಾರೆ. ಸಾಲದೆಂಬಂತೆ, ಇದೇ ಶಾರುಖ್ ಅಭಿನಯದ 'ದಿಲ್ ತೋ ಪಾಗಲ್ ಹೈ', 'ಮೊಹಬ್ಬತೇ', 'ಮೈ ಹೂ ನ', 'ಓಂ ಶಾಂತಿ ಓಂ', 'ಡೂಪ್ಲಿಕೇಟ್' ಹಾಗೂ 'ವೀರ್ ಜರಾ' ಚಿತ್ರಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕರಣ್ ಜೋಹರ್ ತಮ್ಮನ್ನು ತೊಡಗಿಸಿಕೊಂಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

ರೊಮ್ಯಾಂಟಿಕ್ ವ್ಯಕ್ತಿಯಾದ ಕರಣ್ ಜೋಹರ್, ಭಾವೋತ್ಕಟತೆಯನ್ನೇ ಬಂಡವಾಳವಾಗಿಸಿಕೊಂಡಿರುವ ನಿರ್ಮಾಪಕರೂ ಹೌದು; ತಂದೆ ಯಶ್ ಜೋಹರ್ ಕಟ್ಟಿ ಬೆಳೆಸಿದ್ದ 'ಧರ್ಮ ಪ್ರೊಡಕ್ಷನ್ಸ್' ಇವರ ಕನಸುಗಳಲ್ಲಿ ಒಂದು. ತಂದೆ ತೀರಿಕೊಂಡ ಬಳಿಕ ಸಂಸ್ಥೆಯ ಪೂರ್ಣ ಜವಾಬ್ದಾರಿ ಹೊತ್ತ ಇವರು ಹೇಳುವುದೇನೆಂದರೆ, **'I wanted my production house to walk before running. I need to be streamlined, build my infrastructure. I do want to make all kinds of movies because I have watched all kinds of movies'** ಎಂದು. ಮುಂದಿನ ವರ್ಷವೋ, ಅದರಾಚೆಯ ವರ್ಷವೋ ಬಿಡುಗಡೆಯಾಗಲಿರುವ ಆದರೆ ಇವತ್ತು ನಿರ್ಮಾಣವಾಗುತ್ತಿರುವ ಚಿತ್ರ ಯಾವ ರೀತಿಯಲ್ಲಿ ಇರಬೇಕು? ಅದರ ಸೌಂಡ್, ಎಡಿಟಿಂಗ್ ಯಾವ ತೆರನದ್ದಾಗಿರಬೇಕು? ಅವತ್ತಿನ ಯುವಜನರ ಆಸಕ್ತಿ ಕೇಂದ್ರಗಳೇನು? ಎಂಬುದರ ದೂರದೃಷ್ಟಿ ಒಬ್ಬ ಕ್ರಿಯೇಟಿವ್ ಫಿಲಂ ಮೇಕರ್‌ಗೆ ಇರಬೇಕಾಗಿರುತ್ತದೆ. ಇದನ್ನು ಮನಗಂಡ ಕರಣ್ ಜೋಹರ್ ತಮ್ಮ ದೃಷ್ಟಿಯನ್ನು ಮಾತ್ರವಲ್ಲ, ತಮ್ಮ ಭಾವುಕತೆ, ನಿಲುವು, ಊಹೆ, ಭ್ರಮೆ, ಉತ್ಸಾಹ, ಪ್ರಯೋಗಾತ್ಮಕ ಧೋರಣೆ ಇತ್ಯಾದಿಗಳನ್ನು ತೆರೆಯ ಮೇಲೆ ಮೂಡಿಸಿದರು, ಆ ಮೂಲಕ ಒಂದು ಕಾಲಮಾನದ ಗಮನ ಸೆಳೆದರು. ಕಡೆಗೆ ಖಾಲಿಯಾದಂತೆನಿಸಿ ಬರೀ ನಿರ್ಮಾಣದಲ್ಲೇ ಬ್ಯುಸಿಯಾದರು.

ಕಾಲಾನುಕ್ರಮದಲ್ಲಿ ಕರಣ್ ಜೋಹರ್ ಖಾಲಿಯಾಗುತ್ತಿದ್ದಾರೆ ಎನಿಸಲು ಅವರ ಇತ್ತೀಚಿನ ವರ್ಷಗಳ ಚಿತ್ರಗಳಲ್ಲಿನ ಪ್ರಯೋಗಶೀಲತೆಯೇ ಕಾರಣ ಎಂಬುದು ಕೂಡ ಕುತೂಹಲಕರ. 'ಕುಚ್ ಕುಚ್ ಹೋತಾ ಹೈ' ಚಿತ್ರದ ಲವಲವಿಕೆ, 'ಕಭಿ ಖುಷಿ ಕಭಿ ಘಮ್' ಚಿತ್ರದ ಕೌಟುಂಬಿಕ ಮಿಡಿತಗಳು, 'ಮೈ ನೇಮ್ ಇಸ್ ಖಾನ್' ಚಿತ್ರದ ಸುತ್ತಲಿನ ಪೊಲಿಟಿಕಲ್ ಕಂಟ್ರೋವರ್ಸಿ, ವಿಶೇಷವಾಗಿ 'ಕಭಿ ಅಲ್ವಿದ ನ ಕೆಹನ' ಚಿತ್ರ ಉಂಟು ಮಾಡಿದ ತಲ್ಲಣ, ಇವೆಲ್ಲವೂ ಇಲ್ಲಿ ಗಮನಕ್ಕೆ ಬರುತ್ತವೆ. ತೀರಾ ಹೊಸತನ್ನು ಕೊಡುತ್ತೇನೆಂಬ ವಿಶ್ವಾಸ 'ಬಾಂಬೆ ಟಾಕೀಸ್' ಅನ್ನು ಹಾಳುಮಾಡಿತ್ತು, ಇದರ ಹಿಂದೆಯಷ್ಟೇ ಬಿಡುಗಡೆಯಾಗಿದ್ದ 'ಸ್ಟೂಡೆಂಟ್ ಆಫ್ ದಿ ಇಯರ್' ಆವರೇಜ್ ಫಲಿತಾಂಶ ತಂದುಕೊಡುವುದರ ಮೂಲಕ ಕರಣ್ ಜೋಹರ್ ನಿರ್ದೇಶಕನಾಗಿ ಒಂದುಮಟ್ಟಿಗೆ ಕಂಗಾಲಾಗುವಂತೆ ಮಾಡಿತ್ತು ಎಂದೇ ಹೇಳಬಹುದು.


ಕರಣ್ ಜೋಹರ್ ಯುವಜನತೆಗೆ ಇನ್ನೂ ಹತ್ತಿರ ಎನಿಸುವುದು ಆತ ಕಿರುತೆರೆಯ ಸ್ಟಾರ್ ಟಿವಿ ಹಾಗೂ ಸ್ಟಾರ್ ವರ್ಲ್ಡ್‌ಗಾಗಿ ನಡೆಸಿಕೊಡುತ್ತಿರುವ 'ಕಾಫಿ ವಿತ್ ಕರಣ್' ಕಾರ್ಯಕ್ರಮ. ಬಾಲಿವುಡ್‌ನ ಸೆಲೆಬ್ರಿಟಿಗಳನ್ನು ಕರೆದು, ಕೂಡಿಸಿ ಮಾತಾಡುವ ಈ ವಿನೂತನ ಕಾರ್ಯಕ್ರಮ ದೇಶದಾದ್ಯಂತ ಜನಪ್ರಿಯವಾಗಿದೆ. ಕರಣ್ 'ಕಭಿ ಅಲ್ವಿದ ನ ಕೆಹನ' ಶುರು ಮಾಡಿಕೊಂಡಿದ್ದರಿಂದ ಸ್ವಲ್ಪ ಕಾಲ ಬ್ರೇಕ್ ಪಡೆದಿದ್ದ ಈ ಕಾರ್ಯಕ್ರಮ ಮತ್ತೆ ತನ್ನ ಎರಡನೇ ಸೀಸನ್‌ನಲ್ಲಿಯೂ ಅದೇ ಜನಪ್ರಿಯತೆ ಉಳಿಸಿಕೊಂಡಿತ್ತು, ಉಳಿದಂತೆ ಕರಣ್ ಜೋಹರ್ ತಮ್ಮ 'ಮೈ ನೇಮ್ ಇಸ್ ಖಾನ್' ಸಿನಿಮಾದಲ್ಲಿ ಬ್ಯುಸಿಯಾದುದರಿಂದ ಈ ಕಾರ್ಯಕ್ರಮಕ್ಕೆ ಮತ್ತೊಂದು ವಿರಾಮ ದೊರೆತು ಮತ್ತೆ ಭರ್ಜರಿಯಾಗಿ ಮೂರನೇ ಸೀಸನ್‌ನಲ್ಲಿ ಶುರುವಾಗಿ ಯುವಜನತೆಯ ಲೆಕ್ಕದಲ್ಲಿ ಹಿಟ್ ಪ್ರೋಗ್ರಾಮ್ ಎನಿಸಿಕೊಂಡಿತ್ತು, ಇನ್ನು ಕರಣ್ ನಿರ್ವಹಿಸಿದ ಎರಡನೇ ಟಿವಿ ಪ್ರೋಗ್ರಾಮ್ ಎಂದರೆ, ಸೋನಿ ಟಿವಿಗಾಗಿ ನಡೆಸಿಕೊಡುತ್ತಿದ್ದ 'ಲಿಫ್ಟ್ ಕರಾ ದೇ' ಕಾರ್ಯಕ್ರಮ. ಆನಂತರ ಜಡ್ಜ್ ಆಗಿ ಸೇರ್ಪಡೆಯಾಗಿದ್ದು ಕಲರ್ಸ್ ಟಿವಿಗಾಗಿ ಮಾಧುರಿ ದೀಕ್ಷಿತ್ ಹಾಗೂ ರೆಮೋ ಡಿಸೋಜಾ ನಡೆಸಿಕೊಡುತ್ತಿದ್ದ 'ಜಾಲಕ್ ದಿಖಲಾ ಜಾ-5' ಕಾರ್ಯಕ್ರಮಕ್ಕೆ.

ಹೀಗೆ ಸಿನಿಮಾ ಜೊತೆಜೊತೆಗೆ ಕಿರುತೆರೆಯಲ್ಲೂ ಬ್ಯುಸಿಯಾಗಿರುತ್ತಿದ್ದ ಕರಣ್ ಜೋಹರ್ ಒಳಗೆ ಒಬ್ಬ ಬರಹಗಾರ ಸದಾ ಎಚ್ಚರದಿಂದಿರುತ್ತಿದ್ದ. ಯಾವಾಗಲೂ ತಾನು ಕ್ರಿಯಾಶೀಲನಾಗಿರುತ್ತಿದ್ದ ಯಾವುದೋ ಒಬ್ಬ ವ್ಯಕ್ತಿಯ ಹಾವಭಾವ, ಭಂಗಿ, ಆಂಗಿಕ ಚಲನೆ, ಮಾತುಕತೆ, ಮ್ಯಾನರಿಸಂಗಳನ್ನೆಲ್ಲಾ ಸೂಕ್ಷ್ಮಾತಿಸೂಕ್ಷ್ಮವಾಗಿ ಗಮನಿಸುತ್ತಾ ಇರುತ್ತಿದ್ದ. ಆ ವ್ಯಕ್ತಿ ಮುಂದೆಂದೋ ಹುಟ್ಟಲಿರುವ ತನ್ನ ಕಥೆಯೊಳಗಿನ ಪಾತ್ರವಾಗುವುದರ ಬಗ್ಗೆ ಆಲೋಚಿಸುತ್ತಿದ್ದ. ಈ ಕಾರಣದಿಂದಾಗಿಯೇ ಕರಣ್ ಯಾರೊಬ್ಬರೂ ಮೆಚ್ಚುವಂಥ ಸ್ಕ್ರೀನ್ ರೈಟರ್ ಎನಿಸಿಕೊಳ್ಳುವುದು. ಇದಕ್ಕೆ ಪುಷ್ಟಿ ನೀಡುವಂತೆ ಸಿಎನ್‌ಎನ್ ಚಾನಲ್ಲಿನ ಸಿನಿಮಾ ರಿಪೋರ್ಟರ್ ಕಂ ಸಿನಿಮಾ ವಿಮರ್ಶಕ ರಾಜೀವ್ ಮಸಂದ್ ಈ ಮಾತನ್ನು ಹೇಳಿರುತ್ತಾರೆ: 'ಕೆಲವು ಬರಹಗಾರರು ಕರಣ್ ಜೋಹರ್ ಥರ ತಮ್ಮ ಚಿತ್ರಕತೆಯ ಮೇಲೆ ಅಪಾರವಾದ ಹಿಡಿತ ಹೊಂದಿರುತ್ತಾರೆ. ನಿರೂಪಣೆಯ ಟ್ರಿಕ್ ಅರಿತಿರುತ್ತಾರೆ. ಕರಣ್ ಜೋಹರ್ ಬರೆಯುವ ಚಿತ್ರಕಥೆಯ ಓಘ ಹೇಗಿರುತ್ತೆ ಅಂದರೆ, ಒಮ್ಮೊಮ್ಮೆ ಉತ್ತುಂಗದಿಂದ ಕೆಳಕ್ಕೆ ಹೋಗುತ್ತದೆ. ಅದೇ ರೀತಿ, ಲೋ ಇಂದ ಪೀಕ್‌ಗೂ ಹೋಗುತ್ತದೆ. ಒನ್ ಲೈನ್ ಡೈಲಾಗ್ ಅಥವಾ ಹಿನ್ನೆಲೆ ಸಂಗೀತದ ಸಪೋರ್ಟ್‌ನಿಂದ ಒಂದು ಸಾಧಾರಣ ದೃಶ್ಯವನ್ನು ಹೇಗೆ ಪರಿಣಾಮಕಾರಿಯಾಗಿ ಪ್ರೆಸೆಂಟ್ ಮಾಡಬಹುದೆಂದು ಕರಣ್ ಜೋಹರ್‌ಗೆ ಚೆನ್ನಾಗಿ ಗೊತ್ತಿದೆ'.

ಇಂತಹ ಇನ್ನೂ ಎಷ್ಟೋ ಬಗೆಯ ಪ್ರಶಂಸೆಗೆ ಪಾತ್ರವಾಗಿರುವ ಕರಣ್ ಜೋಹರ್ ಯುವವರ್ಗಕ್ಕಾಗಿ ಚಿತ್ರಗಳನ್ನು ಮಾಡುತ್ತಾ ಯುವಜನಾಂಗದ ಮಿಡಿತಗಳಾದ ಆರ್ದ್ರ ಭಾವನೆಗಳು, ಹಸಿ ಬಿಸಿ ತಲ್ಲಣಗಳಲ್ಲಿ ಮುಳುಗಿದ್ದ ಕರಣ್ ಒಂದು ವರ್ಗದ ಐಡಲ್ ಆದರು. ಕರಣ್ ಜೋಹರ್ ಅವರ ಪ್ರತಿಭೆ ಹಾಗೂ ಆಶಯವನ್ನು ಅರಿಯಲಾರದ ಸಂಪ್ರದಾಯಸ್ಥ ಮುದುಕ ಮುದುಕಿಯರ ವಿರೋಧ ಅಸಮಾಧಾನಕ್ಕೆ ಗುರಿಯಾದರು. ತಮ್ಮ ಸಾಮರ್ಥ್ಯದ ಬಗ್ಗೆ ಅಪಾರ ವಿಶ್ವಾಸ ಹೊಂದಿದ್ದ ಕರಣ್ ಜೋಹಾರ್ 'ಬಾಂಬೆ ಟಾಕೀಸ್' ನಂತರ ಬರೀ ನಿರ್ಮಾಣದತ್ತಲೇ ಮನಸು ಮಾಡಿದ್ದುಂಟು. ತಮ್ಮ ಬರವಣಿಗೆ ಬಗ್ಗೆ ಒಳ್ಳೆಯ ಭರವಸೆ ಹೊಂದಿದ್ದ ಕರಣ್ ಇತ್ತೀಚಿಗೆ ಅದನ್ನೂ ಆದೇಕೋ ನಿಲ್ಲಿಸಬೇಕಾಯಿತು. ಮೂಲಭೂತವಾಗಿ ರಂಜನೆ ಲವಲವಿಕೆಯ ಪ್ರತೀಕವಾಗಿದ್ದ ಈ ವ್ಯಕ್ತಿ ಆಗಾಗ ವಿವಾದಗಳಿಗೆ ಆಹಾರವೂ ಆಗಬೇಕಾಯಿತು.

ಕರಣ್ ಜೋಹರ್ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಬರೀ ವಿಶ್ ಮಾಡಿ ಈ ಬರಹ ಮುಗಿಸುವುದು ತರವಲ್ಲ. ಕರಣ್ ಅತ್ಯುತ್ತಮ ಚಿತ್ರಗಳನ್ನು ಕೊಟ್ಟಿದ್ದಾರೆ. ತಮ್ಮ ನಿರ್ಮಾಣ ಸಂಸ್ಥೆಯ ಮೂಲಕ ಹಲವಾರು ಹೊಸ ಹೊಸ ನಿರ್ದೇಶಕರಿಗೆ, ನಟನಟಿಯರಿಗೆ, ತಂತ್ರಜ್ಞರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅಷ್ಟೇ ತೀವ್ರವಾಗಿ ತಮ್ಮ ಮನರಂಜನಾತ್ಮಕ ವ್ಯಕ್ತಿತ್ವದಿಂದ ಈ ಬಿಸಿಲಿನ ದಿನಗಳಲ್ಲಿ ಮತ್ತೊಮ್ಮೆ 'ಕುಚ್ ಕುಚ್ ಹೋತಾ ಹೈ' ನೋಡಿ ತಂಪಾಗುವಂತೆ ಮಾಡಿದ್ದಾರೆ.

● ಹೃದಯಶಿವ



ದೇಶದಲ್ಲಿ ಮೋದಿ ಅಲೆ ಇದ್ದದ್ದು ನಿಜವಾದರೆ ಅದು ಯಾಕೆ ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಲದಲ್ಲಿ ಬೀಸಲಿಲ್ಲ? ವಾಸ್ತವವಾಗಿ ಈ ಚುನಾವಣೆಯಲ್ಲಿ ಗೆದ್ದದ್ದು ಜನರನ್ನು ಧರ್ಮದ ಆಧಾರದ ಮೇಲೆ ವಿಭಜಿಸುವ ತಂತ್ರ ಮಾತ್ರ. ಇದು ನಮ್ಮ ದೇಶದ ಜಾತ್ಯತೀತ ಪರಂಪರೆಗೆ ಹಾನಿ ಮಾಡಲಿದೆ.

ನಿಮ್ಮ ತಂಡದ ಜಾತ್ಯತೀತ ನಿಲುವಿಗೆ ಸದಾ ಬೆಂಬಲವಿರುತ್ತದೆ.

- ನಜೀರ್ ಹುಸೇನ್ ಅಹಮದ್, ಈ ಮೇಲ್ ಮೂಲಕ

ಒಳ್ಳೆಯ ದಿನಗಳು ಬರಲಿವೆ

ಒಳ್ಳೆಯ ದಿನಗಳು ಬರಲಿವೆ ಅಂಬಾನಿ ಅದಾಣಿಗಳಿಗೆ.
ಒಣ ದಿನಗಳು ಬರಲಿವೆ ಸಾಮಾನ್ಯ ಜನರಿಗೆ.
ಕೃಷಿ ಕ್ಷೇತ್ರ ನಾಶವಾಗಿ ಭೂಮಿಯೆಲ್ಲ ಹೋಗಲಿದೆ ...ಡ್ಯ ಕಂಪನಿಗಳಿಗೆ.
ಅಂಬಾನಿಯ ಲಾಭಕ್ಕಾಗಿ ಪೆಟ್ರೋಲ್ ಆಗಲಿದೆ 100 ರೂಪಾಯಿ ಲೀಟರ್!
ಆಲ್ಕೋಹಾಲು ಆಗಲಿದೆ 5 ರೂಪಾಯಿ ಲೀಟರ್!
ಗುಜರಾತಿನಂತೆ ದೇಶದೆಲ್ಲೆಡೆ ಕಳ್ಳ ಭಟ್ಟಿ ಸಾರಾಯಿ ...ಸಾರಿಕೆ ಆಗಲಿದೆ ಗ್ರಾಮೋದ್ಯೋಗ.
ಸರಕಾರಿ ಜಾಹೀರಾತಿಗಾಗಿ ಮೀಡಿಯಾದವರು ...ಡುವರು ಮೋದಿಯ ರಾಗ.
ಸೀರೆಯುಟ್ಟ ಬಾಬಾ ರಾಮದೇವ್ ಕಣ್ಣು ...ಡೆಯುತ್ತಾ ಕಲಿಸುವರು ಯೋಗ ಭೋಗ.
ಸ್ವಿಸ್ ಬ್ಯಾಂಕ್ ಆಗಿರುವ ಕಾವಿಧಾರಿಗಳಿಗೆಲ್ಲ ಇನ್ನೂ ...ರಿ ಕಾಳಧನ ಯೋಗ.

- ಅಭಿಷೇಕ್ ಎ. ಸುಳ್ಯ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...nkesh70@rediffmail.com ಗೆ ಮಿಂ... ...ಹಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ಕ್ರಿಯೆಗಳನ್ನು 9980331427 ನಂಬರಿಗೂ ...ವಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 04-06-2014 RNI No. KARKAN2005/1464

ಅನಂತ ಗಾನ



'ಪರ್ಪಂಚ' ಚಿತ್ರದ ಮೂಲಕ ಅನಂತ್ ನಾಗ್ ಗಾಯಕರಾಗುತ್ತಿದ್ದಾರೆ. ಚಿತ್ರದಲ್ಲಿ ಕವಿಯ ಪಾತ್ರವನ್ನು ನಿರ್ವಹಿಸುತ್ತಿರುವ ಅನಂತ ನಾಗ್ ತಮ್ಮ ಪಾತ್ರಕ್ಕಾಗಿ ಒಂದಿಷ್ಟು ಶಾಯರಿಗಳನ್ನು ಹಾಡಬೇಕಾಗುತ್ತದೆ. ಆ ಶಾಯರಿಗಳನ್ನು ಯಾರಿಂದ ಹಾಡಿಸುವುದು? ಅನಂತ ನಾಗ್ ಅವರಿಗೆ ಯಾರ ಧ್ವನಿ ಸೂಕ್ತವಾಗಿರುತ್ತದೆ? ಎಂದೆಲ್ಲಾ ನಿರ್ದೇಶಕ ಕ್ರಿಷ್ ಜೋಷಿ ಆಲೋಚಿಸಿದ ಬಳಿಕ ಅನಂತ ನಾಗ್ ಅವರೇ ಯಾಕೆ ಆ ಶಾಯರಿಗಳಿಗೆ ಧ್ವನಿ ಕೊಡಬಾರದು? ಎನ್ನಿಸಿ ಈಗ ಅವರಿಂದಲೇ ಆ ಶಾಯರಿ(ಪದ್ಯ)ಗಳನ್ನು ಹಾಡಿಸಿದ್ದಾರೆ. ಸ್ವತಃ ಕ್ರಿಷ್ ಜೋಷಿ ಬರೆದಿರುವ ಈ ಶಾಯರಿಗಳನ್ನು ಇತ್ತೀಚೆಗಷ್ಟೇ ಆಕಾಶ್ ಆಡಿಯೋದಲ್ಲಿ ಹಾಡಿಸಲಾಯಿತು. ಅಲ್ಲಿಗೆ ಈ ಮೂಲಕ ಅನಂತ್ ನಾಗ್ ಗಾಯಕರೂ ಆದಂತಾಯಿತು. ಚಿತ್ರದಲ್ಲಿ ಅನಂತ್ ನಾಗ್ ಅವರದ್ದು ಯಾವ ಬಗೆಯ ಪಾತ್ರ? ಯಾವ ಬಗೆಯ ಶಾಯರಿ ಹಾಡುತ್ತಾರೆ? ಎಂಬೆಲ್ಲ ಪ್ರಶ್ನೆಗಳನ್ನು ಪ್ರೇಕ್ಷಕರ ಮುಂದಿಟ್ಟಿರುವ 'ಪರ್ಪಂಚ' ದಿನೇ ದಿನೇ ಭರವಸೆ ಮೂಡಿಸುತ್ತಿರುವುದು ಸುಳ್ಳಲ್ಲ.

'ಶ್ವೇತ' ಡಬ್ಬಿಂಗ್‌ಗೆ ರೆಡಿ

'ಮಾಣಿಕ್ಯ' ಚಿತ್ರದ ಎಡಿಟಿಂಗ್ ಕೆಲಸದಲ್ಲಿ ಬ್ಯುಸಿಯಾಗಿದ್ದ ಸಂಕಲನಕಾರ ವಿಶ್ವ ಇದೀಗ 'ಮಾಣಿಕ್ಯ' ಬಿಡುಗಡೆಯ ನಂತರ 'ಶ್ವೇತ' ಚಿತ್ರದ ಎಡಿಟಿಂಗ್ ಮುಗಿಸಿದ್ದಾರೆ. ರಾಜೇಶ್ ಬಲಿಪ ನಿರ್ದೇಶನದ 'ಶ್ವೇತ' ಚಿತ್ರಕ್ಕೆ ಬೆಂಗಳೂರು ಸುತ್ತಮುತ್ತ ಐವತ್ತಕ್ಕೂ ಹೆಚ್ಚು ದಿನಗಳ ಚಿತ್ರೀಕರಣ ನಡೆದಿದ್ದು ಇದೀಗ ಎಡಿಟಿಂಗ್ ಕೆಲಸವೂ ಮುಗಿದಿದೆ. ರೆಗ್ಯುಲರ್ ಹಾರರ್ ಸಿನಿಮಾ ಎನಿಸದ ಕುತೂಹಲಕಾರಿ ಕಥೆಯನ್ನುಳ್ಳ ಈ ಚಿತ್ರದಲ್ಲಿ ಪ್ರಣವ್, ಮಂಜು, ಅಕ್ಷತಾ ಮಾರ್ಲಾ, ಶ್ರೀನಿವಾಸ್ ಪ್ರಭು, ಜಯಶೀಲಗೌಡ ನಟಿಸಿದ್ದಾರೆ. ಚಿತ್ರದಲ್ಲಿ ಎರಡು ಹಾಡುಗಳಿದ್ದು ಕಿರಣ್ ಸಂಗೀತ ನೀಡಿದ್ದಾರೆ. ಉಳಿದಂತೆ ಎಸ್.ಆರ್.ವೈ ಪ್ರೊಡಕ್ಷನ್ಸ್ ಸಂಸ್ಥೆ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಹೊಸೂರಿನ ಬಿಲ್ಡರ್ ರಾಮಚಂದ್ರ ರೆಡ್ಡಿ ಹಣ ಹಾಕಿದ್ದಾರೆ. ಮ್ಯಾನ್ ಲಿಯೋ ಕ್ರಿಯೇಷನ್ಸ್ ಅವರ ವಿಶಿಷ್ಟ ಗ್ರಾಫಿಕ್ಸ್ ವರ್ಕ್ ಹೊಂದಿರುವ ಈ ಸಿನಿಮಾಗೆ ವಿಶೇಷವಾಗಿ ವಿ.ಎಫ್.ಎಕ್ಸ್ ತಂತ್ರಜ್ಞಾನವನ್ನು ಅಳವಡಿಸಲಾಗುವುದಂತೆ. ಚಿತ್ರವು ಸದ್ಯದಲ್ಲೇ ಡಬ್ಬಿಂಗ್ ಕೆಲಸದಲ್ಲಿ ತೊಡಗಲಿದ್ದು ಆಗಸ್ಟ್ ನಂತರ ತೆರೆಗೆ ಬರುವ ಸೂಚನೆಗಳಿದ್ದು, ನಾಗಾರ್ಜುನ ಅವರ ಕ್ಯಾಮೆರಾ ವರ್ಕ್ ಹಾಗೂ ವಿಶ್ವ ಅವರ ಎಡಿಟಿಂಗ್ ವರ್ಕ್ ಚಿತ್ರದ ಹೈ ಲೈಟ್ಸ್‌ಗಳಲ್ಲಿ ಪ್ರಮುಖವಾದುವುಗಳಂತೆ.



ಕಿಶೋರ್ ಕರ್ಣನಾದಾಗ

ಒಂದು ಕಾಲದಲ್ಲಿ ವಿಷ್ಣುವರ್ಧನ್ ಅಭಿನಯದಲ್ಲಿ ಪ್ರೇಕ್ಷಕರ ಮನ ಗೆದ್ದಿದ್ದ 'ಕರ್ಣ' ಚಿತ್ರ ನಿಮಗೆಲ್ಲ ಗೊತ್ತಿದೆ. ಈಗ ಅದೇ ಟೈಟಲ್ ಇಟ್ಟುಕೊಂಡು ಮತ್ತೊಂದು ಸಿನಿಮಾ ಬರುತ್ತಿದೆ. 'ಜಟ್ಟ'ದ ನಂತರ ಹೀರೋ ಆಗಿ ಬ್ಯುಸಿಯಾಗುತ್ತಿರುವ ಕಿಶೋರ್ ಈ ಹೊಸ 'ಕರ್ಣ'. ಹಿಂದೊಮ್ಮೆ 'ಹೆಂಡ್ತೀರ್ ದರ್ಬಾರ್' ಹಾಗೂ 'ಸೂಪರ್ ಶಾಸ್ತ್ರಿ' ಎಂಬ ಸಿನಿಮಾಗಳನ್ನು ನಿರ್ಮಿಸಿದ್ದ ಜಿ.ರಾಮಚಂದ್ರನ್ ಎನ್ನುವವರು ಈ ಚಿತ್ರಕ್ಕೆ ಹಣ ಹಾಕುವುದರ ಜೊತೆಗೆ ಒಂದು ಪ್ರಮುಖ ಪಾತ್ರದಲ್ಲಿಯೂ ಅಭಿನಯಿಸುತ್ತಿದ್ದಾರೆ.

ಇನ್ನು ರವಿರಾಜ್ ಎನ್ನುವವರು ಸ್ಕ್ರಿಪ್ಟ್ ಬರೆದು ಈ ಚಿತ್ರವನ್ನು ನಿರ್ದೇಶಿಸುತ್ತಿದ್ದರೆ, ಕಿಶೋರ್ ಜೋಡಿಯಾಗಿ ಹರ್ದಿಕಾ ಶೆಟ್ಟಿ ಎಂಬಾಕೆ ನಟಿಸುತ್ತಿದ್ದಾಳೆ. ಮೇ ಕೊನೆಗೆ ಚಿತ್ರ ಆರಂಭವಾಗುವ ಸೂಚನೆಗಳಿವೆ.





ಜಂಬು ಸವಾರಿ ನಿಕಿ

ಅಬ್ಬಬ್ಬಾ... ಅಭಿನೇತ್ರಿ!



'ದಂಡುಪಾಳ್ಯ' ಚಿತ್ರದ ಪೋಸ್ಟರುಗಳಲ್ಲಿ ಬೆನ್ನು ತೋರಿಸಿ ಪಡ್ಡೆಹುಡುಗರನ್ನು ಟಾಕೀಸಿಗೆ ಕರೆತಂದ ಖ್ಯಾತಿಗೆ ಒಳಗಾಗಿದ್ದ ಪೂಜಾ ಗಾಂಧಿ ಇದೀಗ 'ಅಭಿನೇತ್ರಿ' ಚಿತ್ರದ ಬಿಸಿಬಿಸಿ ಫೋಟೋಗಳ ಮೂಲಕ ಮತ್ತಷ್ಟು ಪಡ್ಡೆಗಳನ್ನು ಆಕರ್ಷಿಸುವ ಅಂದಾಜಿನಲ್ಲಿದ್ದಾರೆ. ಅದ್ಯಾಗೋ 'ಅಭಿನೇತ್ರಿ' ಚಿತ್ರದ ಸ್ಟಿಲ್‌ಗಳು ಹೊರಬಂದಿವೆ. ಅವುಗಳನ್ನು ಯಾವನೇ ಒಬ್ಬ ವಯಸಿಗೆ ಬಂದ ಹೈದ ಒಮ್ಮೆ ಕಣ್ಣಿಟ್ಟು ನೋಡಿದರೆ ಮುಗೀತು. 'ಅಭಿನೇತ್ರಿ' ತೆರೆಗೆ ಬರುತ್ತಿದ್ದಂತೆಯೇ ಸೀದಾ ಹೋಗಿ ಪೂಜಾ ಗಾಂಧಿ ಸೌಂದರ್ಯವನ್ನು ಕಣ್ತುಂಬಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ಇಷ್ಟಕ್ಕೂ ಖ್ಯಾತ ನಟಿಯೊಬ್ಬರ ಬದುಕನ್ನು ಯಥಾವತ್ತು ತೆರೆದಿಡುವ ಪ್ರಯತ್ನವಾಗಿರುವ 'ಅಭಿನೇತ್ರಿ'ಯ ಈ ಬಗೆಯ ಸ್ಟಿಲ್‌ಗಳು ಆ ಖ್ಯಾತ ನಟಿಯ ಸುತ್ತ ಆಗ ನಡೆದಿರಬಹುದಾದ ಘಟನೆಗಳ ಬಗ್ಗೆ ಕ್ಷಣಕಾಲ ಅನುಮಾನ... ನೋಡುವಂತೆ ಮಾಡುತ್ತದೆ. 'ಅಭಿನೇತ್ರಿ' ಒಂದು ಮಾಮೂಲಿ ಕಥೆ... ಚಿತ್ರವಾಗಿದ್ದರೆ ಇಂತಹ ಅನುಮಾನಗಳು ಬರುತಿರಲಿಲ್ಲ. 'ಅಭಿನೇತ್ರಿ' ... ಸಂಬಂಧಿಸಿದಂತೆ ಪೂಜಾ ಗಾಂಧಿ ಹೇಗೆ ಕಾಣಿಸಿಕೊಂಡರೂ ಆ ಖ್ಯಾತ ನಟಿ... ಕಣ್ಮುಂದೆ ಸುಳಿಯುವುದು ಅಲ್ಲವೇ? ಹೀಗಿರುವಾಗ ಇಂತಹ ಸ್ಟಿಲ್‌ಗಳು ... ಎಷ್ಟು ಪ್ಲಸ್ಸೋ ಅಷ್ಟೇ ಮೈನಸ್ ಕೂಡ.

ಇಷ್ಟಕ್ಕೂ ಪೂಜಾ ಗಾಂಧಿಯ ಬೆನ್ ಮಹಿಮೆ 'ದಂಡುಪಾಳ್ಯ'ದ ಬ... ತುಂಬಿದ್ದನ್ನು ಮನಗಂಡ 'ಅಭಿನೇತ್ರಿ' ಚಿತ್ರತಂಡ ಬೇಕಂತಲೇ ಈ ಬ... ಮಾದಕ, ರೋಚಕ, ಪ್ರಚೋದಕ ಫೋಟೋಗಳನ್ನು ಬಿಡುಗಡೆ ಮಾಡಿರಬ... ಎಂಬ ಸಂದೇಹವೂ ಮೂಡದಿರದು ಅಲ್ಲವೇ?

ಅವಳ ಮೇಲಿನ ಸಿಟ್ಟಿ... ಇವರು ನಾಲ್ವರು ಅಟ್ಟಕ್ಕೆ

'ರಾಧಿಕಾ ಪಂಡಿತ್, ಅಂದ್ರಿತಾ ರೇ, ನಿಖಿತಾ, ಹರ್ಷಿಕಾ ಪೂಣಚ್ಚ ... ಚಿತ್ರರಂಗದಲ್ಲಿ ಬಹುಕಾಲ ಉಳಿಯಬಲ್ಲಂಥ ನಟಿಯರು. ಇವರಿಗೆ ಯಾ... ಬಗೆಯ ಅಹಂಕಾರವಿಲ್ಲ, ಉತ್ತಮ ಭವಿಷ್ಯ ಹೊಂದಿದ್ದಾರೆ' ಎಂಬ ಮ... ಹೇಳಿದವರು ಜಗ್ಗೇಶ್. ಇಷ್ಟಕ್ಕೂ ಈ ಹುಡುಗಿಯರು ಇಂಡಸ್ಟ್ರಿಗೆ ಬ... ಎಷ್ಟೋ ವರ್ಷಗಳು ಸಂದಿವೆ. ಇಲ್ಲಿವರೆಗೆ ಈ ಹುಡುಗಿಯರ ಭವಿಷ್ಯದ ... ಸ್ವಭಾವದ ಬಗ್ಗೆ ಗುಣಗಾನ ಮಾಡದ ಜಗ್ಗೇಶ್ ಈಗ ದಿಢೀರಂಥ ಹೀಗೆ ಏ...



ಹೊಗಳಲು ಶುರು ಮಾಡಿದ್ದಾರಲ್ಲ... ಇದರ ಹಿಂದಿರುವ ರಹಸ್ಯವಾ... ಏನು? ಎಂದು ಹುಡುಕುತ್ತಾ ಹೊರಟರೆ ತಕ್ಷಣಕ್ಕೆ ಅದೇಕೋ ... ನೆನಪಾಗುತ್ತಾರೆ. 'ನೀರ್ ದೋಸೆ' ಸಿನಿಮಾ ಸಂದರ್ಭದಲ್ಲಿ ಜಗ್ಗೇಶ್ ... ಜೊತೆ ಭಯಂಕರ ಕಿರಿಕ್ ಮಾಡಿಕೊಂಡಿದ್ದರು ಎಂಬ ವಿಷಯ ನಿ... ಗೊತ್ತಿದೆ. ಸಾಲದೆಂಬಂತೆ ಇತ್ತೀಚೆಗಷ್ಟೇ ಲೋಕಸಭಾ ಚುನಾವ... ರಮ್ಯ ಸೋತಾಗ ಜಗ್ಗೇಶ್ ಏನು ಹೇಳಿದರು? 'ಚುನಾವಣೆಯಲ್ಲಿ ... ಚಿತ್ರರಂಗವನ್ನು ಕಡೆಗಣಿಸಿದ್ದ ರಮ್ಯ ಇದೀಗ ಚುನಾವಣೆಯಲ್ಲಿ ಸೋತ ... ಮತ್ತೆ ಚಿತ್ರರಂಗದತ್ತ ಬರುತ್ತಿದ್ದಾರೆ' ಎಂಬ ಮಾತುಗಳನ್ನಾಡಿದರು. ... ಅರ್ಥಮಾಡಿಕೊಳ್ಳಬೇಕು. ಹೇಗೆ ಜಗ್ಗೇಶ್ ಪ್ರಕಾರ ಈ ಮೇಲ್ಕಾಣಿಸಿದ ಹುಡುಗಿ... ಒಳ್ಳೆಯ ಭವಿಷ್ಯ, ಒಳ್ಳೆಯತನ ಇರುವುದೆಂಬುದರ ಸಡನ್ ಸಂಶೋ... ಜಗ್ಗೇಶ್-ರಮ್ಯಾ ನಡುವೆ ಏನೇ ಜಗಳಗಳಿದ್ದರೂ ಪ್ರೇಕ್ಷಕರಿಗೆ ಮಾತ್ರ ... ಮನರಂಜನೆ, ಏನಂತೀರಿ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com